ಮಂಗಳವಾರ, ಫೆಬ್ರುವರಿ 21, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 52 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
60,961 ▼	17,844 ▼	₹58,298 (ಬೆಂಗಳೂರು)	₹67,700 (ಬೆಂಗಳೂರು)	82.73 ▲



ಎಸ್‌.ಕೆ. ಭಗವಾನ್

ನಿರ್ದೇಶಕ ಭಗವಾನ್ ಇನ್ನಿಲ್ಲ

ಬೆಂಗಳೂರು: ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಎಸ್.ಕೆ.ಭಗವಾನ್ (94) ಸೋಮವಾರ ಬೆಳಗ್ಗೆ ನಿಧನರಾದರು. ಅವರಿಗೆ ಪುತ್ರಿ ಹಾಗೂ ಮೂವರು ಪುತ್ರರು ಇದ್ದಾರೆ.

ವರನಟ ಡಾ.ರಾಜ್‌ಕುಮಾರ್ ಅವರು ನಟಿಸಿದ್ದ 30ಕ್ಕೂ ಹೆಚ್ಚು ಸಿನಿಮಾಗಳನ್ನು ಅವರು ದೊರೆರಾಜ್ ಜೊತೆಗೂಡಿ ನಿರ್ದೇಶಿಸಿದ್ದರು. ಈ ಜೋಡಿ ದೊರೆ-ಭಗವಾನ್ ಎಂದೇ ಖ್ಯಾತಿ ಪಡೆದಿತ್ತು.

ಕಳೆದ 25 ವರ್ಷಗಳಿಂದ ಹೃದಯದ ಸಮಸ್ಯೆಯಿಂದ ಭಗವಾನ್ ಬಳಲುತ್ತಿದ್ದರು. ಡಿಸೆಂಬರ್‌ನಲ್ಲಿ ಅವರಿಗೆ ಶ್ವಾಸಕೋಶದ ಸೋಂಕು ಕಾಣಿಸಿಕೊಂಡಿತ್ತು.

6ನೇ ಪುಟ ನೋಡಿ
ನುಡಿ ನಮನ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಟೆಂಡರ್ ಇಲ್ಲದೇ ಅನುಷ್ಠಾನ • ಒಂದು ಘಟಕಕ್ಕೆ ₹45 ಲಕ್ಷದವರೆಗೆ ವೆಚ್ಚ

ಶುದ್ಧ ನೀರು: ತನಿಖೆಗೆ ಶಿಫಾರಸು

ಪ್ರಯೋಗಾಲಯದ ವರದಿ ಪಡೆದ ವಿವರ			ಟೆಂಡರ್ ಪ್ರಕ್ರಿಯೆ ವಿವರ		
20,761 ವರದಿ ಲಭ್ಯವಿರುವ ಘಟಕಗಳು	2,195 ವರದಿ ಪಡೆಯದ ಘಟಕಗಳು	2,263 ವರದಿಯ ಮಾಹಿತಿಯೇ ಇಲ್ಲದ ಘಟಕಗಳು	19,032 ಟೆಂಡರ್ ಪ್ರಕ್ರಿಯೆ ಮೂಲಕ ಆರಂಭವಾದ ಘಟಕಗಳು	2,606 ಟೆಂಡರ್ ಇಲ್ಲದ ಘಟಕಗಳು	3,581 ಟೆಂಡರ್ ಮಾಹಿತಿಯೇ ಇಲ್ಲದ ಘಟಕಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: 2013-14ರಿಂದ 2020-21ರ ಅವಧಿಯಲ್ಲಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು ಹಾಗೂ ಸಂಸ್ಥೆಗಳ ಮೂಲಕ ನಡೆದಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಅಳವಡಿಕೆ ಮತ್ತು ನಿರ್ವಹಣೆಯಲ್ಲಿನ ಅಕ್ರಮಗಳ ಕುರಿತು ಸಿಐಡಿ ತನಿಖೆ ನಡೆಸುವಂತೆ ವಿಧಾನಮಂಡಲದ ಜಂಟಿ ಸದನ ಸಮಿತಿ ಶಿಫಾರಸು ಮಾಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರತೀ ಘಟಕಗಳ ಸ್ಥಾಪನೆಗೆ ₹ 5 ಲಕ್ಷದಷ್ಟು ವೆಚ್ಚ ಮಾಡಿದ್ದರೆ, ಬಿಬಿಎಂಪಿ ವ್ಯಾಪ್ತಿಯಲ್ಲಿ ₹ 30 ಲಕ್ಷದಷ್ಟು ವೆಚ್ಚ ಮಾಡಲಾಗಿದೆ. ಸರಾಸರಿ ವೆಚ್ಚ ₹ 7.48 ಲಕ್ಷದಷ್ಟಿದ್ದರೆ ಗರಿಷ್ಠ 45 ಲಕ್ಷದವರೆಗೂ ವೆಚ್ಚ ಮಾಡಲಾಗಿದೆ. 12,601 ಘಟಕಗಳ ಅಳವಡಿಕೆಯಲ್ಲಿ ಸರಾಸರಿಗಿಂತಲೂ ಹೆಚ್ಚಿನ ವೆಚ್ಚ ಮಾಡಲಾಗಿದೆ. ಇದನ್ನು ಗಮನಿಸಿದರೆ ಅವ್ಯವಹಾರ ನಡೆದಿರುವಂತೆ ಕಂಡುಬರುತ್ತಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಅಭಯ ಪಾಟೀಲ್ ನೇತೃತ್ವದ ಜಂಟಿ ಸದನ ಸಮಿತಿಯ ವರದಿಯನ್ನು ಸೋಮವಾರ ವಿಧಾನಮಂಡಲದ ಉಭಯ ಸದನಗಳಲ್ಲಿ ಮಂಡಿಸಲಾಯಿತು. ಟೆಂಡರ್ ಪ್ರಕ್ರಿಯೆಯಲ್ಲಿ ಅವ್ಯವಹಾರ, ಹೆಚ್ಚುವರಿ ವೆಚ್ಚ ಮಾಡಿರುವುದು, ನೀರಿನ ಗುಣಮಟ್ಟದ ಕುರಿತು ಪ್ರಯೋಗಾಲಯದ ವರದಿ ಪಡೆಯದೇ ಘಟಕಗಳನ್ನು ಅಳವಡಿಸಿರುವುದು, ಹಲವೆಡೆ ಘಟಕಗಳನ್ನು ಸ್ಥಾಪಿಸಿದ ಬಳಿಕ ನಿರ್ವಹಣೆಗೆ ಕ್ರಮ ಕೈಗೊಳ್ಳದಿರುವುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ಸಮಿತಿ ವರದಿಯಲ್ಲಿ ತಿಳಿಸಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಯೋಜನಾ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ, ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ (ಕಿಯೋನಿಕ್ಸ್) ಹಾಗೂ ರಾಜ್ಯ ಖನಿಜ ನಿಗಮಗಳ ಮೂಲಕ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲಾಗಿದೆ. ಒಟ್ಟು 26,569 ಘಟಕಗಳನ್ನು ಅಳವಡಿಸಲಾಗಿತ್ತು.


5ನೇ ಪುಟ ನೋಡಿ

ಇಲಾಖಾವಾರು ಸ್ಥಾಪಿಸಿರುವ ಘಟಕಗಳ ವಿವರ

ಗ್ರಾಮೀಣಾಭಿವೃದ್ಧಿ ಇಲಾಖೆ	
ಕೆಆರ್‌ಐಡಿಎಲ್	5,945
ಆರ್‌ಡಿಡಬ್ಲ್ಯೂಎಸ್‌ಡಿ	8,785
ಇತರೆ	3,361
ನಗರಾಭಿವೃದ್ಧಿ ಇಲಾಖೆ	
ಬಿಬಿಎಂಪಿ	860
ಡಿಎಂಎ	1,531
ಕೆಯುಡಬ್ಲ್ಯೂಎಸ್‌ಡಿಬಿ	400

ಸಮಾಜ ಕಲ್ಯಾಣ ಇಲಾಖೆ	
ಎಸ್‌ಡಬ್ಲ್ಯುಡಿ	153
ಸಫಾಯಿ ಕರ್ಮಚಾರಿ ನಿಗಮ	25
ತಾಂಡಾ ಅಭಿವೃದ್ಧಿ ನಿಗಮ	574
ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ	248
ಕಿಯೋನಿಕ್ಸ್	502
ಕೆಎಸ್‌ಎಂಸಿಎಲ್	45

'ಸಿದ್ದರಾಮಯ್ಯ ಸರ್ಕಾರ ಅತಿ ಭ್ರಷ್ಟ ಸರ್ಕಾರ'



ಬೆಂಗಳೂರು: 'ಸಿದ್ದರಾಮಯ್ಯ ಸರ್ಕಾರ ಇಡೀ ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರವಾಗಿತ್ತು ಎಂದು ಒಂದಲ್ಲ ಮೂರು ಸಮೀಕ್ಷೆಗಳು ಹೇಳಿದ್ದವು. ಅವರ ಅವಧಿಯಲ್ಲಿ ಟೆಂಡರ್ ಶ್ಯೂರ್ ರಸ್ತೆಗಳಿಗೆ ಅನುಮತಿ ನೀಡುವ ಸಂದರ್ಭದಲ್ಲಿ ಶೇ 48 ರಷ್ಟು ಲಂಚ ಪಡೆಯಲಾಗುತ್ತಿತ್ತು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಸೋಮವಾರ ವಿಧಾನಸಭೆಯಲ್ಲಿ ಉತ್ತರ ನೀಡಿದ ಅವರು, ಭ್ರಷ್ಟಾಚಾರದ ಆಗರವೇ ಆಗಿದ್ದ ಕಾಂಗ್ರೆಸ್ ಪಕ್ಷಕ್ಕೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ' ಎಂದರು.

'ಎಸಿಬಿಯಲ್ಲಿ ದಾಖಲಾಗಿರುವ ಪ್ರಕರಣಗಳು ಸೇರಿ ಎಲ್ಲ ಭ್ರಷ್ಟಾಚಾರದ ಪ್ರಕರಣಗಳನ್ನೂ ಲೋಕಾಯುಕ್ತ ತನಿಖೆಗೆ ಒಪ್ಪಿಸುತ್ತೇವೆ. ಸತ್ಯ ಅಲ್ಲಿಂದಲೇ ಹೊರಬರಲಿದೆ. ತನಿಖೆ ಮುಗಿದ ಬಳಿಕ ಯಾರೆಲ್ಲ ಜೈಲಿಗೆ ಹೋಗುತ್ತಾರೆ ಎನ್ನುವುದನ್ನು ನೋಡಿಯೇ ಬಿಡೋಣ' ಎಂದು ಕಾಂಗ್ರೆಸ್‌ಗೆ ಸವಾಲು ಹಾಕಿದರು.

'ಅವರ ಅಧ್ಯಕ್ಷರು (ಡಿ.ಕೆ.ಶಿವಕುಮಾರ್) ಜೈಲಿಗೆ ಕಳಿಸುತ್ತೇನೆ ಎಂದು ಹೇಳಿದ್ದಾರೆ. ನಾನು ಚಾಲೆಂಜ್ ಮಾಡುತ್ತೇನೆ. ಈಗಲೇ ಅವರು ಯಾವ ದೂರುಗಳಿದ್ದರೂ ಕೊಡಲಿ. ನಾವು ಕೂಡ ಅವರ ವಿರುದ್ಧ ದೂರು ನೀಡುತ್ತೇವೆ. ಮುಂದಿನ ದಿನಗಳಲ್ಲಿ ಯಾರು ಜೈಲಿಗೆ ಹೋಗುತ್ತಾರೆ, ಯಾರು ಕಟಕಟೆಗೆ ಹೋಗುತ್ತಾರೆ ಎನ್ನುವುದು ಗೊತ್ತಾಗುತ್ತದೆ' ಎಂದರು.

5ನೇ ಪುಟ ನೋಡಿ

> ನಾಲ್ಕು ವರ್ಷದಿಂದ ಅಧಿಕಾರದಲ್ಲಿ ಇದ್ದೀರಲ್ಲ. ನಮ್ಮ ಮೇಲಿನ ಆರೋಪಗಳನ್ನು ಆಗ ಯಾಕೆ ಪ್ರಸ್ತಾಪಿಸಲಿಲ್ಲ? ಆಗ ಕಡ್ಲೆಪುರಿ ತಿನ್ನುತ್ತಾ ಇದ್ರಾ
>
> **ಸಿದ್ದರಾಮಯ್ಯ**
> ವಿಧಾನಸಭೆ ವಿರೋಧ ಪಕ್ಷದ ನಾಯಕ

11 ಘಟಕ ಕೆಡವಿದರು!

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ನಿರ್ಮಿಸಿದ್ದ 11 ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಂತರದಲ್ಲಿ ರಸ್ತೆ ವಿಸ್ತರಣೆಗಾಗಿ ಕೆಡವಿ ಹಾಕಿರುವುದನ್ನು ಜಂಟಿ ಸದನ ಸಮಿತಿ ಪತ್ತೆಮಾಡಿದೆ. ತೆರಿಗೆದಾರರ ಹಣ ವ್ಯರ್ಥವಾಗಲು ಕಾರಣರಾದವರ ವಿರುದ್ಧ ಕ್ರಮ ಜರುಗಿಸಿ, ಅವರಿಂದಲೇ ನಷ್ಟ ವಸೂಲಿ ಮಾಡುವಂತೆ ಸಮಿತಿ ಶಿಫಾರಸು ಮಾಡಿದೆ.

ಸಿದ್ಧಾರ್ಥ ಜಮೀನು: ₹708 ಕೋಟಿಗೆ ಖರೀದಿ ಪ್ರಸ್ತಾವ

• ಚಿರಂಜೀವಿ ಕುಲಕರ್ಣಿ

ಬೆಂಗಳೂರು: 'ಕಾಫಿ ಡೇ' ಸಂಸ್ಥಾಪಕ ದಿವಂಗತ ವಿ.ಜಿ.ಸಿದ್ದಾರ್ಥ ಅವರಿಗೆ ಸೇರಿದ, ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿರುವ 4,430 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕರ್ನಾಟಕ ಅರಣ್ಯ ಇಲಾಖೆ ಪ್ರಸ್ತಾವ ಸಿದ್ಧಪಡಿಸಿದೆ.

ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸಾಲದಿಂದ ಪಾರು ಮಾಡಲು ಅರಣ್ಯ ಇಲಾಖೆ ಈ ತಂತ್ರ ಮಾಡಿದೆ ಎಂದು ಪರಿಸರವಾದಿಗಳು ಆರೋಪಿಸಿದ್ದಾರೆ.

ಪ್ರತಿ ಎಕರೆಗೆ ₹ 16 ಲಕ್ಷದಂತೆ ಭೂಸ್ವಾಧೀನದ ಒಟ್ಟು ಮೊತ್ತ ₹ 708 ಕೋಟಿಯಾಗಲಿದೆ ಎಂದು ಅಂದಾಜಿಸಲಾಗಿದೆ. ಸಿದ್ದಾರ್ಥ ಅವರ ಕುಟುಂಬವನ್ನು ಸಾಲದ ಸುಳಿಯಿಂದ ಪಾರು ಮಾಡುವ ಉದ್ದೇಶ ಈ ಪ್ರಸ್ತಾವದ ಹಿಂದಿದೆ ಎಂದು ಹೇಳಲಾಗಿದೆ. ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರು ಈ ಪ್ರಸ್ತಾವಕ್ಕೆ ಅನುಮತಿ ಕೋರಿ ಬರೆದಿರುವ ಪತ್ರವು 'ಪ್ರಜಾವಾಣಿ'ಗೆ ಲಭಿಸಿದೆ.

2020ರ ಫೆ.14ರಂದು ಈ ಪ್ರಸ್ತಾವ ಸಿದ್ಧವಾಗಿದೆ. ಹುಲಿ ಸಂರಕ್ಷಿತ ಪ್ರದೇಶದ ಪಕ್ಕದ ತಣಿಗೆಬೈಲು ಹಾಗೂ ಮುತ್ತೋಡಿಯ ಜಮೀನು ಮಾರಾಟ ಪ್ರಕ್ರಿಯೆಯನ್ನು ಕಾಫಿ ಡೇ ಗ್ರೂಪ್‌ನವರು ಆಗಲೇ ಆರಂಭಿದ್ದಾರೆ.

5ನೇ ಪುಟ ನೋಡಿ



ರಥೋತ್ಸವ ವಿಜಯನಗರ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಕುರುವತ್ತಿಯಲ್ಲಿ ಸೋಮವಾರ ಬಸವೇಶ್ವರ ಹಾಗೂ ಮಲ್ಲಿಕಾರ್ಜುನ ದೇವರ ರಥೋತ್ಸವ ವಿಜೃಂಭಣೆಯಿಂದ ಜರುಗಿತು. ಅಪಾರ ಸಂಖ್ಯೆಯ ಭಕ್ತರು ಸಾಕ್ಷಿಯಾದರು –ಪ್ರಜಾವಾಣಿ ಚಿತ್ರ

ಅಧಿಕಾರಿಗಳ ಕಿತ್ತಾಟಕ್ಕೆ ಸಂಪುಟ ಸಭೆಯಲ್ಲಿ ಅಸಮಾಧಾನ

ರೋಹಿಣಿ, ರೂಪಾಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರ ಎಚ್ಚರಿಕೆ ನೀಡಿದ ಬಳಿಕವೂ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ಡಿ.ರೂಪಾ ಮಧ್ಯದ ಜಟಾಪಟಿ ಸೋಮವಾರವೂ ಸಾಮಾಜಿಕ ಜಾಲ ತಾಣಗಳಲ್ಲಿ ಮುಂದುವರಿಯಿತು.

ಅಧಿಕಾರಿಗಳ ಬೀದಿಜಗಳದಿಂದ ಮುಜುಗರಕ್ಕೆ ಒಳಗಾಗಿರುವ ಸರ್ಕಾರ, ಶಿಸ್ತು ಉಲ್ಲಂಘನೆ, ದುರ್ನಡತೆ, ಸರ್ಕಾರದ ಸೇವಾ ನಿಯಮಗಳನ್ನು ಉಲ್ಲಂಘಿಸಿದ್ದಕ್ಕೆ ಇಬ್ಬರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮುಖ್ಯಕಾರ್ಯದರ್ಶಿಗೆ ಸೂಚಿಸಿದೆ. ಇಬ್ಬರಿಗೂ ನೋಟಿಸ್ ನೀಡಲಾಗಿದೆ.

'ಮುಖ್ಯಕಾರ್ಯದರ್ಶಿ ಇಬ್ಬರನ್ನೂ ಕರೆದು ಮಾತನಾಡಿದ್ದಾರೆ. ಅವರು ನೀಡಿರುವ ದೂರಿನ ಪತ್ರದ ಆಧಾರದಲ್ಲಿ ಕ್ರಮ ಕೈಗೊಳ್ಳಲು ಪರಿಶೀಲಿಸುತ್ತಿದ್ದಾರೆ. ಮಾಧ್ಯಮಗಳಿಂದ ಅಂತರ ಕಾಪಾಡಿಕೊಂಡು, ಶಿಸ್ತು ಕಾಪಾಡುವುದಾಗಿ ಇಬ್ಬರೂ ಒಪ್ಪಿಕೊಂಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿಕ್ರಿಯಿಸಿದರು.

'ಶಾಸಕ ಸಾ.ರಾ. ಮಹೇಶ್ ಜತೆ ಸಿಂಧೂರಿ ಸಂಧಾನಕ್ಕೆ ಯತ್ನಿಸಿದ್ದಾರೆ' ಎಂಬ ಸುದ್ದಿಯನ್ನು ಪ್ರಸ್ತಾಪಿಸಿದ್ದ ರೂಪಾ ಭಾನುವಾರ ಜಾಲತಾಣಗಳಲ್ಲಿ ತೀವ್ರ ವಾಗ್ದಾಳಿ ನಡೆಸಿದ್ದರು. ಅವರಿಗೆ ಸಂಬಂಧಿಸಿದ 20 ಪ್ರಶ್ನೆಗಳಿಗೆ ಉತ್ತರಿಸುವಂತೆ ಸವಾಲು ಹಾಕಿದ್ದರು. ಅದಕ್ಕೆ ಪ್ರತಿಕ್ರಿಯೆ ನೀಡಿದ್ದ ಸಿಂಧೂರಿ, 'ವೈಯಕ್ತಿಕ ಹಗೆ ಸಾಧಿಸುವುದಕ್ಕಾಗಿ ಮಾನಸಿಕ ಸ್ಥಿಮಿತ ಕಳೆದುಕೊಂಡವರಂತೆ ವರ್ತಿಸುತ್ತಿದ್ದಾರೆ. ಮಾನಸಿಕ ಅಸ್ವಸ್ಥತೆಗೆ ಒಳಗಾದರೆ ಅದು ಸಮಾಜಕ್ಕೆ ಬಹುದೊಡ್ಡ ಅಪಾಯಕಾರಿ ಬೆಳವಣಿಗೆ' ಎಂದಿದ್ದರು.

5ನೇ ಪುಟ ನೋಡಿ

ಬಾಗಲಗುಂಟೆ ಠಾಣೆಗೆ ರೋಹಿಣಿ ದೂರು

'ಐಪಿಎಸ್ ಅಧಿಕಾರಿ ಡಿ. ರೂಪಾ ಅವರು ನನ್ನ ವೈಯಕ್ತಿಕ ಫೋಟೊ ಬಳಸಿಕೊಂಡು ಗೌರವಕ್ಕೆ ಧಕ್ಕೆ ತಂದಿದ್ದಾರೆ. ಇಲ್ಲಸಲ್ಲದ ಆರೋಪ ಮಾಡಿ ಮಾನಹಾನಿ ಮಾಡಿದ್ದಾರೆ' ಎಂದು ಆರೋಪಿಸಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರು ಬಾಗಲಗುಂಟೆ ಠಾಣೆಗೆ ದೂರು ನೀಡಿದ್ದಾರೆ.

ಪತಿ ಸುಧೀರ್ ರೆಡ್ಡಿ ಮೂಲಕ ದೂರಿನ ಪ್ರತಿಯನ್ನು ಠಾಣೆಗೆ ತಲುಪಿಸಿರುವ ರೋಹಿಣಿ, 'ಡಿ. ರೂಪಾ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿದ್ದಾರೆ.

ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, 'ದೂರು ಸ್ವೀಕರಿಸಲಾಗಿದ್ದು, ಸದ್ಯಕ್ಕೆ ಎಫ್‌ಐಆರ್ ದಾಖಲಿಸಿಕೊಂಡಿಲ್ಲ. ಕಾನೂನು ತಜ್ಞರ ಅಭಿಪ್ರಾಯ ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದರು.

ಸಂಧಾನ ನಡೆಸಿದ್ದು ನಾನೇ: ಮಾಧುಸ್ವಾಮಿ

'ಶಾಸಕ ಸಾ.ರಾ.ಮಹೇಶ್– ಅಧಿಕಾರಿ ರೋಹಿಣಿ ಸಿಂಧೂರಿ ಮಧ್ಯೆ ಸಂಧಾನ ನಡೆಸಿದ್ದು ನಾನೇ. ಅಧಿವೇಶನದಲ್ಲಿ ಅನಗತ್ಯ ವಿಚಾರ ಪ್ರಸ್ತಾಪಿಸಬಾರದು ಎಂಬ ಕಾರಣಕ್ಕೆ ಇಬ್ಬರನ್ನೂ ಕರೆದು ಮಾತನಾಡಿದೆ' ಎಂದು ಕಾನೂನು ಸಚಿವ ಮಾಧುಸ್ವಾಮಿ ಸಮರ್ಥಿಸಿಕೊಂಡರು.

'ರೂಪಾ, ಸಿಂಧೂರಿ ಅವರದು ವೈಯಕ್ತಿಕ ಜಗಳ ಎಂದು ಸುಮ್ಮನಾಗಿದ್ದೆವು. ಈಗ ಅದು ಬೀದಿ ಜಗಳವಾಗಿದೆ. ಸರ್ಕಾರಕ್ಕೂ ಮುಜುಗರವಾಗಿದೆ. ಇಬ್ಬರ ವಿರುದ್ಧ ಶಿಸ್ತುಕ್ರಮ ಅನಿವಾರ್ಯ' ಎಂದರು.

ಅಧಿಕಾರಿಗಳ ಜಗಳ ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಐಪಿಎಸ್ ಅಧಿಕಾರಿ ಡಿ.ರೂಪಾ ಮಾಡಿರುವ ಆರೋಪಗಳಲ್ಲಿ ಗಂಭೀರ ವಿಷಯ ಮರೆಯಾಗುತ್ತಿದ್ದು, ಈ ನಿಟ್ಟಿನಲ್ಲಿ ತನಿಖೆ ನಡೆಯಬೇಕು’ ಎಂದು ಬೆಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ ಎ.ಪಿ. ರಂಗನಾಥ್ ಆಗ್ರಹಿಸಿದ್ದಾರೆ.

ಈ ಕುರಿತಂತೆ ಹೇಳಿಕೆ ನೀಡಿರುವ ಅವರು, ‘ಪ್ರಾಮಾಣಿಕ ಅಧಿಕಾರಿ ಎಂಬಂತೆ ರೂಪಾ ವರ್ತಿಸುತ್ತಿದ್ದಾರೆ. ಅವರ ಪತಿ ಮುನೀಶ್ ಮೌದ್ಗಿಲ್ ಸರ್ವೆ ಇಲಾಖೆಯಲ್ಲಿ ರೋಹಿಣಿ ಸಿಂಧೂರಿ ಸೂಚಿಸಿದವರಿಗೆ ಕೆಲಸ ಮಾಡಿಕೊಟ್ಟಿದ್ದು, ಭ್ರಷ್ಟಾಚಾರ ನಡೆದಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಹೀಗಾಗಿ ಪ್ರಕರಣದಲ್ಲಿ ಮುನೀಶ್ ಮೌದ್ಗಿಲ್ ಮೇಲೂ ತನಿಖೆ ನಡೆಯಬೇಕು. ಜನರಿಗೆ ಸತ್ಯಾಂಶ ತಿಳಿಯುವಂತಾಗಬೇಕು’ ಎಂದು ಕೋರಿದ್ದಾರೆ.

‘ಪ್ರಾಣ ಬಿಟ್ಟೇವು, ಪಿಂಚಣಿ ಬಿಡೆವು’ ಪ್ರತಿಭಟನಕಾರರ ಘೋಷಣೆ

ಅರೆಬೆತ್ತಲಾಗಿ ನೌಕರರ ಉಪವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಂಚಣಿ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿರುವ ಅನುದಾನಿತ ಶಾಲಾ-ಕಾಲೇಜುಗಳ ನೌಕರರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದಾರೆ.

ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ನೇತೃತ್ವದಲ್ಲಿ ‘ಪ್ರಾಣ ಬಿಟ್ಟೇವು, ಪಿಂಚಣಿ ಬಿಡೆವು’ ಎಂಬ ಘೋಷವಾಕ್ಯದಡಿ ನಡೆಯುತ್ತಿರುವ ಪ್ರತಿಭಟನೆ ಸೋಮವಾರ 137ನೇ ದಿನ ಪೂರೈಸಿತು.

ಉದ್ಯಾನದಲ್ಲಿ ನಿರ್ಮಿಸಿರುವ ತಾತ್ಕಾಲಿಕ ಪೆಂಡಾಲ್‌ನಲ್ಲಿ ಅರೆಬೆತ್ತಲಾಗಿ ಕುಳಿತಿದ್ದ ನೌಕರರು, ಉಪವಾಸ ಸತ್ಯಾಗ್ರಹ ಆರಂಭಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ಅನುದಾನಿತ ಶಾಲಾ ಕಾಲೇಜುಗಳ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅರೆಬೆತ್ತಲಾಗಿ ಕುಳಿತು ಉಪವಾಸ ಸತ್ಯಾಗ್ರಹ ಆರಂಭಿಸಿದರು

‘ನಮ್ಮ ಶಾಂತಿಯುತ ಪ್ರತಿಭಟನೆಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಹೀಗಾಗಿ, ಸೋಮವಾರದಿಂದ 50 ಮಂದಿ ಉಪವಾಸ ಆರಂಭಿಸುತ್ತಿದ್ದೇವೆ. ಹಳೇ ನಿಶ್ಚಿತ ಪಿಂಚಣಿ ಸಿಗುವವರೆಗೂ ಉಪವಾಸ ಕೈಬಿಡುವುದಿಲ್ಲ’ ಎಂದು ಪ್ರತಿಭಟನಕಾರರು ಹೇಳಿದರು.

‘ಅನುದಾನಿತ ಶಾಲೆ-ಕಾಲೇಜುಗಳಲ್ಲಿ ಕೆಲಸ ಮಾಡುತ್ತಿರುವ ಬಹುತೇಕ ನೌಕರರು, ಪಿಂಚಣಿ ಸೌಲಭ್ಯದಿಂದ ವಂಚಿತರಾಗಿದ್ದಾರೆ. ನಿವೃತ್ತಿ ಜೀವನ ಕಷ್ಟಕರವಾಗುವ ಭಯದಲ್ಲಿದ್ದಾರೆ. ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿ ಹಲವು ವರ್ಷಗಳಿಂದ ಪ್ರತಿಭಟನೆ ನಡೆಸಿದರೂ ಸರ್ಕಾರ ಸ್ಪಂದಿಸುತ್ತಿಲ್ಲ’ ಎಂದು ಪ್ರತಿಭಟನಕಾರರು ದೂರಿದರು.

‘ಬೆಳಗಾವಿ ಅಧಿವೇಶನದ ಸಂದರ್ಭದಲ್ಲೂ ಹೋರಾಟ ಮಾಡಲಾಗಿತ್ತು. ಜೊತೆಗೆ, ಸ್ವಾತಂತ್ರ್ಯ ಉದ್ಯಾನದಲ್ಲಿ 137 ದಿನಗಳಿಂದ ಪ್ರತಿಭಟನೆ ನಡೆಸಲಾಗುತ್ತಿದೆ. ಪಿಂಚಣಿ ನೀಡುವುದಾಗಿ ಭರವಸೆ ನೀಡಿದ್ದ ಸರ್ಕಾರ, ಯಾವುದೇ ಅಧಿಕೃತ ಆದೇಶ ಹೊರಡಿಸಿಲ್ಲ’ ಎಂದು ಅವರು ಅಳಲು ತೋಡಿಕೊಂಡರು.

ಕಲಾ ಪ್ರದರ್ಶನ

ಬೆಂಗಳೂರು: ವೈಟ್‌ಫೀಲ್ಡ್ ಆರ್ಟ್ ಕಲೆಕ್ಟಿವ್‌ನಿಂದ ಮಹದೇವಪುರದ ವೈಟ್‌ಫೀಲ್ಡ್ ಮುಖ್ಯರಸ್ತೆಯ ವಿ.ಆರ್ ಬೆಂಗಳೂರಿನಲ್ಲಿ ಮಾರ್ಚ್ 18ರವರೆಗೆ ‘ಎ ಫೈನ್ ಬ್ಯಾಲೆನ್ಸ್’ ಕಲಾ ಪ್ರದರ್ಶನ ನಡೆಯಲಿದೆ.


ಕೃಷಿ ವಿಶ್ವ ವಿದ್ಯಾಲಯದ ಕುಲಪತಿ ಡಾ.ಎಸ್‌.ವಿ.ಸುರೇಶ ಅವರು ವಸ್ತು ಪ್ರದರ್ಶನವನ್ನು ವೀಕ್ಷಿಸಿದರು

‘ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮಾಡಿದರೆ ಆದಾಯ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೈತರು ಆಧುನಿಕತೆಗೆ ತಕ್ಕಂತೆ ಕೃಷಿವಿಧಾನ ಹಾಗೂ ಆಲೋಚನಾ ಕ್ರಮ ಬದಲಾಯಿಸಿಕೊಂಡು ಸುಸ್ಥಿರ ಆದಾಯಗಳಿಸಲು ಮುಂದಾಗಬೇಕು. ಕೃಷಿ ವಿಶ್ವವಿದ್ಯಾಲಯವು ರೈತರಿಗೆ ಬೆನ್ನೆಲುಬಾಗಿ ನಿಲ್ಲುತ್ತದೆ’ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ ಹೇಳಿದರು.

ವಿಶ್ವವಿದ್ಯಾಲಯದ ರೇಷ್ಮೆ ಕೃಷಿ ವಿಭಾಗವು ‘ರೇಷ್ಮೆ ಉಪ ಉತ್ಪನ್ನಗಳು ಮತ್ತು ಮೌಲ್ಯವರ್ಧನೆ’ ತರಬೇತಿ ಹಾಗೂ ವಸ್ತುಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

‘ಕೃಷಿ ಚಟುವಟಿಕೆಯಲ್ಲಿ ದೊರೆಯುವ ಉತ್ಪನ್ನಗಳನ್ನು ರೇಷ್ಮೆ ಬೆಳೆಗಾರರು ಮೌಲ್ಯವರ್ಧನೆ ಮಾಡಬೇಕು. ರೈತ ಉತ್ಪಾದಕ ಕಂಪನಿಗಳ ಮೂಲಕ ಮಾರಾಟ ಮಾಡಿದರೆ, ಲಾಭಗಳಿಸಲು ಸಾಧ್ಯ ಆಗಲಿದೆ’ ಎಂದರು.

‘ಕೋಲಾರ, ಚಿಕ್ಕಬಳ್ಳಾಪುರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ನೀರಿನ ತೀವ್ರ ಅಭಾವವಿದೆ. ಒಣ ಬೇಸಾಯ ಪದ್ಧತಿ ಅನುಸರಿಸುತ್ತಿದ್ದರೂ ರೈತರು ಸುಸ್ಥಿರ ಆಗಿರುವುದಕ್ಕೆ ಅಲ್ಲಿನ ರೈತರು ಅಳವಡಿಸಿಕೊಂಡಿರುವ ಸಮಗ್ರ ಕೃಷಿ ಪದ್ಧತಿಯೇ ಕಾರಣ’ ಎಂದು ಹೇಳಿದರು.

‘ರೇಷ್ಮೆ ಕೃಷಿ ಹಾಗೂ ಹೈನುಗಾರಿಕೆ ಕೃಷಿಕರ ಉಪ ಕಸುಬು. ಈ ಉಪ ಕಸುಬಿನಿಂದ ನಿರಂತರ ಆದಾಯ ಗಳಿಕೆ ಸಾಧ್ಯವಾಗಲಿದೆ. ರೇಷ್ಮೆ ಕೃಷಿಯಲ್ಲಿ ಹುಳು ಸಾಕಣೆ, ರೇಷ್ಮೆ ನೂಲು ಹಾಗೂ ಬಟ್ಟೆ ನೇಯ್ಗೆಯ ಹೊರತಾಗಿ ಇನ್ನೂ ಅನೇಕ ಉಪ ಕಸುಬುಗಳನ್ನು ಕೈಗೊಳ್ಳಲು ವಿಪುಲ ಅವಕಾಶಗಳಿವೆ’ ಎಂದರು.

ಡೀನ್ ಡಾ.ಎನ್.ಬಿ. ಪ್ರಕಾಶ್, ಶಿಕ್ಷಣ ನಿರ್ದೇಶಕ ಡಾ.ಕೆ.ಸಿ. ನಾರಾಯಣಸ್ವಾಮಿ, ಡಾ.ಎಚ್.ಸಿ. ಪ್ರಕಾಶ್, ಡಾ.ಸಿದ್ದಯ್ಯ ಉಪಸ್ಥಿತರಿದ್ದರು.

ಗಮನ ಸೆಳೆದ ವಸ್ತುಪ್ರದರ್ಶನ: ಹಿಪ್ಪು ನೇರಳೆ ಚಹಾ, ಹಿಪ್ಪು ನೇರಳೆ ಹಣ್ಣಿನ ಉಪ್ಪಿನಕಾಯಿ, ಜಾಮ್, ಚಟ್ನಿ, ಪಾನೀಯ, ವೈನ್, ಹಿಪ್ಪು ನೇರಳೆ ಎಲೆಯ ಪಕೋಡ, ಬಜ್ಜಿ ಹಾಗೂ ರೇಷ್ಮೆ ಗೂಡಿನಿಂದ ಹೂದಾನಿ, ಹೂವಿನ ಗುಚ್ಛಗಳು, ಕಿವಿಯೋಲೆ, ಹೂವಿನ ಕುಂಡ ಮತ್ತು ವಿವಿಧ ರೀತಿಯ ಹಾರಗಳು ವಸ್ತು ಪ್ರದರ್ಶನದಲ್ಲಿ ಗಮನ ಸೆಳೆದವು.

ಕ್ಷೇಮಕುಶಲ ಓದಿರಿ

ಸಂಕ್ಷಿಪ್ತ ಸುದ್ದಿ


ಅಮೃತ ಮಹೋತ್ಸವಕ್ಕೆ ಚಾಲನೆ ಇಂದು

ಬೆಂಗಳೂರು: ‘ರಾಷ್ಟ್ರೀಯ ಅಣುವ್ರತ ಸಮಿತಿಯು 75 ವರ್ಷಗಳನ್ನು ಪೂರ್ಣಗೊಳಿಸಿದ್ದು, ಈ ವರ್ಷವನ್ನು ಅಮೃತ ಮಹೋತ್ಸವವನ್ನಾಗಿ ಆಚರಣೆ ಮಾಡಲಾಗುವುದು’ ಎಂದು ಸಮಿತಿಯ ಅಧ್ಯಕ್ಷ ಶಾಂತಿಲಾಲ್ ಪೌರಾಲ್ ಮಾಹಿತಿ ನೀಡಿದರು.

‘2023-24ನೇ ಸಾಲಿನಲ್ಲಿ ವಿದ್ಯಾರ್ಥಿಗಳ ಉನ್ನತಿಗೆ ಮತ್ತು ಉತ್ತಮ ನಾಗರಿಕರನ್ನಾಗಿ ರೂಪಿಸುವ ಉದ್ದೇಶದಿಂದ ಜಾಗೃತಿ ರ‍್ಯಾಲಿ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಫೆ. 21ರಂದು ಚಂದ್ರಾ ಬಡಾವಣೆಯ ಶಿವಕುಮಾರ್ ಸ್ವಾಮೀಜಿ ಅವರ ಸಿದ್ಧಗಂಗಾ ವಿದ್ಯಾಪೀಠ ಟ್ರಸ್ಟ್‌ನಲ್ಲಿ ಅಮೃತ ಮಹೋತ್ಸವ ವರ್ಷಾಚರಣೆಯ ಲಾಂಛನ ಮತ್ತು ಸಮಿತಿಯ ನೂತನ ಹೆಸರಿನಲ್ಲಿ ಅಣುವಿಭ ಹೆಸರಿನ ಸಂಸ್ಥೆಗೆ ಚಾಲನೆ ನೀಡಲಾಗುವುದು’ ಎಂದರು.

ಬೋನಿಗೆ ಬಿದ್ದ ಚಿರತೆ



ದಾಬಸ್‌ಪೇಟೆ: ತ್ಯಾಮಗೊಂಡ್ಲು ಹೋಬಳಿ ಮಣ್ಣೆ ಗ್ರಾಮದ ಸುತ್ತಮುತ್ತ ಕೆಲವು ತಿಂಗಳಿಂದ ಜನರ ನಿದ್ದೆಗೆಡಿಸಿದ್ದ ಚಿರತೆಯು ಅರಣ್ಯ ಇಲಾಖೆ ಅಳವಡಿಸಿದ್ದ ಬೋನಿಗೆ ಬಿದ್ದಿದೆ. 3 ವರ್ಷದ ಗಂಡು ಚಿರತೆ ಸಾಕುಪ್ರಾಣಿಗಳ ಮೇಲೆ ದಾಳಿ ನಡೆಸುತ್ತಿತ್ತು. ಚಿರತೆಯೊಂದು ಆಗಾಗ ಸಾರ್ವಜನಿಕರ ಕಣ್ಣಿಗೆ ಬೀಳುತ್ತಿತ್ತು. ಎರಡು ಮೂರು ದಿನಗಳ ಹಿಂದೆ ಮನೆ ಪಕ್ಕದಲ್ಲಿ ಕಟ್ಟಿದ ಕರುವನ್ನು ಎಳೆದುಕೊಂಡು ಹೋಗಿತ್ತು.

ಇದರಿಂದ ಭಯಬೀತರಾಗಿದ್ದ ಗ್ರಾಮಸ್ಥರು, ಅರಣ್ಯ ಇಲಾಖೆ ಗಮನಕ್ಕೆ ತಂದಿದ್ದರು. ಚಿರತೆ ಕರು ಎಳೆದುಕೊಂಡು ಹೋದ ಸ್ಥಳದಲ್ಲಿಯೇ ಅರಣ್ಯ ಇಲಾಖೆ ಸಿಬ್ಬಂದಿ ಬೋನು ಇರಿಸಿದ್ದರು. ಮರುದಿನವೇ ಚಿರತೆ ಬೋನಿಗೆ ಬಿದ್ದಿದೆ.



‘ಬಿ’ ಖಾತಾ ಸ್ವತ್ತು ತೆರಿಗೆ ಇಳಿಕೆ

ಬೆಂಗಳೂರು: ಇನ್ನು ಮುಂದೆ ಬೆಂಗಳೂರು ನಗರದಲ್ಲಿ ‘ಎ’ ಖಾತಾ ಮತ್ತು ‘ಬಿ’ ಖಾತಾಗಳ ಸ್ವತ್ತು ತೆರಿಗೆ ಒಂದೇ ರೀತಿಯಲ್ಲಿರಲಿದ್ದು, ದುಪ್ಪಟ್ಟು ತೆರಿಗೆ ಪಾವತಿಸುತ್ತಿದ್ದ ಸ್ವತ್ತುಗಳ ಮಾಲೀಕರಿಗೆ ಇದರಿಂದ ಹೊರೆ ತಗ್ಗಲಿದೆ. ಇದೇ ಅಧಿವೇಶನದಲ್ಲಿ ತಿದ್ದುಪಡಿ ಮಸೂದೆ ಮಂಡಿಸಲು ಸೋಮವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

‘ಬೆಂಗಳೂರು ನಗರದಲ್ಲಿ ಕಂದಾಯ ನಿವೇಶನಗಳಲ್ಲಿ ಲಕ್ಷಾಂತರ ಮಂದಿ ಮನೆಗಳನ್ನು ಕಟ್ಟಿಕೊಂಡಿದ್ದು, ಅದಕ್ಕೆ ದುಪ್ಪಟ್ಟು ತೆರಿಗೆ ವಸೂಲಿ ಮಾಡಲಾಗುತ್ತಿತ್ತು. ಉದಾಹರಣೆಗೆ ‘ಎ’ ಖಾತಾದಲ್ಲಿರುವವರು ₹100 ತೆರಿಗೆ ಪಾವತಿಸುತ್ತಿದ್ದರೆ, ‘ಬಿ’ ಖಾತಾದಲ್ಲಿ ಮನೆ ಕಟ್ಟಿಕೊಂಡವರು ₹200 ಪಾವತಿಸುತ್ತಿದ್ದರು. ಇನ್ನು ಮುಂದೆ ‘ಎ’ ಮತ್ತು ‘ಬಿ’ ಖಾತಾದಾರರಿಂದ ಒಂದೇ ಪ್ರಕಾರ ತೆರಿಗೆ ವಸೂಲಿ ಮಾಡಲಾಗುವುದು. ಈ ಕ್ರಮದಿಂದ ಲಕ್ಷಾಂತರ ‘ಬಿ’ ಖಾತಾದಾರರಿಗೆ ಅನುಕೂಲವಾಗಲಿದೆ ಎಂದು ಕಂದಾಯ ಸಚಿವ ಆರ್.ಅಶೋಕ ‘ಪ್ರಜಾವಾಣಿ’ಗೆ ತಿಳಿಸಿದರು.

‘ಬಿ’ ಖಾತಾ ಹೊಂದಿರುವ ನಿವಾಸಿಗಳಿಗೆ ತೆರಿಗೆ ಹೊರೆಯೂ ಕಡಿಮೆ ಆಗಲಿದೆ . ಬಿಬಿಎಂಪಿ ವ್ಯಾಪ್ತಿಯಲ್ಲಿ ಸುಮಾರು 6 ಲಕ್ಷಕ್ಕೂ ಹೆಚ್ಚು ‘ಬಿ’ ಖಾತಾ ಸ್ವತ್ತುಗಳಿವೆ ಎಂದು ಅಂದಾಜು ಮಾಡಲಾಗಿದೆ.

ಅಂತಿಮ ಹಂತ ತಲುಪಿದ ಮೆಟ್ರೊ ರೈಲು ಮಾರ್ಗದ ವಿಸ್ತರಣೆ ಕಾಮಗಾರಿ

ಕೆಂಗೇರಿ–ಚಲ್ಲಘಟ್ಟ: ಜೂನ್‌ನಲ್ಲಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹುದಿನಗಳಿಂದ ಬಾಕಿ ಉಳಿದಿರುವ ಕೆಂಗೇರಿ–ಚಲ್ಲಘಟ್ಟ ನಡುವಿನ ಮೆಟ್ರೊ ರೈಲು ಮಾರ್ಗದ ವಿಸ್ತರಣೆ ಕಾಮಗಾರಿ ಕೊನೆಗೂ ಅಂತಿಮ ಹಂತಕ್ಕೆ ತಲುಪಿದ್ದು, ಜೂನ್‌ನಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ.

ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆ ತನಕ ಇದ್ದ ನೇರಳೆ ಮಾರ್ಗದಲ್ಲಿ 7.5 ಕಿಲೋ ಮೀಟರ್ ವಿಸ್ತರಣೆಯನ್ನು 2021ರ ಆಗಸ್ಟ್‌ನಲ್ಲಿ ಮಾಡಲಾಗಿದ್ದು, ಸದ್ಯ ಕೆಂಗೇರಿ ತನಕ ರೈಲುಗಳು ಕಾರ್ಯಾಚರಣೆ ಮಾಡುತ್ತಿವೆ. ಅದನ್ನು ಚಲ್ಲಘಟ್ಟ ತನಕ ವಿಸ್ತರಣೆ ಮಾಡುವ ಕಾಮಗಾರಿ ಪ್ರಗತಿಯಲ್ಲಿದೆ. 2 ಕಿಲೋ ಮೀಟರ್ ವಿಸ್ತರಣೆ ಮಾರ್ಗ ಎರಡು



ವರ್ಷಗಳಿಂದ ಬಾಕಿ ಉಳಿದುಕೊಂಡಿದೆ.

ಮೆಟ್ರೊ ಯೋಜನೆಯ ಒಂದು ಮತ್ತು ಎರಡನೇ ಹಂತದಲ್ಲಿ ಚಲ್ಲಘಟ್ಟದಲ್ಲಿ ಅತ್ಯಂತ ಚಿಕ್ಕ ನಿಲ್ದಾಣ ನಿರ್ಮಾಣವಾಗುತ್ತಿದೆ. 10 ಪಿಲ್ಲರ್‌ಗಳನ್ನು ಅಳವಡಿಸಲಾಗಿದ್ದು, ನೆಲಮಹಡಿಯಲ್ಲೇ ಟಿಕೆಟ್ ಕೌಂಟರ್‌ಗಳು ಮತ್ತು ಮೊದಲ ಅಂತಸ್ತಿನಲ್ಲೇ ರೈಲ್ವೆ ಪ್ಲಾಟ್‌ಫಾರ್ಮ್ ನಿರ್ಮಾಣವಾಗಿದೆ.

ಸದ್ಯ ಬಿಎಂಆರ್‌ಸಿಎಲ್ ಗಮನ ವೈಟ್‌ಫೀಲ್ಡ್‌ಗೆ ಮೆಟ್ರೊ ರೈಲು ಓಡಿಸುವ ಕಡೆ ಕೇಂದ್ರೀಕೃತವಾಗಿದೆ. ಬೈಯಪ್ಪನಹಳ್ಳಿಯಿಂದ ವೈಟ್‌ಫೀಲ್ಡ್ ತನಕ ಮೆಟ್ರೊ ರೈಲುಗಳ ಸಂಚಾರ ಆರಂಭವಾದ ಬಳಿಕ ಬೇರೆ ಕಡೆ ಗಮನ ಹರಿಸಲು ಅಧಿಕಾರಿಗಳು ನಿರ್ಧರಿಸಿದ್ದಾರೆ.

2022ರ ಮಾರ್ಚ್‌ನಲ್ಲೇ ಚಲ್ಲಘಟ್ಟ ತನಕ ಮೆಟ್ರೊ ರೈಲುಗಳು ಸಂಚರಿಸಬೇಕಿತ್ತು. ಆದರೆ, ಭೂಸ್ವಾಧೀನ ತೊಡಕು, ನೈಸ್ ರಸ್ತೆಯ ಮೇಲೆ ಎತ್ತರಿಸಿದ ಮಾರ್ಗ ನಿರ್ಮಾಣ ಕಾಮಗಾರಿ ಸೇರಿ ಹಲವು ಕಾರಣಗಳಿಂದ ವಿಳಂಬವಾಗಿದೆ ಎನ್ನುತ್ತಾರೆ ಅಧಿಕಾರಿಗಳು.

‘ಸಿಗ್ನಲಿಂಗ್, ವಿದ್ಯುದ್ದೀಕರಣ ಮತ್ತು ನಿಲ್ದಾಣಗಳಲ್ಲಿನ ಸಣ್ಣಪುಟ್ಟ ಕಾಮಗಾರಿ ಬಾಕಿ ಇದೆ. ಜೂನ್‌ನಲ್ಲಿ ಈ ಮಾರ್ಗದಲ್ಲಿ ಮೆಟ್ರೊ ರೈಲುಗಳ ವಾಣಿಜ್ಯ ಸಂಚಾರ ಆರಂಭಿಸಲು ಉದ್ದೇಶಿಸಲಾಗಿದೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

15ರ ಬಳಿಕ ವೈಟ್ ಫೀಲ್ಡ್‌ಗೆ ಮೆಟ್ರೊ

ವೈಟ್‌ಫೀಲ್ಡ್–ಕೆ.ಆರ್.ಪುರ ನಡುವಿನ ಮೆಟ್ರೊ ರೈಲು ಮಾರ್ಗದ ಕಾಮಗಾರಿ ಕೂಡ ಅಂತಿಮ ಹಂತದಲ್ಲಿದ್ದು, ಮಾರ್ಚ್ 15ರ ನಂತರ ರೈಲುಗಳ ವಾಣಿಜ್ಯ ಸಂಚಾರ ಆರಂಭವಾಗಲಿದೆ ಎಂದು ಅಂಜುಂ ಪರ್ವೇಜ್ ತಿಳಿಸಿದರು.

ಆ ಬಳಿಕ ಜೂನ್ ವೇಳೆಗೆ ಕೆ.ಆರ್.ಪುರ–ಬೈಯಪ್ಪನಹಳ್ಳಿ ನಡುವೆಯೂ ರೈಲುಗಳ ಸಂಚಾರ ಆರಂಭವಾಗಲಿದೆ. ಈ ವರ್ಷದ ಮಧ್ಯದಲ್ಲಿ ಚೆಲ್ಲಘಟ್ಟದಿಂದ ವೈಟ್‌ಫೀಲ್ಡ್ ತನಕ ನೇರಳೆ ಮಾರ್ಗದಲ್ಲಿ ರೈಲುಗಳು ಕಾರ್ಯಾಚರಣೆಗೊಳ್ಳಲಿವೆ ಎಂದರು.

ಆರ್.ವಿ.ರಸ್ತೆ–ಬೊಮ್ಮಸಂದ್ರ ನಡುವಿನ ಮೆಟ್ರೊ ರೈಲು ಮಾರ್ಗವೂ ಸೆಪ್ಟೆಂಬರ್‌ನಲ್ಲಿ ಸಾರ್ವಜನಿಕ ಸೇವೆಗೆ ಲಭ್ಯವಾಗಲಿದೆ. ಒಟ್ಟಾರೆ ಈ ವರ್ಷದ ಅಂತ್ಯದ ವೇಳೆಗೆ ಹೆಚ್ಚುವರಿ 40 ಕಿಲೋ ಮೀಟರ್ ಮೆಟ್ರೊ ರೈಲು ಮಾರ್ಗ ಸಾರ್ವಜನಿಕರಿಗೆ ದೊರಕಲಿದೆ ಎಂದು ಹೇಳಿದರು.

ಗ್ರಾಮೀಣ ರಸ್ತೆ ಅಭಿವೃದ್ಧಿಗೆ ₹ 222 ಕೋಟಿ

ಬೆಂಗಳೂರು: ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಮೂರನೇ ಹಂತದಲ್ಲಿ 230 ಕಿ.ಮೀ ರಸ್ತೆ, 585.83 ಮೀಟರ್ ಉದ್ದದ ಸೇತುವೆ ನಿರ್ಮಾಣಕ್ಕೆ ₹222 ಕೋಟಿ ಬಿಡುಗಡೆ ಮಾಡಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಸೋಮವಾರ ನಡೆದ ಸಚಿವ ಸಂಪುಟದ ಇತರೆ ತೀರ್ಮಾನಗಳು ಹೀಗಿವೆ.

- ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ 10 ಕ್ರಿಮಿನಲ್ ಮೊಕದ್ದಮೆಗಳು ವಾಪಸ್
- ಬಿಎಂಟಿಸಿಗೆ 20 ಎಲೆಕ್ಟ್ರಿಕ್ ಮಿನಿ ಬಸ್ ಖರೀದಿಸಲು ₹19.13 ಕೋಟಿ ನೆರವು
- ಬೆಂಗಳೂರು ಗಾಲ್ಫ್ ಸಂಸ್ಥೆಗೆ ಸ್ಯಾಂಕಿ ರಸ್ತೆಯಲ್ಲಿ ಲೋಕೋಪಯೋಗಿ ಇಲಾಖೆಯ 59.18 ಎಕರೆ ಜಾಗದ ಲೀಸ್ ಮುಂದುವರಿಕೆ.
- ಕಲ್ಯಾಣ ಕರ್ನಾಟಕ ಭಾಗದ ಐದು ವಸತಿ ಶಾಲಾ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ₹ 75 ಕೋಟಿ.
- ಕರ್ನಾಟಕ ಸಹಕಾರ ಸೇವೆ (ವೃಂದ ಮತ್ತು ನೇಮಕಾತಿ ನಿಯಮಗಳು 2023)ಕ್ಕೆ ಅನುಮೋದನೆ.
- ವಿದ್ಯುತ್ ಮಗ್ಗ ನೇಕಾರರು ಮತ್ತು ಮಗ್ಗ ಪೂರ್ವ ಘಟಕಗಳ ಕಾರ್ಮಿಕರಿಗೆ ವಾರ್ಷಿಕ ₹ 5,000 ನೆರವು ನೀಡಲು, ನೇಯ್ಗೆ ಉದ್ದೇಶಕ್ಕೆ ಸಹಕಾರಿ ಬ್ಯಾಂಕುಗಳು, ಸಂಘಗಳ ಮೂಲಕ ₹2 ಲಕ್ಷವರೆಗೆ ಶೂನ್ಯಬಡ್ಡಿಯಲ್ಲಿ ಸಾಲ ಒದಗಿಸುವ ಆದೇಶಕ್ಕೆ ಅನುಮೋದನೆ.

‘ಶಿವಮೊಗ್ಗ ವಿಮಾನ ನಿಲ್ದಾಣ: ಕುವೆಂಪು ಅಥವಾ ಶಿವಪ್ಪ ನಾಯಕ ಹೆಸರು’

ಬೆಂಗಳೂರು: ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ರಾಷ್ಟ್ರಕವಿ ಕುವೆಂಪು ಅಥವಾ ಕೆಳದಿಯ ಶಿವಪ್ಪ ನಾಯಕ ಅವರ ಹೆಸರಿಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಸೋಮವಾರ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಕುವೆಂಪು ಹೆಸರು ಇಡಬಹುದು ಎಂದು ಬಿ.ಎಸ್.ಯಡಿಯೂರಪ್ಪ ಅವರ ಸಲಹೆ ಸಂಪುಟ ಸಭೆಯಲ್ಲಿ ಚರ್ಚೆಗೆ ಬಂದಿತು. ಆಗ ಕೆಳದಿಯ ಶಿವಪ್ಪನಾಯಕರ ಹೆಸರೂ ಪ್ರಸ್ತಾಪವಾಯಿತು ಎಂದು ಮೂಲಗಳು ತಿಳಿಸಿವೆ.

ಇದೇ 27ರಂದು ಪ್ರಧಾನಿ ನರೇಂದ್ರ ಮೋದಿ ಅವರು ವಿಮಾನನಿಲ್ದಾಣ ಉದ್ಘಾಟಿಸುವರು. ಆ ದಿನವೇ ಹೆಸರು ಪ್ರಕಟಿಸುವ ಸಾಧ್ಯತೆಗಳಿವೆ.

‘ರಾಜಭಾಷಾ ಆಯೋಗಕ್ಕೆ ಶಾಸನಾತ್ಮಕ ಸ್ಥಾನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾನ್ಯ ಜನರಿಗೂ ಸ್ಥಳೀಯ ಭಾಷೆಗಳಲ್ಲಿ ಕಾನೂನು ಜ್ಞಾನ ಮೂಡಿಸಲು ಶ್ರಮಿಸುತ್ತಿರುವ ‘ರಾಜಭಾಷಾ (ವಿಧಾಯೀ) ಆಯೋಗ’ಕ್ಕೆ ಇದೇ ಅಧಿವೇಶನದಲ್ಲಿ ಶಾಸನಾತ್ಮಕ ಸ್ಥಾನ ಕಲ್ಪಿಸಲಾಗುವುದು ಎಂದು ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ರಾಜಭಾಷಾ ಆಯೋಗ ಹಾಗೂ ಭಾಷಾಂತರ ನಿರ್ದೇಶನಾಲಯ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಮತ್ತು ರಾಜ್ಯಗಳ 74 ಅಧಿನಿಯಮಗಳ ಕನ್ನಡ ಆವೃತ್ತಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

ರಾಜಭಾಷಾ ಆಯೋಗ 1973ರಲ್ಲೇ ಸ್ಥಾಪನೆಯಾದರೂ, ಇತರೆ ಆಯೋಗಗಳಂತೆ ಅದಕ್ಕೆ ಶಾಸನಾತ್ಮಕ ಸ್ಥಾನ ಇರಲಿಲ್ಲ. ಅದಕ್ಕಾಗಿ, ಈ ಅಧಿವೇಶನದಲ್ಲೇ ಮಸೂದೆ ಮಂಡಿಸಲಾಗುತ್ತಿದೆ ಎಂದರು.

ಸಂವಿಧಾನ ರಚನೆಯ ಉದ್ದೇಶ ಸಫಲವಾಗಲು ಎಲ್ಲರೂ ಕಾನೂನು ಪಾಲನೆ ಮಾಡಬೇಕಿದೆ. ಹಿಂದೆಲ್ಲ ಆಳುವ ವರ್ಗಕ್ಕೆ ಕಾನೂನು ಗೊತ್ತಿದ್ದರೆ ಸಾಕು, ಇಂಗ್ಲಿಷ್‌ನಲ್ಲಿ ವಾದ ಮಾಡುವ ವಕೀಲರು ದೊಡ್ಡವರು ಎನ್ನುವ ಮನೋಭಾವ ಈಗ ಇಲ್ಲ. ಆಯೋಗ ಸ್ಥಳೀಯ ಭಾಷೆಗಳಲ್ಲಿ ಕಾನೂನುಗಳನ್ನು ಭಾಷಾಂತರಿಸುತ್ತಿದೆ. ಸಾಮಾನ್ಯ ಜನರಿಗೂ ಕಾನೂನಿನ ತಿಳಿವಳಿಕೆ ಮೂಡಿಸಲಾಗುತ್ತಿದೆ. ಇದರಿಂದ ಅಪರಾಧ ಚಟುವಟಿಕೆಗಳ ಕಡಿವಾಣಕ್ಕೂ ಸಹಕಾರಿಯಾಗಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಶಾಸಕ ದಿನಕರ ಶೆಟ್ಟಿ, ರಾಜಭಾಷಾ ಆಯೋಗದ ಅಧ್ಯಕ್ಷ ಜಿ.ಶ್ರೀಧರ್, ಭಾಷಾಂತರ ನಿರ್ದೇಶನಾಲಯದ ನಿರ್ದೇಶಕ ಎಂ.ವೆಂಕಟೇಶ್ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ವಿದ್ಯಾರ್ಥಿಗಳ ಸ್ವಾಗತ ಸಮಾರಂಭ: ಉದ್ಘಾಟನೆ: ಮುನಿವೆಂಕಟಪ್ಪ, ಎನ್. ಮಹೇಶ್ ಬಾಬು, ಭಾಷಣಕಾರ: ಬಿ.ಸಿ. ಮೈಲಾರಪ್ಪ, ಅಧ್ಯಕ್ಷತೆ: ಸಿ. ಸೋಮಶೇಖರ್, ಆಯೋಜನೆ: ಸಮಾಜಶಾಸ್ತ್ರ ವಿಭಾಗ, ಸ್ಥಳ: ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ಸಿ.ಜಿ.ಕೆ. ರಾಷ್ಟ್ರೀಯ ರಂಗೋತ್ಸವ: ಕಿರು ಚಿತ್ರ: ‘ನಮ್ ಶೆಡ್ಡು’, ನಿರ್ದೇಶನ: ಲಹರಿ ಮತ್ತು ಯಶ್ವಂತ್, ‘ಚಕ್ರವ್ಯೂಹ’, ನಿರ್ದೇಶನ: ರವಿಕಿರಣ್ ರಾಜೇಂದ್ರನ್ (ಪುನೀತ್ ರಾಜ್‌ಕುಮಾರ್ ವೇದಿಕೆ), ‘ಕವಿಗೋಷ್ಠಿ’ ಅಧ್ಯಕ್ಷತೆ: ಪ್ರತಿಭಾ ನಂದಕುಮಾರ್, ರವಿಕುಮಾರ್ ಟೆಲೆಕ್ಸ್, ಹುಲಿಕುಂಟೆ ಮೂರ್ತಿ, ಸುಜಾತಾ ಕೆ., ಮಧುಮತಿ ಬಿ.ಎಸ್., ಜ್ಯೋತಿ ಪಿ. ಹೆರಗು, ಪಂಚಮಿ, (ಆ.ನ. ರಮೇಶ್ ವೇದಿಕೆ), ‘ಪದ್ಮಾವತಿ ಕಾಳಗ’ ತಾಳಮದ್ದಳೆ: ನಿರ್ದೇಶನ: ಕೃತಿ ಆರ್. ಪುರಪ್ಪೇಮನೆ, (ವಿ. ಚನ್ನಪ್ಪ ವೇದಿಕೆ), ‘ಶೂದ್ರ ಶಿವ’ ನಾಟಕ ಪ್ರದರ್ಶನ: ನಿರ್ದೇಶನ: ವಿದ್ದು ಉಚ್ಚಿಲ್, (ಡಿ. ಕೆ. ಚೌಟ ವೇದಿಕೆ), ಆಯೋಜನೆ: ರಂಗನಿರಂತರ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 4ರಿಂದ

ಪ್ರವಚನ ವಾಹಿನಿ ಕಾರ್ಯಕ್ರಮ: ‘ಚಿದಾನಂದ ಸವಾಯಿ ವ್ಯಾಖ್ಯಾನ’ ಕುರಿತು ಉಪನ್ಯಾಸ: ಲಕ್ಷ್ಮೀಶ್ ಭಟ್ಟ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ದೇವಿಗೆ ವಿಶೇಷ ಅಲಂಕಾರ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸ್ಥಳ: ಶ್ರೀನಿರ್ವಾಣಿ ಭಗವತಿ ಸೇವಾ ಮಂಡಳಿ, ಕುರುಹಿನಶೆಟ್ಟಿ, ಶ್ರೀರಾಮ ಭಜನಾ ಮಂದಿರ, ಎಂ.ಆರ್. ಲೇನ್, ಮನವರ್ತಿಪೇಟೆ, ಸಂಜೆ 6.30

‘ರಾಘವೇಂದ್ರ ಗುರುಸಾರ್ವಭೌಮರ ಆಕೃತಿ ವೈಭವ’ ಪ್ರವಚನ: ಉಪನ್ಯಾಸ: ಜಯತೀರ್ಥಾಚಾರ್ ಹೊಳಲಗುಂದ, ಆಯೋಜನೆ ಮತ್ತು ಸ್ಥಳ: ವಿಜಯ ಮಧ್ವ ಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30





ಎನ್‌ಜಿಟಿ ನಿಯಮ: ಬಿಡಬ್ಲ್ಯುಎಸ್‌ಎಸ್‌ಬಿಯ 31 ಎಸ್‌ಟಿಪಿಗಳಲ್ಲಿ 8 ಮಾತ್ರ ಪಾಸ್

ಮಾನದಂಡ ಅನುಸರಿಸದ ಎಸ್‌ಟಿಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬಿಡಬ್ಲ್ಯುಎಸ್‌ಎಸ್‌ಬಿ ನಿರ್ವಹಣೆ ಮಾಡುತ್ತಿರುವ 31 ಎಸ್‌ಟಿಪಿಗಳಲ್ಲಿ 8 ಮಾತ್ರ ನಿಯಮಗಳಂತೆ ತ್ಯಾಜ್ಯ ನೀರಿನ ಸಂಸ್ಕರಣೆ ಮಾಡುತ್ತಿದ್ದು, ಉಳಿದ ಎಸ್‌ಟಿಪಿಗಳು ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ) ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮಗಳನ್ನು ಮೀರಿವೆ ಎಂದು ಆ್ಯಕ್ಷನ್ ಏಡ್ ಸಂಸ್ಥೆ ವರದಿ ತಿಳಿಸಿದೆ.

ಬಿಡಬ್ಲ್ಯುಎಸ್‌ಎಸ್‌ಬಿಯ ವೆಬ್ ಸೈಟ್‌ನಲ್ಲೇ ದಾಖಲಾಗಿರುವ ಎಸ್‌ಟಿಪಿಗಳ ಅಂಕಿ–ಅಂಶಗಳನ್ನು 45 ದಿನ ಅನುಸರಿಸಿ, ಅವುಗಳ ಅಧ್ಯಯನ ವರದಿಯನ್ನು ಸಂಸ್ಥೆ ಸಿದ್ಧಪಡಿಸಿದೆ. 31 ಎಸ್‌ಟಿಪಿಗಳಲ್ಲಿ ಪ್ರತಿದಿನ 1042.5 ದಶಲಕ್ಷ ಲೀಟರ್ ತ್ಯಾಜ್ಯ ನೀರನ್ನು ಸಂಸ್ಕರಿಸಲಾಗುತ್ತಿದೆ. 2022ರ ನ.1ರಿಂದ ಡಿ.15ವರೆಗೆ ಅಧ್ಯಯನ ಮಾಡಲಾಗಿದೆ. ನೀರಿನ ಸಂಸ್ಕರಣೆಯ ಗುಣಮಟ್ಟವನ್ನು ಅರಿಯಲು ಆರು ಮಾನದಂಡಗಳನ್ನು ತುಲನೆ ಮಾಡಲಾಗಿದೆ.

ಕೆಮಿಕಲ್ ಆಕ್ಸಿಜನ್ ಡಿಮ್ಯಾಂಡ್ (ಸಿಒಡಿ), ಬಯೊಲಾಜಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ), ಪೊಟೆನ್ಷಿಯಲ್ ಹೈಡ್ರೋಜನ್ (ಪಿಎಚ್), ಟೋಟಲ್ ಸಸ್ಪೆಂಡೆಡ್ ಸಾಲಿಡ್ಸ್ (ಟಿಎಸ್‌ಎಸ್), ಅಮೋನಿಕಲ್ ನೈಟ್ರೋಜನ್ ಮತ್ತು ಟೋಟಲ್ ನೈಟ್ರೋಜನ್ ಮಟ್ಟಗಳ ಮಾಪನವನ್ನು ಅನುಸರಿಸಿ ಅಧ್ಯಯನ ಮಾಡಲಾಗಿದೆ. 8 ಎಸ್‌ಟಿಪಿಗಳನ್ನು ಹೊರತುಪಡಿಸಿದರೆ ಇನ್ನಾವುವೂ ಈ ಮಾನದಂಡಗಳನ್ನು ಅನುಸರಿಸುತ್ತಿಲ್ಲ ಎಂದು ಆ್ಯಕ್ಷನ್ ಏಡ್‌ನ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ. ಪಚ್ಚಾಪುರ್ ತಿಳಿಸಿದರು.

ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡದಂತೆ ಟಿಎಸ್‌ಎಸ್ ಮಟ್ಟ ಒಂದು ಲೀಟರ್‌ಗೆ 10 ಎಂ.ಜಿಗಿಂತ ಕಡಿಮೆ ಇರಬೇಕು. ಆದರೆ ಜಲಮಂಡಳಿ ಈ ಮಟ್ಟವನ್ನು 20 ಎಂ.ಜಿಗೆ ನಿಗದಿಪಡಿಸಿದೆ. ಅದೇ ರೀತಿ ಪಿಎಚ್ ಮಟ್ಟ 6.5–8.5 ಬದಲು 6.5–9 ನಿಗದಿ ಮಾಡಿದ್ದರೆ, ಹಲವು ರೋಗಗಳಿಗೆ ಕಾರಣವಾಗುವ ಮಾನವ–ಪ್ರಾಣಿ ತ್ಯಾಜ್ಯ ಒಳಗೊಂಡಿರುವ 'ಕೋಲಿಫಾರ್ಮ್' ಪ್ರಮಾಣದ ಮಾಪನವೇ ಎಸ್‌ಟಿಪಿಗಳಲ್ಲಿ ಇಲ್ಲದಾಗಿದೆ.



ಸಾರಕ್ಕಿಯಲ್ಲಿರುವ ಎಸ್‌ಟಿಪಿ

ಯಾವ ಎಸ್‌ಪಿಟಿ ಹೇಗಿವೆ?: ದೊಡ್ಡಬೆಲೆ, ಕಬ್ಬನ್‌ಪಾರ್ಕ್, ಎಲೆಮಲ್ಲಪ್ಪ ಚೆಟ್ಟಿ, ಮೈಲಸಂದ್ರ, ಕೆಂಪಾಂಬುಧಿ, ರಾಜಕ್ಯಾನಲ್ (ಹೊಸ), ಅಗರ ಮತ್ತು ಹುಳಿಮಾವಿನಲ್ಲಿರುವ ಎಸ್‌ಟಿಪಿಗಳು ಮಾತ್ರ ಎಲ್ಲ ಮಾನದಂಡಗಳನ್ನು ಅನುಸರಿಸುತ್ತಿವೆ.

ಕೆಂಗೇರಿ, ರಾಜಕ್ಯಾನಲ್ (ಹಳೆ), ಹೆಬ್ಬಾಳ, ಕೆಆ್ಯಂಡ್‌ಸಿ ವ್ಯಾಲಿ–30 ಮತ್ತು 218ಗಳ ಮಾದರಿಯ ಅಂಕಿ–ಅಂಶಗಳನ್ನೇ ಒದಗಿಸುತ್ತಿಲ್ಲ.

ಯಲಹಂಕ ಟಟಿಪಿ, ಹಲಸೂರು, ಬೆಳ್ಳಂದೂರು ಅಮಾನಿ ಕೆರೆಗಳಲ್ಲಿ ಎಸ್‌ಟಿಪಿಗಳ ದತ್ತಾಂಶಗಳು ಆತಂಕ ತರುವ ರೀತಿಯಲ್ಲಿದ್ದು, ತಪ್ಪು ಮಾಹಿತಿಯಿಂದ ಕೂಡಿವೆ. ಜಕ್ಕೂರು ಎಸ್‌ಟಿಪಿ ಅತ್ಯಂತ ದುಃಸ್ಥಿತಿಯಲ್ಲಿದೆ. ಎಲ್ಲ ಮಾನದಂಡಗಳನ್ನೂ ಮೀರಿದೆ.

ರಾಷ್ಟ್ರೀಯ ಹಸಿರು ಪೀಠ (ಎನ್‌ಜಿಟಿ), ಮಾಲಿನ್ಯ ನಿಯಂತ್ರಣ ಮಂಡಳಿಯ ಎಲ್ಲ ಮಾನದಂಡಗಳನ್ನು ಅನುಸರಿಸಬೇಕು. ಮಾಲಿನ್ಯ ನಿಯಂತ್ರಣ ಮಂಡಳಿ ಇದನ್ನು ಮೇಲ್ವಿಚಾರಣೆ ಮಾಡಬೇಕು. ಕೆರೆ ಹಾಗೂ ಇತರ ಪ್ರದೇಶಗಳಿಗೆ ಹರಿಸುವ ಸಂಸ್ಕರಿತ ನೀರು ಮಾನದಂಡಗಳಂತೆಯೇ ಇರಬೇಕು ಎಂದು ಅಧ್ಯಯನದಲ್ಲಿ ಸಲಹೆ ನೀಡಲಾಗಿದೆ.

ಉನ್ನತೀಕರಣ ಮಾಡಲಾಗುತ್ತದೆ...

ಬಿಡಬ್ಲ್ಯುಎಸ್‌ಎಸ್‌ಬಿಯ ಹಲವು ಎಸ್‌ಟಿಪಿಗಳು ತುಂಬಾ ಹಳೆಯದಾಗಿದ್ದು, ಇದೀಗ ನಿಗದಿಪಡಿಸಿರುವ ಮಾನದಂಡಗಳನ್ನು ಇವು ಪೂರೈಸಲು ಸಾಧ್ಯವಿಲ್ಲ. ಹೀಗಾಗಿ, ಎನ್‌ಜಿಟಿ ಮಾನದಂಡಗಳನ್ನು ನಿರ್ವಹಿಸಲು ಎಸ್‌ಟಿಪಿಗಳನ್ನು ಉನ್ನತೀಕರಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಎಂದು ಬಿಡಬ್ಲ್ಯುಎಸ್‌ಎಸ್‌ಬಿಯ ಎಸ್‌ಟಿಪಿ ವಿಭಾಗದ ಗಂಗಾಧರ್ ಮಾಹಿತಿ ನೀಡಿದರು.

'ಮೀನು ಜೀವಿಸಲೂ ಯೋಗ್ಯವಲ್ಲ...'

ಬಿಡಬ್ಲ್ಯುಎಸ್‌ಎಸ್‌ಬಿ ತನ್ನ ತ್ಯಾಜ್ಯ ನೀರು ಸಂಸ್ಕರಣೆ ಘಟಕಗಳಿಂದ (ಎಸ್‌ಟಿಪಿ) ಕೆರೆಗಳಿಗೆ ನೀರು ಹರಿಸಲಾಗುತ್ತದೆ ಎಂದು ಹೇಳುತ್ತದೆ. ಜನರು ಉಪಯೋಗಿಸುವುದು ದೂರದ ಮಾತು. ಮೀನುಗಳು ಬದುಕಲು ಸಾಧ್ಯವಾದಂತಹ ನೀರು ಕೆರೆಯಲ್ಲಿದ್ದರೆ ಸಾಕು. ಅಂತಹ ಉದ್ದೇಶದಿಂದ ಎಸ್‌ಟಿಪಿಗಳಿಂದ ಹರಿಯುತ್ತಿರುವ ನೀರನ್ನು ಅವರದ್ದೇ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅಂಕಿ–ಅಂಶಗಳನ್ನು ಒಟ್ಟುಗೂಡಿಸಿ ಅಧ್ಯಯನ ನಡೆಸಿದೆವು. ಇದರ ಪ್ರತಿಯನ್ನು ಬಿಡಬ್ಲ್ಯುಎಸ್‌ಎಸ್‌ಬಿ, ನಗರಾಭಿವೃದ್ಧಿ ಇಲಾಖೆ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೂ ಸಲ್ಲಿಸಲಾಗುತ್ತದೆ ಎಂದು ಆ್ಯಕ್ಷನ್ ಏಡ್‌ನ ರಾಘವೇಂದ್ರ ಬಿ. ಪಚ್ಚಾಪುರ್ ತಿಳಿಸಿದರು.

ಸುದ್ದಿ 2 ನಿಮಿಷ

ರಾಜ್ಯ ಸರ್ಕಾರಿ ನೌಕರರ ಸಂಘದ ತುರ್ತು ಸಭೆ ಇಂದು

ಬೆಂಗಳೂರು: ರಾಜ್ಯ ಸರ್ಕಾರ 2023-24ನೇ ಸಾಲಿನ ಬಜೆಟ್‌ನಲ್ಲಿ 7ನೇ ವೇತನ ಆಯೋಗದ ಜಾರಿ ಮತ್ತು ನೂತನ ಪಿಂಚಣಿ ಯೋಜನೆಯ ಬಗ್ಗೆ ಯಾವುದೇ ಪ್ರಸ್ತಾವ ಮಾಡದಿರುವ ಹಿನ್ನೆಲೆಯಲ್ಲಿ, ಈ ಬಗ್ಗೆ ಚರ್ಚಿಸಲು ರಾಜ್ಯ ಸರ್ಕಾರಿ ನೌಕರರ ಸಂಘದ ತುರ್ತುಸಭೆ ಮಂಗಳವಾರ ನಡೆಯಲಿದೆ.

ಈ ಬಗ್ಗೆ ಸೋಮವಾರ ಸಮಾನಮನಸ್ಕ ವೃಂದಗಳ ನೌಕರರ ಸಂಘಗಳ ಪದಾಧಿಕಾರಿಗಳು ಸಮಾಲೋಚನಾ ಸಭೆ ನಡೆಸಿದರು. ನೌಕರರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ರಾಜ್ಯ ಸರ್ಕಾರಿ ನೌಕರರ ಸಂಘ ಕರೆದಿರುವ ಸಭೆಯಲ್ಲಿ ಭಾಗವಹಿಸಲು ಈ ನೌಕರರ ಸಂಘಗಳು ನಿರ್ಧರಿಸಿವೆ.

ಸೋಮವಾರ ನಡೆದ ಸಭೆಯಲ್ಲಿ ರಾಜ್ಯ ಸರ್ಕಾರಿ ಎನ್‌ಪಿಎಸ್ ನೌಕರರ ಸಂಘ, ಪದವಿಪೂರ್ವ ಶಿಕ್ಷಣ ಉಪನ್ಯಾಸಕರ ಸಂಘ, ಸರ್ಕಾರದ ಸಚಿವಾಲಯ ನೌಕರರ ಸಂಘ, ಅರಣ್ಯ ಇಲಾಖೆ ನೌಕರರ ಸಂಘ, ಸರ್ವೇ ಇಲಾಖೆ ನೌಕರರ ಸಂಘ, ವಿಧಾನಸಭಾ ಸಚಿವಾಲಯ ನೌಕರರ ಸಂಘ, ವಿಧಾನ ಪರಿಷತ್ ಸಚಿವಾಲಯ ನೌಕರರ ಸಂಘದ ಸದಸ್ಯರು ಭಾಗವಹಿಸಿದ್ದರು.

ಬೆಟ್ಟಹಲಸೂರು ಗ್ರಾ.ಪಂ: ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಯಲಹಂಕ: ಬ್ಯಾಟರಾಯಪುರ ಕ್ಷೇತ್ರದ ಬೆಟ್ಟಹಲಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆಲ್ಲುಕುಂಟೆ, ನಾರಾಯಣಪುರ ಹಾಗೂ ಬೆಟ್ಟಹಲಸೂರು ಗ್ರಾಮದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, '15ನೇ ಹಣಕಾಸು ಯೋಜನೆ ಅಡಿ ₹13.5 ಲಕ್ಷ ವೆಚ್ಚದಲ್ಲಿ ನೆಲ್ಲುಕುಂಟೆ ಗ್ರಾಮದಲ್ಲಿ ಪರಿಶಿಷ್ಟ ಜಾತಿ ಮತ್ತು ಸಾಮಾನ್ಯ ವರ್ಗದವರಿಗೆ ಅನುಕೂಲವಾಗುವಂತೆ ನಿರ್ಮಿಸಿರುವ ನೆಲಸಂಪು ಉದ್ಘಾಟಿಸಲಾಗಿದೆ. ಇದರಿಂದ ಸುಮಾರು 500 ಮನೆಗಳಿಗೆ ಅನುಕೂಲವಾಗಲಿದೆ' ಎಂದು ತಿಳಿಸಿದರು.

ಬೆಟ್ಟಹಲಸೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಮಕ್ಕಳ ಶಿಕ್ಷಣ ಮತ್ತು ಜ್ಞಾನಾರ್ಜನೆಗೆ ಅನುಕೂಲವಾಗುವಂತೆ ನಿರ್ಮಿಸಿರುವ ಡಿಜಿಟಲ್ ಗ್ರಂಥಾಲಯಕ್ಕೆ ಚಾಲನೆ ನೀಡಲಾಗಿದ್ದು, ಇದರಲ್ಲಿ ಪುಸ್ತಕಗಳ ಜೊತೆಗೆ ಕಂಪ್ಯೂಟರ್‌ನಲ್ಲಿ ಆನ್‌ಲೈನ್ ಮೂಲಕ ಮಕ್ಕಳ ಶಿಕ್ಷಣಕ್ಕೆ ಉಪಯುಕ್ತವಾದ ಮಾಹಿತಿಗಳನ್ನು ಸಂಗ್ರಹಿಸಿಡಲಾಗಿದೆ ಎಂದರು.

ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ.ಎಂ.ನಾಗೇಶ್, ಮುಖಂಡರಾದ ಬಿ.ಕೆ.ಮಂಜುನಾಥ ಗೌಡ, ಎನ್.ಕೆ.ಮಹೇಶ್ ಕುಮಾರ್, ಎಚ್.ಪಿ.ನಾರಾಯಣಸ್ವಾಮಿ, ಬಿ.ಕೆ.ರವೀಂದ್ರ, ಪಂಚಾಯಿತಿ ಸದಸ್ಯರಾದ ಬಿ.ಆರ್.ಪ್ರವೀಣ್, ಟಿ.ಎಸ್.ನವೀನ್ ಕುಮಾರ್, ಸುಜಾತ ಕೃಷ್ಣಮೂರ್ತಿ ಉಪಸ್ಥಿತರಿದ್ದರು.


ಮಲ್ಲತ್ತಹಳ್ಳಿ ಕೆರೆ ಒತ್ತುವರಿ ಆರೋಪ

72.22 ಗುಂಟೆ ಕೆರೆ ಪ್ರದೇಶದಲ್ಲಿ ಸುಮಾರು ನಾಲ್ಕು ಎಕರೆ ಪ್ರದೇಶವನ್ನು ಈಗಾಗಲೇ ಅಕ್ರಮವಾಗಿ ಒತ್ತುವರಿ ಮಾಡಲಾಗಿದೆ ಎಂದು ದೂರಲಾಗಿದೆ

ಸಚಿವ ಮುನಿರತ್ನಗೆ ಹೈಕೋರ್ಟ್ ನೋಟಿಸ್

ಬೆಂಗಳೂರು: ಮಲ್ಲತ್ತಹಳ್ಳಿ ಕೆರೆ ಪ್ರದೇಶದಲ್ಲಿ ಬಯಲು ರಂಗಮಂದಿರ, ಶಿವನ ಪ್ರತಿಮೆ ಮತ್ತು ಕಾಂಕ್ರೀಟ್ ಕಟ್ಟಡ ನಿರ್ಮಾಣ ಆಕ್ಷೇಪಿಸಲಾದ ಮಧ್ಯಂತರ ಅರ್ಜಿಗೆ ಸಂಬಂಧಿಸಿದಂತೆ ತೋಟಗಾರಿಕಾ ಸಚಿವ ಮುನಿರತ್ನ ನಾಯ್ಡು ಅವರಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

'ಕೆರೆ ಪ್ರದೇಶದಲ್ಲಿನ ಅಕ್ರಮ ಕಟ್ಟಡ ಮತ್ತು ಒತ್ತುವರಿ ತೆರವುಗೊಳಿಸಲು ನಿರ್ದೇಶಿಸಬೇಕು' ಎಂದು ಕೋರಿ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.



ಮುನಿರತ್ನ

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಆರ್.ಮೋಹನ್, 'ಮಲ್ಲತ್ತಹಳ್ಳಿ ಕೆರೆ ಅಂಗಳದಲ್ಲಿ 35 ಅಡಿ ಎತ್ತರದ ಶಿವನ ಪ್ರತಿಮೆ ಮತ್ತು ಮನೋರಂಜನಾ ಕಾರ್ಯಕ್ರಮಗಳಿಗೆ ಅಗತ್ಯವಾದ ಸೌಕರ್ಯ ಕಲ್ಪಿಸಲು ಅನುಮತಿ ನೀಡಬೇಕು ಎಂದು ಕೋರಿ ರಾಜರಾಜೇಶ್ವರಿ ನಗರದ ಬಿಜೆಪಿ ಘಟಕದ ಅಧ್ಯಕ್ಷ ಎಂ. ಗೋವಿಂದರಾಜು ರಾಜರಾಜೇಶ್ವರಿ ನಗರ ವಲಯದ ಬಿಬಿಎಂಪಿ ಸಹಾಯಕ ಎಂಜಿನಿಯರ್ ಅವರಿಗೆ ಇದೇ 19ರಂದು ಪತ್ರ ಬರೆದಿದ್ದಾರೆ' ಎಂದು ವಿವರಿಸಿದರು.

'ಈ ಅರ್ಜಿಯಲ್ಲಿ ಬಯಲು ರಂಗಮಂದಿರಕ್ಕಾಗಿ ಬೃಹತ್ ಪ್ರಮಾಣದ ವೃತ್ತಾಕಾರದ ಕಾಂಕ್ರೀಟ್ ಕಟ್ಟಡ ನಿರ್ಮಾಣಕ್ಕೂ ಮನವಿ ಮಾಡಲಾಗಿದೆ. ಅಂತೆಯೇ, ಕೆರೆ ಅಂಗಳದಲ್ಲಿನ ಕಟ್ಟಡಗಳ ನಿರ್ಮಾಣ ಕಾಮಗಾರಿಗೆ ಯಾವುದೇ ಸಕ್ಷಮ ಪ್ರಾಧಿಕಾರವು ಕಾರ್ಯಾದೇಶ ನೀಡಿಲ್ಲ. ಈ ಅಕ್ರಮ ಕಟ್ಟಡ ನಿರ್ಮಾಣದ ತ್ಯಾಜ್ಯದಿಂದಲೇ ಕೆರೆಯನ್ನು ತುಂಬಲಾಗುತ್ತಿದೆ. ಪರಿಣಾಮ ಕೆರೆಯ ವ್ಯಾಪ್ತಿ ಪ್ರದೇಶ ದಿನೇ ದಿನೇ ಕುಗ್ಗುತ್ತಿದೆ' ಎಂದು ದೂರಿದರು.

ಇದನ್ನು ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ರಾಜ್ಯ ಸರ್ಕಾರ, ಎಂ. ಗೋವಿಂದರಾಜು, ಬೆಂಗಳೂರು ನಗರ ಜಿಲ್ಲಾಧಿಕಾರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯುಕ್ತರು ಮತ್ತು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯ ಪರಿಸರ ಅಧಿಕಾರಿಗೂ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಅಶ್ವತ್ಥನಾರಾಯಣ ವಜಾಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಗ್ಗೆ ಪ್ರಚೋದನಕಾರಿ ಹೇಳಿಕೆ ನೀಡಿರುವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ಪ್ರದೇಶ ಕುರುಬರ ಸಂಘದ ಪದಾಧಿಕಾರಿಗಳು ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪದಾಧಿಕಾರಿಗಳು, ಅಶ್ವತ್ಥನಾರಾಯಣ ವಿರುದ್ಧ ಘೋಷಣೆ ಕೂಗಿದರು. 'ಲೂಟಿಕೋರ ಅಶ್ವತ್ಥನಾರಾಯಣಗೆ ಧಿಕ್ಕಾರ', 'ಮಹಾತ್ಮ ಗಾಂಧಿ ಹಂತಕ ಗೋಡ್ಸೆಯ ಅವತಾರ ಅಶ್ವತ್ಥ ನಾರಾಯಣ' ಎಂಬ ಘೋಷಣಾ ಫಲಕ ಪ್ರದರ್ಶಿಸಿದರು.

'ಮಂಡ್ಯ ಜಿಲ್ಲೆಯ ಸಾತನೂರಿನಲ್ಲಿ ಆಯೋಜಿಸಿದ್ದ ಬಿಜೆಪಿ ಶಕ್ತಿಕೇಂದ್ರ ಸಭೆಯಲ್ಲಿ ಪಾಲ್ಗೊಂಡಿದ್ದ ಅಶ್ವತ್ಥನಾರಾಯಣ, ಸಿದ್ದರಾಮಯ್ಯ ಅವರನ್ನು ಟಿಪ್ಪು ಸುಲ್ತಾನ್‌ಗೆ ಹೋಲಿಸಿ ಪ್ರಚೋದನಾಕಾರಿ ಹೇಳಿಕೆ ನೀಡಿದ್ದಾರೆ. ಇದರಿಂದಾಗಿ ಸಮುದಾಯದವರ ಮನಸ್ಸಿಗೆ ನೋವಾಗಿದೆ. ಈ ಹೇಳಿಕೆಯನ್ನು ಕುರುಬರ ಸಂಘವು ತೀವ್ರವಾಗಿ ಖಂಡಿಸುತ್ತದೆ' ಎಂದು ಪ್ರತಿಭಟನಕಾರರು ಹೇಳಿದರು.

'ಅಶ್ವತ್ಥನಾರಾಯಣ ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಸಾರ್ವಜನಿಕವಾಗಿ ಸಿದ್ದರಾಮಯ್ಯ ಬಳಿ ಕ್ಷಮೆ ಕೇಳಬೇಕೆಂದು ಸಾಂಕೇತಿಕವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ. ಕ್ಷಮೆ ಕೇಳದಿದ್ದರೆ ರಾಜ್ಯದೆಲ್ಲೆಡೆ ಬೃಹತ್ ಪ್ರತಿಭಟನೆ ನಡೆಸಲಾಗುವುದು' ಎಂದು ಎಚ್ಚರಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಡಿ. ವೆಂಕಟೇಶಮೂರ್ತಿ, ಖಜಾಂಚಿ ದೇವರಾಜ ಸುಬ್ಬರಾಯಪ್ಪ, ನಿರ್ದೇಶಕ ಕೆ.ಟಿ.ನಾಗರಾಜು, ಮಹಿಳಾ ಘಟಕದ ಅಧ್ಯಕ್ಷೆ ಕೆ.ಆರ್. ಪ್ರಭಾವತಿ, ಸಂಘಟನಾ ಕಾರ್ಯದರ್ಶಿ ಶೋಭಾ ಎಂ. ರಾಜು ಪ್ರತಿಭಟನೆಯಲ್ಲಿದ್ದರು.



ಕರ್ನಾಟಕ ಪ್ರದೇಶ ಕುರುಬರ ಸಂಘದ ಪದಾಧಿಕಾರಿಗಳು ಸೋಮವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಅಕ್ರಮ ವಾಸ: ಪಾಕ್ ಸೇನೆ ಸುಪರ್ದಿಗೆ ಯುವತಿ

ಬೆಂಗಳೂರು: ನಗರದಲ್ಲಿ ಅಕ್ರಮವಾಗಿ ನೆಲೆಸಿದ್ದ ಆರೋಪದಡಿ ಇತ್ತೀಚೆಗೆ ಬಂಧಿಸಲಾಗಿದ್ದ ಪಾಕಿಸ್ತಾನದ ಯುವತಿ ಇಕ್ರಾ ಜೀವನಿ (19) ಅವರನ್ನು ಗಡಿಪಾರು ಮಾಡಿರುವ ಪೊಲೀಸರು, ಪಾಕ್ ಸೇನೆ ಸುಪರ್ದಿಗೆ ಭಾನುವಾರ ಒಪ್ಪಿಸಿದ್ದಾರೆ.

ಉತ್ತರ ಪ್ರದೇಶದ ಮುಲಾಯಂ ಸಿಂಗ್ (25) ಜೊತೆ ಬೆಂಗಳೂರಿಗೆ ಬಂದಿದ್ದ ಇಕ್ರಾ, ಜುನ್ನಸಂದ್ರ ಅಯ್ಯಪ್ಪಸ್ವಾಮಿ ದೇವಸ್ಥಾನ ಬಳಿಯ ಮನೆಯಲ್ಲಿ ವಾಸವಿದ್ದರು. ಈಕೆಯ ಬಗ್ಗೆ ಮಾಹಿತಿ ಸಂಗ್ರಹಿಸಿದ್ದ ಕೇಂದ್ರ ಗುಪ್ತದಳ ಅಧಿಕಾರಿಗಳು, ಸೂಕ್ತ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಪೊಲೀಸರಿಗೆ ಸೂಚಿಸಿದ್ದರು.

ಮನೆ ಮೇಲೆ ದಾಳಿ ಮಾಡಿದ್ದ ಬೆಳ್ಳಂದೂರು ಠಾಣೆ ಪೊಲೀಸರು, ಇಕ್ರಾ ಹಾಗೂ ಮುಲಾಯಂಸಿಂಗ್ ಅವರನ್ನು ಬಂಧಿಸಿದ್ದರು. ಮನೆ ಮಾಲೀಕ ಗೋವಿಂದರೆಡ್ಡಿ ವಿರುದ್ಧವೂ ಪ್ರಕರಣ ದಾಖಲಿಸಿಕೊಂಡಿದ್ದರು.

'ಇಕ್ರಾ ಅವರನ್ನು ವಿದೇಶಿಯರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಸುಪರ್ದಿಗೆ ಒಪ್ಪಿಸಲಾಗಿತ್ತು. ಪಾಕಿಸ್ತಾನ ಪ್ರಜೆ ಎಂಬುದು ಸಾಬೀತಾಗುತ್ತಿದ್ದಂತೆ, ಇಕ್ರಾ ಅವರನ್ನು ಗಡಿಪಾರು ಮಾಡಲು ಕ್ರಮಕೈಗೊಳ್ಳಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪ್ರಕರಣದ ತನಿಖಾಧಿಕಾರಿ ರಾಕೇಶ್ ನೇತೃತ್ವದ ತಂಡ ಬೆಂಗಳೂರಿನಿಂದ ಪಂಜಾಬ್‌ನ ವಾಘಾ–ಅಠಾರಿ ಗಡಿಗೆ ಇಕ್ರಾ ಅವರನ್ನು ಇತ್ತೀಚೆಗೆ ಕರೆದೊಯ್ದಿತ್ತು. ಭಾರತ ಹಾಗೂ ಪಾಕಿಸ್ತಾನ ಸೇನೆ ಅಧಿಕಾರಿಗಳ ಸಮ್ಮುಖದಲ್ಲಿ ದಾಖಲೆಗಳ ಪರಿಶೀಲನೆ ಮುಗಿದಿದೆ. ಇಕ್ರಾ ಅವರನ್ನು ಸುರಕ್ಷಿತವಾಗಿ ಪಾಕ್ ಸೇನೆ ಸುಪರ್ದಿಗೆ ಒಪ್ಪಿಸಲಾಗಿದೆ. ವಿಶೇಷ ತಂಡ ನಗರಕ್ಕೆ ವಾಪಸು ಬರುತ್ತಿದೆ' ಎಂದೂ ತಿಳಿಸಿದರು.



ಇಕ್ರಾ ಹಾಗೂ ಮುಲಾಯಂ ಸಿಂಗ್

ಡೇಟಿಂಗ್ ಆ್ಯಪ್ ಸ್ನೇಹ: 'ಇಕ್ರಾ ಹಾಗೂ ಮುಲಾಯಂಸಿಂಗ್, ಡೇಟಿಂಗ್ ಆ್ಯಪ್ ಮೂಲಕ ಪರಿಚಯವಾಗಿದ್ದರು. ಮುಲಾಯಂ ಸಿಂಗ್ ಅವರನ್ನು ಮದುವೆ ಆಗುವ ಉದ್ದೇಶದಿಂದ 2022ರಲ್ಲಿ ನೇಪಾಳದ ಗಡಿ ಮೂಲಕ ಇಕ್ರಾ ದೇಶದೊಳಗೆ ನುಸುಳಿದ್ದರು. ಮದುವೆಯಾಗಿರುವುದಾಗಿ ಹೇಳುತ್ತಿದ್ದ ದಂಪತಿ, ಕೆಲಸಕ್ಕಾಗಿ ಬೆಂಗಳೂರಿಗೆ ಬಂದು ಉಳಿದುಕೊಂಡಿದ್ದರು' ಎಂದು ಪೊಲೀಸ್ ಅಧಿಕಾರಿ ವಿವರಿಸಿದರು.

ಮತದಾರರ ಪಟ್ಟಿಯಲ್ಲಿ ಅಕ್ರಮ ಆರೋಪ– ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ 'ಚಿಲುಮೆ' ಸಂಸ್ಥೆ ಮೂಲಕ ಬೆಂಗಳೂರಿನಲ್ಲಿ ಮತದಾರರ ಪಟ್ಟಿಯಲ್ಲಿ ಅಕ್ರಮ ಮಾಡಿದ ಬಳಿಕ ಈಗ ಬೇರೆ ಕ್ಷೇತ್ರಗಳಲ್ಲಿಯೂ ಅಕ್ರಮಕ್ಕೆ ಮುಂದಾಗಿದೆ. ಈ ಬಗ್ಗೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ದೂರು ನೀಡಿದ್ದೇವೆ' ಎಂದು ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ, ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಆಳಂದ ವಿಧಾನಸಭಾ ಕ್ಷೇತ್ರದಲ್ಲಿ ಆನ್‌ಲೈನ್ ಮೂಲಕ 6,670 ಮತದಾರರ ಹೆಸರನ್ನು, ಆ ಮತದಾರರ ಗಮನಕ್ಕೆ ಬಾರದೆ ಹೆಸರು ಕೈ ಬಿಡುವಂತೆ ಮತ್ತೊಬ್ಬರು ಅರ್ಜಿ ಹಾಕಿದ್ದಾರೆ' ಎಂದರು.

'ಈ ವಿಚಾರವಾಗಿ ನಮ್ಮ ಪಕ್ಷದ ಬೂತ್ ಏಜೆಂಟರು ಪರಿಶೀಲಿಸಿದಾಗ, ಅರ್ಜಿಯಲ್ಲಿ 'ನಾನು ಸ್ಥಳೀಯನಲ್ಲ, ನನ್ನ ನಿವಾಸ ಬೇರೆ ರಾಜ್ಯದಲ್ಲಿದೆ' ಎಂದು ಹೇಳಿರುವುದು ಸ್ಪಷ್ಟವಾಗಿದೆ. ಆ ಮೂಲಕ ವ್ಯವಸ್ಥಿತವಾಗಿ, ಅಕ್ರಮವಾಗಿ ಮತದಾರರ ಹೆಸರು ಕೈಬಿಡಲು ಷಡ್ಯಂತ್ರ ರೂಪಿಸಲಾಗಿದೆ' ಎಂದು ದೂರಿದರು.

'ತಹಶೀಲ್ದಾರ್ ಮತ್ತು ಜಿಲ್ಲಾಧಿಕಾರಿಗಳಿಗೂ ಈ ಬಗ್ಗೆ ದೂರು ನೀಡಲಾಗಿವೆ. ಕಾನೂನಿನ ಪ್ರಕಾರ ಒಂದು ಮೊಬೈಲ್ ಸಂಖ್ಯೆಯಿಂದ ಗರಿಷ್ಠ ಐದು ಮಂದಿಯ ಹೆಸರು ಕೈಬಿಡಲು ಅರ್ಜಿ ಹಾಕಬಹುದು. ಆದರೆ, ಆಳಂದದಲ್ಲಿ ಒಂದು ಬೂತ್‌ನಲ್ಲಿ ಒಂದು ಮೊಬೈಲ್ ಸಂಖ್ಯೆಯಲ್ಲಿ 70 ಮತದಾರರ ಹೆಸರು ರದ್ದುಪಡಿಸಲು ಅರ್ಜಿ ಹಾಕಲಾಗಿದೆ. ಒಬ್ಬೊಬ್ಬರು 50-70 ಮತದಾರರ ಹೆಸರು ರದ್ದು ಮಾಡಲು ಅರ್ಜಿ ಹಾಕಲು ಹೇಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದರು.

ಮಾಜಿ ಶಾಸಕ ಬಿ.ಆರ್ ಪಾಟೀಲ ಮಾತನಾಡಿ, 'ನನ್ನ ಕ್ಷೇತ್ರದಲ್ಲಿ (ಆಳಂದ)ಆರು ಸಾವಿರಕ್ಕೂ ಹೆಚ್ಚು ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ರದ್ದು ಮಾಡುವಂತೆ ಮನವಿ ಬಂದಿದ್ದು, ಬಹುತೇಕ ಮತದಾರರು ತಾವುಗಳು ಅರ್ಜಿ ಹಾಕಿಲ್ಲ. ಅವರ ಬದಲಿಗೆ ಬೇರೆಯವರು ಹೆಸರು ರದ್ದು ಮಾಡುವಂತೆ ಅರ್ಜಿ ಹಾಕಿದ್ದಾರೆ. ಈ ಅರ್ಜಿ ಹಾಕಿರುವವರ ದೂರವಾಣಿ ಸಂಖ್ಯೆಗೆ ಕರೆ ಮಾಡಿದರೆ ಆಂಧ್ರಪ್ರದೇಶ, ಉತ್ತರ ಪ್ರದೇಶ, ಬಿಹಾರ, ಬೇರೆ ರಾಜ್ಯ ಹಾಗೂ ಮಂಡ್ಯ ಮತ್ತು ಇತರ ಜಿಲ್ಲೆಯವರು ಮಾತನಾಡುತ್ತಾರೆ. ಈ ಬಗ್ಗೆ ತನಿಖೆ ಆಗಬೇಕು' ಎಂದು ಅವರು ಆಗ್ರಹಿಸಿದರು.

ಗೌರವಧನ ವಿಳಂಬ: ಕೇಂದ್ರ ಸರ್ಕಾರಕ್ಕೆ ₹ 1 ಲಕ್ಷ ದಂಡ

ಬೆಂಗಳೂರು: ಶತಾಯುಷಿ ಸ್ವಾತಂತ್ರ್ಯ ಹೋರಾಟಗಾರರೊಬ್ಬರು ತಮ್ಮ ಗೌರವಧನ ಪಡೆಯಲು ಸತತ ಮೂರು ಬಾರಿ ಹೈಕೋರ್ಟ್ ಮೆಟ್ಟಿಲೇರಲು ಕಾರಣವಾದ ಕೇಂದ್ರ ಗೃಹ ಸಚಿವಾಲಯ ಮತ್ತು ಬ್ಯಾಂಕ್‌ಗೆ ಹೈಕೋರ್ಟ್ ₹ 1 ಲಕ್ಷ ವ್ಯಾಜ್ಯ ವೆಚ್ಚದ ರೂಪದಲ್ಲಿ ದಂಡ ವಿಧಿಸಿದೆ.

'ಜೀವಿತ ಪ್ರಮಾಣ ಪತ್ರ ಸಲ್ಲಿಸಿಲ್ಲ ಎಂಬ ಕಾರಣಕ್ಕೆ 2018ರಿಂದ ನನ್ನ ಗೌರವಧನ ತಡೆ ಹಿಡಿಯಲಾಗಿದೆ' ಎಂದು ಆಕ್ಷೇಪಿಸಿ ಬ್ಯಾಂಕ್ ಅನ್ನು ಪ್ರತಿವಾದಿಯನ್ನಾಗಿಸಿ ಮಲ್ಲೇಶ್ವರದ ನಿವಾಸಿ ಎಚ್.ನಾಗಭೂಷಣ್ ರಾವ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದ್ದು, '2018ರಿಂದ ಬಾಕಿ ಇರುವ ಸುಮಾರು ₹ 3.71 ಲಕ್ಷ ಮೊತ್ತಕ್ಕೆ ವಾರ್ಷಿಕ ಶೇ 6ರಷ್ಟು ಬಡ್ಡಿಯೊಂದಿಗೆ ಮುಂದಿನ ಎರಡು ವಾರಗಳಲ್ಲಿ ಪಾವತಿಸಬೇಕು ಎಂದು ಆದೇಶಿಸಿದೆ. ವಿಳಂಬ ಮಾಡಿದರೆ ಶೇ 18ರಷ್ಟು ಬಡ್ಡಿಯೊಂದಿಗೆ ಪಾವತಿಸಬೇಕು' ಎಂದು ನಿರ್ದೇಶಿಸಿದೆ.

'ವಯಸ್ಸಾಗಿದೆ ಎಂಬ ಕಾರಣದಿಂದ ಜೀವನ ಪ್ರಮಾಣ ಪತ್ರ ಸಲ್ಲಿಸಲಾಗಿಲ್ಲ ಎಂದು ಗೌರವಧನವನ್ನು ತಡೆಹಿಡಿಯಲು ಸಾಧ್ಯವಿಲ್ಲ. ಇದರಿಂದ ಸ್ವಾತಂತ್ರ್ಯ ಹೋರಾಟಗಾರರೊಬ್ಬರ ಹಕ್ಕನ್ನು ಕಸಿದುಕೊಂಡಂತೆ ಆಗಬಾರದು' ಎಂದು ಹೇಳಿರುವ ನ್ಯಾಯಪೀಠ, '70 ರಿಂದ 99 ವರ್ಷದೊಳಗಿನ ಸ್ವಾತಂತ್ರ್ಯ ಹೋರಾಟಗಾರರ ಜೀವಿತ ಪ್ರಮಾಣ ಪತ್ರವನ್ನು ಪಡೆಯಲು ಬ್ಯಾಂಕ್ ಸಿಬ್ಬಂದಿಯೇ ಅರ್ಜಿದಾರರ ಮನೆಗೆ ಹೋಗಬೇಕು ಮತ್ತು ಸ್ಥಳದಲ್ಲಿಯೇ ಆನ್‌ಲೈನ್‌ನಲ್ಲಿ ನವೀಕರಿಸಿಕೊಳ್ಳಬೇಕು' ಎಂದು ಕೇಂದ್ರ ಗೃಹ ಸಚಿವಾಲಯಕ್ಕೆ ಮಾರ್ಗಸೂಚಿಗಳನ್ನು ಹೊರಡಿಸಿದೆ.



ಜೆ.ಪಿ. ನಗರ 9ನೇ ಹಂತದಲ್ಲಿ ಕಾಂಪೌಂಡ್ ತೆರವುಗೊಳಿಸಿದ ಬಿಡಿಎ ಸಿಬ್ಬಂದಿ

ಬಿಡಿಎಯಿಂದ ಒತ್ತುವರಿ ತೆರವು

ಬೆಂಗಳೂರು: ಜೆ.ಪಿ. ನಗರ 9ನೇ ಹಂತದಲ್ಲಿ ಅತಿಕ್ರಮವಾಗಿ ನಿರ್ಮಿಸಿದ್ದ ಕಾಂಪೌಂಡ್ ತೆರವುಗೊಳಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿಗಳು, ಸುಮಾರು ₹65 ಕೋಟಿ ಮೌಲ್ಯದ ಆಸ್ತಿಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಜೆ.ಪಿ.ನಗರ 9ನೇ ಹಂತ 4ನೇ ಬ್ಲಾಕ್‌ನ ತಿಪ್ಪಸಂದ್ರದ ಸರ್ವೆ ನಂ.10ರಲ್ಲಿ 1 ಎಕರೆ 10 ಗುಂಟೆ ಒತ್ತುವರಿ ಪ್ರದೇಶವನ್ನು ಬಿಡಿಎ ಆಯುಕ್ತ ಜಿ.ಕುಮಾರ್‌ನಾಯಕ್ ಸೂಚನೆ ಮೇರೆಗೆ ಕಾರ್ಯಪಡೆ ಕಾರ್ಯಾಚರಣೆ ನಡೆಸಿ ಸೋಮವಾರ ವಶಕ್ಕೆ ಪಡೆಯಿತು.

ಬಿಡಿಎ ಎಸ್ಪಿ ನಂಜುಂಡೇಗೌಡ, ಕಾರ್ಯಪಾಲಕ ಎಂಜಿನಿಯರ್ ಸುರೇಶ್ ಹಾಗೂ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು.

ಇರಿತ ಪ್ರಕರಣ: ಪಿಎಸ್‌ಐ ಅಮಾನತು

ದೊಡ್ಡಬಳ್ಳಾಪುರ: ಕ್ರಿಕೆಟ್ ಪಂದ್ಯಾವಳಿ ವೇಳೆ ನಡೆದ ಜೋಡಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ಲೋಪ ಎಸಗಿದ ಆರೋಪದ ಮೇಲೆ ದೊಡ್ಡಬೆಳವಂಗಲ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ಬಸವರಾಜು ಅವರನ್ನು ಅಮಾನತು ಮಾಡಲಾಗಿದೆ.

ಪಿಎಸ್‌ಐ ಅವರನ್ನು ಅಮಾನತುಗೊಳಿಸಿ ಡಿವೈಎಸ್‌ಪಿ ನಾಗರಾಜ್ ಸೋಮವಾರ ಆದೇಶ ಹೊರಡಿಸಿದ್ದಾರೆ.

ಘಟನೆಗೂ ಮುನ್ನ ನಡೆದಿದ್ದ ಗಲಾಟೆಗೆ ಸಂಬಂಧಿಸಿದಂತೆ ಆರೋಪಿಗಳು ದೂರು ನೀಡಲು ಠಾಣೆಗೆ ತೆರಳಿದ್ದರು. ಆಗ ಸಬ್ ಇನ್‌ಸ್ಪೆಕ್ಟರ್ ಬಸವರಾಜು ಸಕಾರಾತ್ಮಕವಾಗಿ ಸ್ಪಂದಿಸಿರಲಿಲ್ಲ. ಒಂದು ವೇಳೆ ಸ್ಪಂದಿಸಿ ಸೂಕ್ತ ಕ್ರಮ ಕೈಗೊಂಡಿದ್ದರೆ ಕೃತ್ಯ ತಡೆಯಬಹುದಾಗಿತ್ತು ಎಂಬ ಆರೋಪಗಳಿವೆ.

'ತಲೆಮರೆಸಿಕೊಂಡಿರುವ ಅನಿಲ್, ಕೋರಿ ಮತ್ತು ದೀಪು ಮತ್ತಿತರನ್ನು ಶೀಘ್ರವೇ ಬಂಧಿಸಲಾಗುವುದು. ಈ ಬಗ್ಗೆ ರಾಜಕೀಯ ಒತ್ತಡ ಇಲ್ಲ' ಎಂದು ಡಿವೈಎಸ್‌ಪಿ ಸ್ಪಷ್ಟಪಡಿಸಿದ್ದಾರೆ.

ತಾಲ್ಲೂಕಿನಲ್ಲಿ ಕಾನೂನು ಸುವ್ಯವಸ್ಥೆ ನಿಯಂತ್ರಣದಲ್ಲಿದೆ. ಸಾರ್ವಜನಿಕರು ಯಾವುದೇ ರೀತಿಯ ಗಾಳಿ ಸುದ್ದಿಗಳಿಗೆ ಕಿವಿಗೊಡಬಾರದು ಎಂದು ಅವರು ಮನವಿ ಮಾಡಿದ್ದಾರೆ.

ಆದಿಚುಂಚನಗಿರಿ ಸಭಾಂಗಣದಲ್ಲಿ ನಡೆದ ವಿಜ್ಞಾತಂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸುಧಾಮೂರ್ತಿ

'ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬಿ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ): 'ಅಗಾಧ ಪ್ರತಿಭೆಯುಳ್ಳ ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ತುಂಬುವ ಮಹತ್ಕಾರ್ಯವನ್ನು ಆದಿಚುಂಚನಗಿರಿ ಮಠ ಮಾಡುತ್ತಿದೆ' ಎಂದು ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಸುಧಾಮೂರ್ತಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ನಿರ್ಮಲಾನಂದನಾಥ ಸ್ವಾಮೀಜಿ ಅವರ ಪಟ್ಟಾಭಿಷೇಕದ ಅಂಗವಾಗಿ ಸೋಮವಾರ ಆಯೋಜಿಸಿದ್ದ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಮೇಳದಲ್ಲಿ 'ವಿಜ್ಞಾತಂ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

'ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಮೇಳಗಳ ಆಯೋಜನೆಯೂ ಮಕ್ಕಳಲ್ಲಿರುವ ಪ್ರತಿಭೆ ಅನಾವರಣಕ್ಕೆ ಸಹಕಾರಿಯಾಗುತ್ತದೆ. ಮಾತು ಕಡಿಮೆ ಮಾಡಿ ಹೆಚ್ಚು ಯೋಚನೆ ಮಾಡುವ ಮೂಲಕ ಸಮಾಜವನ್ನು ಮುನ್ನಡೆಸಲು ಸಾಧ್ಯವಿದೆ. ಜ್ಞಾನದ ಮಟ್ಟ ಹೆಚ್ಚಿಸಿಕೊಂಡು ಆತ್ಮವಿಶ್ವಾಸ ವೃದ್ಧಿಸಿಕೊಳ್ಳಬೇಕು' ಎಂದರು.

'ಎಷ್ಟೇ ಹಣ ಗಳಿಸಿದರೂ ಹೊಟ್ಟೆಗೆ ತಿನ್ನುವುದು ಮೂರು ಹಿಡಿ ಅನ್ನವಷ್ಟೇ ಎಂಬ ಅಂಶ ನನಗೆ ಅರ್ಥವಾಗಿದೆ. ಬಾಲಗಂಗಾಧರನಾಥ ಸ್ವಾಮೀಜಿ ಅವರು ನಾಡಿನಲ್ಲಿ ಶಿಕ್ಷಣ ಸಂಸ್ಥೆ, ಅನಾಥಾಶ್ರಮ, ಅನ್ನದಾಸೋಹ ನಡೆಸಿ ಲಕ್ಷಾಂತರ ಮಂದಿಯ ಬಾಳಿಗೆ ಬೆಳಕಾಗಿದ್ದಾರೆ. ನಿರ್ಮಲಾನಂದನಾಥ ಸ್ವಾಮೀಜಿ ಅವರಂಥ ಸಮರ್ಥ ಉತ್ತರಾಧಿಕಾರಿಯನ್ನು ಆಯ್ಕೆ ಮಾಡಿರುವುದೂ ಪವಾಡವಾಗಿದೆ' ಎಂದರು.



ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠದಲ್ಲಿ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಇನ್ಫೋಸಿಸ್ ಪ್ರತಿಷ್ಠಾನದ ಸಂಸ್ಥಾಪಕಿ ಸುಧಾಮೂರ್ತಿ ಅವರಿಗೆ 'ವಿಜ್ಞಾತಂ ಪ್ರಶಸ್ತಿ' ಪ್ರದಾನ ಮಾಡಲಾಯಿತು

ಕೇಂದ್ರ ಸಚಿವ ಭಗವಂತ ಖೂಬಾ ಮಾತನಾಡಿ, ನಿರ್ಮಲಾನಂದನಾಥ ಸ್ವಾಮೀಜಿ ಅವರ ಮಾರ್ಗದರ್ಶನದಲ್ಲಿ ಮಠವು ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಮನುಷ್ಯನ ಬದುಕಿಗೆ ಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ತಹಳದಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರ ಸಾಮರ್ಥ್ಯ ಬಳಕೆ ಮಾಡಿಕೊಳ್ಳುವ ಅವಕಾಶವನ್ನು ವಿವಿಧ ಕಾರ್ಯಕ್ರಮಗಳ ಮೂಲಕ ನೀಡಿದ್ದಾರೆ. ಅವು ಜನರನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಕಡೆಗೆ ಆಕರ್ಷಿತರಾಗುವಂತೆ ಮಾಡುತ್ತಿವೆ ಎಂದರು.

ನಂತರ ಬೆಂಗಳೂರಿನ ಬೇಲಿ ಮಠದ ಶಿವರುದ್ರ ಸ್ವಾಮೀಜಿ ಮಾತನಾಡಿ, ಎಲ್ಲರಿಗೂ ಸ್ಫೂರ್ತಿದಾಯಕವಾಗಿರುವ ಸುಧಾಮೂರ್ತಿ ಅವರಿಗೆ ಪ್ರಶಸ್ತಿ ನೀಡಿರುವುದು ಸಂತಸದ ಸಂಗತಿ. ವಿಜ್ಞಾನ ಮತ್ತು ತಂತ್ರಜ್ಞಾನ ಇಂದು ಹಾದಿ ತಪ್ಪಿ ಹೋಗುವ ಮಟ್ಟಿಗೆ ಬೆಳೆದು ನಿಂತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಅಯೋಗ್ಯರ ಕೈಗೆ ಸಿಗದಂತೆ ನೋಡಿಕೊಳ್ಳುವುದು ಮುಖ್ಯವಾಗಿದೆ ಎಂದರು.

ಪಾಂಡವಪುರ ಶಾಸಕ ಸಿ.ಎಸ್. ಪುಟ್ಟರಾಜು, ನಾಗಮಂಗಲ ಶಾಸಕ ಸುರೇಶ್ ಗೌಡ ಮಾತನಾಡಿ, ವಿಜ್ಞಾನ ಮತ್ತು ತಂತ್ರಜ್ಞಾನದ ಏಳಿಗೆಗಾಗಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ನಿರಂತರವಾಗಿ ಶ್ರಮಿಸುತ್ತಿದ್ದಾರೆ ಎಂದರು.

ನಿರ್ಮಲಾನಂದನಾಥ ಸ್ವಾಮೀಜಿ ಆಶೀರ್ವಚನ ನೀಡಿದರು.

ಬಳಿಕ ನಿರ್ಮಲಾನಂದನಾಥ ಸ್ವಾಮೀಜಿ ಅವರ 10ನೇ ವರ್ಷದ ಪಟ್ಟಾಭಿಷೇಕ ಕಾರ್ಯಕ್ರಮ ನೆರವೇರಿಸಲಾಯಿತು.

ಆದಿಚುಂಚನಗಿರಿ ಮಠದ ಪ್ರಧಾನ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್ ಪ್ರಧಾನ ಕಾರ್ಯದರ್ಶಿ ಪುರುಷೋತ್ತಮಾನಂದನಾಥ ಸ್ವಾಮೀಜಿ, ಬೆಂಗಳೂರು ಮಠದ ಪ್ರಕಾಶನಾಥ ಸ್ವಾಮೀಜಿ, ಹಾಸನ ಶಾಖಾ ಮಠದ ಶಂಭುನಾಥ ಸ್ವಾಮೀಜಿ, ಪ್ರತಾಪ್ ಸಿಂಹ ದೇಸಾಯಿ, ಆದಿಚುಂಚನಗಿರಿ ವಿವಿಯ ಉಪಕುಲಪತಿ ಡಾ.ಎಂ.ಎ.ಶೇಖರ್ ಇದ್ದರು.

ಕಣ್ಮುಚ್ಚಿ ಕುಳಿತ ಬಿಬಿಎಂಪಿ, ಪೊಲೀಸರು • ಹೈಕೋರ್ಟ್ ಆದೇಶ ಉಲ್ಲಂಘನೆ: ನಗರದ ಸೌಂದರ್ಯಕ್ಕೆ ಧಕ್ಕೆ

ಮತಬೇಟೆಗಾಗಿ ಫ್ಲೆಕ್ಸ್, ಬ್ಯಾನರ್ ಪೈಪೋಟಿ

• ಸಂತೋಷ ಜಿಗಳಿಕೊಪ್ಪ

ಮುಖ್ಯಾಂಶಗಳು
- ಸಾಮಾನ್ಯರ ಮೇಲಷ್ಟೇ ಪೊಲೀಸರ ಕ್ರಮ
- ರಾಜಕಾರಣಿಗಳ ಫ್ಲೆಕ್ಸ್–ಬ್ಯಾನರ್ ತೆರವಿಗೆ ಭಯ

ಪ್ರಜಾವಾಣಿ ವಿಶೇಷ

ಬೆಂಗಳೂರು: ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ ಮತ ಬೇಟೆಗಾಗಿ ರಾಜಕಾರಣಿಗಳು ಹಾಗೂ ಮುಖಂಡರು ನಾನಾ ಕಸರತ್ತು ಆರಂಭಿಸಿದ್ದಾರೆ. ಹೈಕೋರ್ಟ್ ಆದೇಶ ಉಲ್ಲಂಘಿಸಿ ನಗರದ ಹಲವು ಪ್ರದೇಶಗಳಲ್ಲಿ ಫ್ಲೆಕ್ಸ್–ಬ್ಯಾನರ್ ಅಳವಡಿಸುತ್ತಿದ್ದು, ಇದಕ್ಕೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ರಾಜರಾಜೇಶ್ವರಿ ನಗರ, ನಾಯಂಡನಹಳ್ಳಿ, ವಿಜಯನಗರ, ರಾಜಾಜಿನಗರ, ಮಲ್ಲೇಶ್ವರ, ಯಶವಂತಪುರ, ಪೀಣ್ಯ, ಚಿಕ್ಕಪೇಟೆ, ಶ್ರೀರಾಮಪುರ, ಓಕಳಿಪುರ, ಗಾಂಧಿ ನಗರ, ಬಸವನಗುಡಿ, ಬನಶಂಕರಿ, ಜಯನಗರ, ಕೆಂಗೇರಿ, ರೇಸ್‌ಕೋರ್ಸ್ ರಸ್ತೆ, ಅರಮನೆ ರಸ್ತೆ... ಹೀಗೆ ಹಲವು ಪ್ರದೇಶಗಳ ಸಾರ್ವಜನಿಕ ಸ್ಥಳಗಳಲ್ಲಿ ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ.

ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ಪಕ್ಷಗಳ ಹಾಲಿ ಶಾಸಕರು, ಟಿಕೆಟ್ ಆಕಾಂಕ್ಷಿಗಳು, ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು, ಬೆಂಬಲಿಗರ ಫೋಟೊಗಳು ಬ್ಯಾನರ್ ಹಾಗೂ ಫ್ಲೆಕ್ಸ್‌ಗಳಲ್ಲಿವೆ. ಹಬ್ಬ, ವಿಶೇಷ ದಿನಗಳ ಶುಭಾಶಯ ಹಾಗೂ ಕಾಮಗಾರಿ ಪ್ರಗತಿ ಬರಹಗಳನ್ನು ಮುದ್ರಿಸಲಾಗಿದೆ.

ರಾಜಕೀಯ ಪಕ್ಷಗಳ ರಾಷ್ಟ್ರೀಯ ನಾಯಕರು ನಗರಕ್ಕೆ ಬರುವ ಸಂದರ್ಭದಲ್ಲೂ ಸ್ವಾಗತ ಕೋರುವ ಬ್ಯಾನರ್ ಹಾಗೂ ಫ್ಲೆಕ್ಸ್‌ಗಳನ್ನು ಎಲ್ಲೆಂದರಲ್ಲಿ ಅಳವಡಿಸಲಾಗುತ್ತಿದೆ. ಈ ವರ್ತನೆಯಿಂದ ಸಾರ್ವಜನಿಕ ಸ್ಥಳಗಳು ವಿರೂಪಗೊಳ್ಳುತ್ತಿರುವುದಾಗಿ ಸಾರ್ವಜನಿಕರು ದೂರುತ್ತಿದ್ದಾರೆ.

ಕಣ್ಮುಚ್ಚಿ ಕುಳಿತ ಬಿಬಿಎಂಪಿ ಅಧಿಕಾರಿಗಳು: 'ಬಿಬಿಎಂಪಿ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಅಳವಡಿಕೆಯಾಗದಂತೆ ತಡೆಯಬೇಕು. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಹೈಕೋರ್ಟ್ ಆದೇಶ ಹೊರಡಿಸಿದೆ.

ಆದೇಶ ಉಲ್ಲಂಘಿಸಿ ಜಾಹೀರಾತು ಫಲಕ, ಫ್ಲೆಕ್ಸ್ ಹಾಗೂ ಬ್ಯಾನರ್‌ಗಳನ್ನು ಅಳವಡಿಸುತ್ತಿದ್ದರೂ ಬಿಬಿಎಂಪಿ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ರಾಜಕಾರಣಿಗಳಿಗೆ ಹೆದರಿ, ಕ್ರಮ ಜರುಗಿಸಲು ಬಿಬಿಎಂಪಿ ಅಧಿಕಾರಿಗಳು ಹಿಂದೇಟು ಹಾಕುತ್ತಿದ್ದಾರೆ.

'ವಿಜಯನಗರ, ಗೋವಿಂದ ರಾಜನಗರಗಳಲ್ಲಿ ಪೈಪೋಟಿಗೆ ಬಿದ್ದವರಂತೆ ರಾಜಕಾರಣಿಗಳು ಫ್ಲೆಕ್ಸ್ ಹಾಗೂ ಬ್ಯಾನರ್ ಕಟ್ಟಿದ್ದಾರೆ. ಮರಗಳು, ಕಟ್ಟಡಗಳು, ರಸ್ತೆ ಪಕ್ಕದ ಗೋಡೆಗಳು, ಮೆಟ್ರೊ ಪಿಲ್ಲರ್‌ಗಳು ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲೆಲ್ಲ ಫ್ಲೆಕ್ಸ್–ಬ್ಯಾನರ್‌ಗಳಿವೆ. ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಸ್ಥಳೀಯ ನಿವಾಸಿಯೊಬ್ಬರು ದೂರಿದರು.

'ಸ್ಥಳೀಯ ಶಾಸಕರು, ಅವರ ಬೆಂಬಲಿಗರೇ ಹೆಚ್ಚಿನ ಸಂಖ್ಯೆಯಲ್ಲಿ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಿದ್ದಾರೆ. ಅವುಗಳನ್ನು ತೆರವು ಮಾಡಲು ಅಧಿಕಾರಿಗಳು ಭಯಪಡುತ್ತಿದ್ದಾರೆ. ಸಾಮಾನ್ಯ ಜನರು ಯಾರಾದರೂ ಫ್ಲೆಕ್ಸ್–ಬ್ಯಾನರ್ ಅಳವಡಿಸಿದರೆ ಮಾತ್ರ ತ್ವರಿತ ಕ್ರಮ ಜರುಗಿಸುತ್ತಾರೆ' ಎಂದು ಅವರು ಹೇಳಿದರು.

'ಹೈಕೋರ್ಟ್ ಆದೇಶ ಜಾರಿಗೊಳಿಸುವಲ್ಲಿ ಬಿಬಿಎಂಪಿ ಅಧಿಕಾರಿಗಳು ವಿಫಲರಾಗಿದ್ದಾರೆ. ನ್ಯಾಯಾಲಯವೇ ಮಧ್ಯಪ್ರವೇಶಿಸಿ, ಸಾರ್ವಜನಿಕ ಸ್ಥಳಗಳನ್ನು ರಕ್ಷಿಸಬೇಕು. ಚುನಾವಣೆ ಆಯೋಗವೂ ಈ ಬಗ್ಗೆ ಗಮನಹರಿಸಬೇಕು' ಎಂದು ಸಾರ್ವಜನಿಕರು ಕೋರಿದ್ದಾರೆ.

ಪೊಲೀಸರೂ ಮೌನ: ಸಾರ್ವಜನಿಕ ಸ್ಥಳಗಳಲ್ಲಿ ಜಾಹೀರಾತು ಫಲಕ, ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸುವವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಾರ್ವಜನಿಕ ಸ್ಥಳಗಳ ವಿರೂಪ ತಡೆ ಕಾಯ್ದೆಯಲ್ಲಿ ಅವಕಾಶವಿದೆ. ಆದರೆ, ರಾಜಕಾರಣಿಗಳ ಫ್ಲೆಕ್ಸ್–ಬ್ಯಾನರ್ ವಿಚಾರದಲ್ಲಿ ಪೊಲೀಸರೂ ಮೌನವಾಗಿದ್ದಾರೆ.

ಬಸವೇಶ್ವರನಗರ ಪೊಲೀಸ್ ಠಾಣೆ ಕಟ್ಟಡದ ಗೋಡೆಗೆ ಬ್ಯಾನರ್ ಕಟ್ಟಿದ್ದಕ್ಕಾಗಿ ಸರ್ವೋದಯ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಆಡಳಿತ ಮಂಡಳಿ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ಎಫ್‌ಐಆರ್ ದಾಖಲಿಸಿಕೊಂಡಿದ್ದರು.

'ಓ ಮೈ ಲವ್' ಸಿನಿಮಾ ಜಾಹೀರಾತು ಹಾಕಿದ್ದ ಆರೋಪದಡಿ ನಿರ್ದೇಶಕ ಸ್ಮೈಲ್ ಸೀನು ಹಾಗೂ ಇತರರ ವಿರುದ್ಧವೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿತ್ತು. ಆದರೆ, ರಾಜಕಾರಣಿಗಳು ಹಾಗೂ ಅವರ ಬೆಂಬಲಿಗರ ಮೇಲೆ ಪ್ರಕರಣ ದಾಖಲಿಸಿಕೊಳ್ಳಲು ಪೊಲೀಸರು ಹಿಂದೇಟು ಹಾಕುತ್ತಿದ್ದಾರೆ.



ದೀಪಾಂಜಲಿ ನಗರದ ಮೆಟ್ರೊ ನಿಲ್ದಾಣದಲ್ಲಿ ಪಿಲ್ಲರ್‌ಗಳಿಗೆ ಅನಧಿಕೃತವಾಗಿ ಬ್ಯಾನರ್ ಹಾಗೂ ಫ್ಲೆಕ್ಸ್ ಅಳವಡಿಸಿರುವುದು – ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್‌.ಜಿ



ಬಾಪೂಜಿ ನಗರದಲ್ಲಿ ಅಳವಡಿಸಿರುವ ಫ್ಲೆಕ್ಸ್‌ಗಳು

'ಮುಖ್ಯಮಂತ್ರಿ, ಸಚಿವರ ಫೋಟೊ'

'ವಿಜಯನಗರ, ರಾಜಾಜಿನಗರ, ದೀಪಾಂಜಲಿನಗರ, ರಾಜರಾಜೇಶ್ವರಿನಗರಗಳಲ್ಲಿ ಅಳವಡಿಸಿರುವ ಫ್ಲೆಕ್ಸ್‌ಗಳಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಹಲವು ಸಚಿವರ ಫೋಟೊಗಳಿವೆ. ಹೈಕೋರ್ಟ್ ಆದೇಶ ಜಾರಿಗೊಳಿಸಬೇಕಾದ ಆಡಳಿತ ಪಕ್ಷದವರೇ ಅನಧಿಕೃತ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸುತ್ತಿದ್ದಾರೆ. ಇದು ಯಾವ ನ್ಯಾಯ' ಎಂದು ಸಾರ್ವಜನಿಕರು ಪ್ರಶ್ನಿಸಿದರು.

'ಬಿಜೆಪಿಯವರು ತಮ್ಮ ಸರ್ಕಾರದ ಸಾಧನೆ ಪೋಸ್ಟರ್‌ಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿದ್ದಾರೆ. ಸರ್ಕಾರದ ವಿರುದ್ಧ ಕಾಂಗ್ರೆಸ್‌ನವರೂ ಪೋಸ್ಟರ್ ಹಾಕಿದ್ದಾರೆ. ಎರಡೂ ಪಕ್ಷದಿಂದಲೂ ಸಾರ್ವಜನಿಕ ಸ್ಥಳಕ್ಕೆ ಧಕ್ಕೆ ಆಗುತ್ತಿದೆ' ಎಂದು ದೂರಿದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ಲಿಂಗಾಯತ ಸಮುದಾಯದವರು ಪ್ರಾರ್ಥನೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

ಸಾಂವಿಧಾನಿಕ ಮಾನ್ಯತೆಗಾಗಿ ಲಿಂಗಾಯತರ ಪ್ರತಿಭಟನೆ

ಬೆಂಗಳೂರು: 'ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮರು ಪ್ರಸ್ತಾವ ಸಲ್ಲಿಸಬೇಕು' ಎಂದು ಒತ್ತಾಯಿಸಿ ಲಿಂಗಾಯತ ಸಮುದಾಯದವರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಅಖಿಲ ಭಾರತ ಲಿಂಗಾಯತ ಸಮನ್ವಯ ಸಮಿತಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

'ಲಿಂಗಾಯತ ಎಂಬುದು ಸ್ವತಂತ್ರ ಧರ್ಮವಾಗಿದ್ದು, ಧಾರ್ಮಿಕ ಅಲ್ಪಸಂಖ್ಯಾತರ ಸ್ಥಾನಮಾನ ನೀಡಬೇಕೆಂದು ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ನೇತೃತ್ವದ ಸಮಿತಿ ವರದಿ ನೀಡಿದೆ. ಇದೇ ವರದಿಯನ್ವಯ ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮರು ಪ್ರಸ್ತಾವ ಸಲ್ಲಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಕೂಡಲ ಸಂಗಮದಲ್ಲಿರುವ ಬಸವಣ್ಣನವರ ಐಕ್ಯಮಂಟಪದಲ್ಲಿ ₹ 5 ಪ್ರವೇಶ ಶುಲ್ಕ ಸಂಗ್ರಹಿಸಲಾಗುತ್ತಿದೆ. ಇದರಿಂದ ಜನರಿಗೆ ತೊಂದರೆ ಆಗುತ್ತಿದ್ದು, ಶುಲ್ಕವನ್ನು ಕೂಡಲೇ ರದ್ದುಪಡಿಸಬೇಕು. ಎಲ್ಲರಿಗೂ ಉಚಿತ ಪ್ರವೇಶ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

'ಕಲಬುರಗಿ ವಿಶ್ವವಿದ್ಯಾಲಯ ಮತ್ತು ಬೆಂಗಳೂರಿನ ಯಶವಂತಪುರ ರೈಲುನಿಲ್ದಾಣಕ್ಕೆ ವಿಶ್ವಗುರು ಬಸವಣ್ಣ ಅವರ ಹೆಸರಿಡಬೇಕು. ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರೆಂದು ಘೋಷಿಸಬೇಕು. ಮಂಗಳವೇಡೆಯನ್ನು ಬಸವಣ್ಣ ಅವರ ಕಾರ್ಯಕ್ಷೇತ್ರವೆಂದು ಪರಿಗಣಿಸಿ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸಮಿತಿಯ ಗೌರವಾಧ್ಯಕ್ಷ ಚನ್ನಬಸವಾನಂದ ಸ್ವಾಮೀಜಿ, ಅಧ್ಯಕ್ಷ ಅವಿನಾಶ ಭೂಶಿಕರ, ಸಿಂದಗಿಯ ಪ್ರಭುಲಿಂಗ ಸ್ವಾಮೀಜಿ, ಬಸವಜ್ಯೋತಿ ಮಾತಾಜಿ, ಸತ್ಯಾದೇವಿ ಮಾತಾಜಿ ಪ್ರತಿಭಟನೆಯಲ್ಲಿದ್ದರು.

ಬೆಳಗಾವಿಯಲ್ಲಿ ಮಹಾಧಿವೇಶನ: 'ಸಮುದಾಯದ ಬೇಡಿಕೆ ಈಡೇರಿಸಲು ಸರ್ಕಾರ ತ್ವರಿತಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಮಾರ್ಚ್ 19ರಂದು ಬೆಳಗಾವಿಯಲ್ಲಿ ಮಹಾಧಿವೇಶನ ನಡೆಸಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಪ್ರತಿಭಟನಕಾರರು ಹೇಳಿದರು.

'ಬಡ್ತಿ ಪಡೆದ ಶಿಕ್ಷಕರ ವೇತನ ತಾರತಮ್ಯ ಸರಿಪಡಿಸಿ'

ಬೆಂಗಳೂರು: ಕಾಲಮಿತಿ ವೇತನ ಬಡ್ತಿ ಪಡೆದ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗೂ ಬಡ್ತಿ ಪಡೆಯದ ವೇತನ ತಾರತಮ್ಯ ಸರಿಪಡಿಸುವಂತೆ ವಿಧಾನಪರಿಷತ್‌ನಲ್ಲಿ ಸೋಮವಾರ ಬಿಜೆಪಿಯ ಎಸ್.ವಿ. ಸಂಕನೂರು ಮತ್ತು ಶಶೀಲ್ ಜಿ. ನಮೋಶಿ ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, '10, 20, 30 ವರ್ಷಗಳ ಕರ್ತವ್ಯದ ಆಧಾರದ ಮೇಲೆ ವೇತನ ಬಡ್ತಿ ಪಡೆದಿದ್ದರೂ ಕಡಿಮೆ ವೇತನ ದೊರೆಯುತ್ತಿದೆ. 1983ರ ನಿಯಮಾವಳಿಗಳನ್ನು ಅನುಸರಿಸುತ್ತಿರುವುದರಿಂದ ಈ ರೀತಿ ತಾರತಮ್ಯವಾಗುತ್ತಿದೆ. ಇದನ್ನು ಸರಿಪಡಿಸಬೇಕು' ಎಂದು ಆಗ್ರಹಿಸಿದರು.

'ಕಿರಿಯರಿಗಿಂತ ಹಿರಿಯ ಶಿಕ್ಷಕರಿಗೆ ಕಡಿಮೆ ವೇತನ ದೊರೆಯುತ್ತಿದೆ. ಇದು ಶಿಕ್ಷಕರಿಗೂ ಮಾನಸಿಕ ಹಿಂಸೆಯಾಗಿದೆ. ಇದುವರೆಗಿನ ಎಲ್ಲ ಶಿಕ್ಷಣ ಸಚಿವರು ಈ ತಾರತಮ್ಯ ಇರುವುದನ್ನು ಒಪ್ಪಿಕೊಂಡಿದ್ದಾರೆ. ಆದರೆ, ಯಾವುದೇ ಬದಲಾವಣೆಯಾಗಿಲ್ಲ' ಎಂದು ದೂರಿದರು.

ಈ ಬಗ್ಗೆ ಉತ್ತರ ನೀಡಿದ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು, 'ಬಡ್ತಿ ಪಡೆದ ಶಿಕ್ಷಕರಿಗೆ ವೇತನದಲ್ಲಿ ಅನ್ಯಾಯವಾಗುತ್ತಿದೆ. ಆರನೇ ವೇತನ ಆಯೋಗದಲ್ಲೂ ಈ ಬಗ್ಗೆ ಪ್ರಸ್ತಾಪಿಸಲಾಗಿತ್ತು. ಈಗ ಏಳನೇ ವೇತನ ಆಯೋಗದಲ್ಲಿ ವ್ಯತ್ಯಾಸಗಳನ್ನು ಸರಿಪಡಿಸಲಾಗುವುದು. ಇಲ್ಲದಿದ್ದರೆ ನಿಯಮಾವಳಿಗಳನ್ನು ಬದಲಾಯಿಸಲಾಗುವುದು' ಎಂದು ಭರವಸೆ ನೀಡಿದರು.

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಕೆ: ಗೃಹ ಸಚಿವ ಆರಗ ಜ್ಞಾನೇಂದ್ರ

'ಸಿಮ್ ಜತೆ ಆಧಾರ್ ಸಂಖ್ಯೆ ಜೋಡಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೈಬರ್ ಅಪರಾಧಗಳನ್ನು ತಡೆಯಲು ಸಿಮ್ ಕಾರ್ಡ್‌ಗಳ ಜತೆ ಆಧಾರ್ ಕಾರ್ಡ್ ಜೋಡಿಸುವಂತೆ ಕೇಂದ್ರ ಸರ್ಕಾರಕ್ಕೆ ಕೋರಿಕೆ ಸಲ್ಲಿಸಲಾಗಿದೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವರ್ಷ	ಸೈಬರ್ ಅಪರಾಧಗಳು
2020	10,738
2021	8,132
2022	12,551
2023	1,325

(ಜನವರಿ 31ರವರೆಗೆ)

ವಿಧಾನ ಪರಿಷತ್‌ನಲ್ಲಿ ಸೋಮವಾರ ಪ್ರಶ್ನೋತ್ತರ ವೇಳೆಯಲ್ಲಿ ಬಿಜೆಪಿಯ ಭಾರತಿ ಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ಬುದ್ಧಿವಂತರೇ ತಂತ್ರಜ್ಞಾನ ದುರುಪಯೋಗಪಡಿಸಿಕೊಂಡು ದರೋಡೆ ಮಾಡುತ್ತಿದ್ದಾರೆ. ಸೈಬರ್ ವಂಚನೆಗೆ ಒಳಗಾದವರು 112 ಸಂಖ್ಯೆಗೆ ಘಟನೆ ನಡೆದ ಎರಡು ಗಂಟೆ ಒಳಗೆ ದೂರವಾಣಿ ಕರೆ ಮಾಡಿದರೆ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಿ ಹಣ ವರ್ಗಾವಣೆಯಾಗದಂತೆ ಯತ್ನಿಸಲಾಗುವುದು' ಎಂದು ವಿವರಿಸಿದರು.

'ಒಬ್ಬ ವ್ಯಕ್ತಿಗೆ ಗರಿಷ್ಠ ಒಂಬತ್ತು ಸಿಮ್ ಕಾರ್ಡ್‌ಗಳನ್ನು ನೀಡಬಹುದಾಗಿದೆ. ಕೆಲವರು ಈ ಸಿಮ್‌ಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ವಿದೇಶಗಳಿಂದಲೂ ಕರೆ ಮಾಡಿ ವಂಚಿಸುತ್ತಿದ್ದಾರೆ. ಇಂತಹ ವಂಚನೆಗಳ ಬಗ್ಗೆ ಎಚ್ಚರವಹಿಸುವಂತೆ ಸಾರ್ವಜನಿಕರಲ್ಲಿ ಪೊಲೀಸ್ ಇಲಾಖೆ ಜಾಗೃತಿ ಮೂಡಿಸುತ್ತಿದೆ. ಗ್ರಾಹಕರು ಸಿಮ್ ಕಾರ್ಡ್ ಅನ್ನು ಇತರರಿಗೆ ನೀಡಬಾರದು' ಎಂದರು.

'ರಾಜ್ಯದಲ್ಲಿ ಸೈಬರ್ ವಿಭಾಗವನ್ನು ಬಲಪಡಿಸಲಾಗಿದ್ದು, ಈಗಾಗಲೇ 45 ಠಾಣೆಗಳನ್ನು ಸ್ಥಾಪಿಸಲಾಗಿದೆ. ಪ್ರತಿ ಜಿಲ್ಲೆಯಲ್ಲೂ ಸೈಬರ್ ಠಾಣೆಗಳಿವೆ. ಬೇರೆ ರಾಜ್ಯದವರು ಸಹ ಇಲ್ಲಿನ ವ್ಯವಸ್ಥೆ ಬಗ್ಗೆ ಅಧ್ಯಯನ ಮಾಡಿದ್ದಾರೆ' ಎಂದು ತಿಳಿಸಿದರು.

ಉತ್ತರ ನೀಡದ ಸರ್ಕಾರ: ರಮೇಶ್ ಧರಣಿ

ಬೆಂಗಳೂರು: ತಾವು ಕೇಳಿದ ಪ್ರಶ್ನೆಗೆ ಸರ್ಕಾರ ಉತ್ತರ ನೀಡುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ವಿಧಾನಪರಿಷತ್‌ನಲ್ಲಿ ಸೋಮವಾರ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು ಕೆಲಕಾಲ ಸಭಾಪತಿ ಪೀಠದ ಮುಂದೆ ಧರಣಿ ನಡೆಸಿದರು.

'ಉತ್ತರ ನೀಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಉದ್ದೇಶಪೂರ್ವಕವಾಗಿ ಉತ್ತರ ನೀಡುವುದನ್ನು ಮುಂದೂಡಲಾಗುತ್ತಿದೆ ಅಥವಾ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವರ್ಗಾಯಿಸಿ ವಿಳಂಬ ಮಾಡಲಾಗುತ್ತಿದೆ' ಎಂದು ರಮೇಶ್ ದೂರಿದರು.

ಪೀಠದಲ್ಲಿದ್ದ ಉಪಸಭಾಪತಿ ಎಂ.ಕೆ ಪ್ರಾಣೇಶ್ ಅವರು ಮನವೊಲಿಸಿ ಸರ್ಕಾರದಿಂದ ಉತ್ತರ ಕೊಡಿಸುವುದಾಗಿ ಭರವಸೆ ನೀಡಿದ ಬಳಿಕ ತಮ್ಮ ಆಸನಕ್ಕೆ ತೆರಳಿದರು.

ಎಚ್‌ಡಿಕೆ ಪ್ರಕರಣ: ಪ್ರಮಾಣ ಪತ್ರಕ್ಕೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಮನಗರ ಜಿಲ್ಲೆ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮತ್ತು ಅವರ ಸಂಬಂಧಿಗಳಾದ ಮದ್ದೂರು ಶಾಸಕ ಡಿ.ಸಿ. ತಮ್ಮಣ್ಣ ಹಾಗೂ ಸಾವಿತ್ರಮ್ಮ ಸರ್ಕಾರಿ ಜಮೀನು ಕಬಳಿಸಿದ್ದಾರೆ' ಎಂಬ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಕಂದಾಯ ಇಲಾಖೆ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

'ಭೂಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ವಿಸ್ತೃತ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತರು ಹೊರಡಿಸಿರುವ ಆದೇಶ ಜಾರಿಗೊಳಿಸಬೇಕು ಎಂದು ಹೈಕೋರ್ಟ್ ಆದೇಶಿಸಿತ್ತು. ಆದರೆ, ಈ ಆದೇಶವನ್ನು ಜಾರಿಗೊಳಿಸಲು ರಾಜ್ಯ ಸರ್ಕಾರ ವಿಫಲವಾಗಿದೆ' ಎಂದು ಆಕ್ಷೇಪಿಸಿ 'ಸಮಾಜ ಪರಿವರ್ತನಾ ಸಮುದಾಯ'ದ ಮುಖ್ಯಸ್ಥ ಎಸ್.ಆರ್. ಹಿರೇಮಠ ಅವರು ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯನ್ನು ನ್ಯಾಯಮೂರ್ತಿ ಬಿ. ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ಪ್ರಮಾಣ ಪತ್ರ ಪರಿಶೀಲಿಸಿದ ನ್ಯಾಯಪೀಠ, 'ಕಂದಾಯ ಇಲಾಖೆ ಕಾರ್ಯದರ್ಶಿ ಸಲ್ಲಿಸಿರುವ ಈ ಪ್ರಮಾಣಪತ್ರದಲ್ಲಿ ಉಲ್ಲೇಖಿಸಿರುವ ವಿಚಾರಗಳು ಮತ್ತು ಅದನ್ನು ಸಲ್ಲಿಸಿರುವ ರೀತಿ ಸಮಾಧಾನ ಉಂಟು ಮಾಡುವಂತಿಲ್ಲ' ಎಂದು ಹೇಳಿದೆ.

'ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಿರುವ ಸರ್ವೆ ನಂಬರ್‌ಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರ್ ಹೊರಡಿಸಿರುವ ತೆರವು ನೋಟಿಸ್, ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಸಲ್ಲಿಸಲಾದ ಮೇಲ್ಮನವಿಗಳನ್ನು ಆಧರಿಸಿ ಉಪವಿಭಾಗಾಧಿಕಾರಿ ಮಾಡಿರುವ ಆದೇಶದ ಮಾಹಿತಿ ಸಲ್ಲಿಸಿ. ಅಂತೆಯೇ, ಉಪವಿಭಾಗಾಧಿಕಾರಿ ಆದೇಶವನ್ನು ಎತ್ತಿ ಹಿಡಿದಿರುವ ಜಿಲ್ಲಾಧಿಕಾರಿಯ ಆದೇಶ, ಗೋಮಾಳ ಒತ್ತುವರಿ ತೆರವಿನ ಬಳಿಕ ಮಹಜರ್ ನಡೆಸಿ, ಅದನ್ನು ವಶಕ್ಕೆ ಪಡೆದಿರುವುದು ಮತ್ತು ಅದನ್ನು ವಶಕ್ಕೆ ಪಡೆದಿರುವ ವರದಿಯನ್ನೂ ಒದಗಿಸಿ' ಎಂದು ನ್ಯಾಯಪೀಠ ಹೇಳಿದೆ.

'14 ಎಕರೆ 4 ಗುಂಟೆ ಜಮೀನನ್ನು 8 ಎಕರೆ 30 ಗುಂಟೆಗೆ ಇಳಿಸಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಈ ಪ್ರಮಾಣ ಪತ್ರದಲ್ಲಿ ಉಲ್ಲೇಖಿಸಿಲ್ಲ. ಹಾಗಾಗಿ ಅವುಗಳ ಸರ್ವೆ ನಂಬರ್‌ಗಳ ಕುರಿತಾದ ಮಾಹಿತಿಯನ್ನೂ ಸಲ್ಲಿಸಬೇಕು' ಎಂದು ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

'ಪೊಲೀಸರಿಂದ ಚಿನ್ನದ ವ್ಯಾಪಾರಿಗಳ ಸುಲಿಗೆ'

ಬೆಂಗಳೂರು: 'ರಾಜ್ಯದಲ್ಲಿ ಚಿನ್ನದ ವ್ಯಾಪಾರಿಗಳು ಮತ್ತು ಪಾನ್ ಬ್ರೋಕರ್‌ಗಳನ್ನು ಪೊಲೀಸರು ತನಿಖೆ ನೆಪದಲ್ಲಿ ಸುಲಿಗೆ ಮಾಡುತ್ತಿದ್ದಾರೆ. ರಕ್ಷಕರೇ ಭಕ್ಷಕರಂತೆ ವರ್ತಿಸುತ್ತಿದ್ದಾರೆ' ಎಂದು ಜೆಡಿಎಸ್ ಸದಸ್ಯ ಟಿ.ಎ. ಶರವಣ ವಿಧಾನ ಪರಿಷತ್‌ನಲ್ಲಿ ಸೋಮವಾರ ಆರೋಪಿಸಿದರು.



ಟಿ.ಎ.ಶರವಣ

ಗಮನ ಸೆಳೆಯುವ ಸೂಚನೆ ಮಂಡಿಸಿ ಮಾತನಾಡಿದ ಅವರು, 'ರಾಮನಗರ ಜಿಲ್ಲೆಯ ಹಲಗೂರು, ಬೆಂಗಳೂರು ನಗರದ ಹಲಸೂರು ಗೇಟ್, ಸಿಲ್ವರ್ ಜ್ಯುಬಿಲಿ ಪಾರ್ಕ್, ರಾಮಮೂರ್ತಿ ನಗರ, ನಂದಿನಿ ಬಡಾವಣೆ ಸೇರಿ ರಾಜ್ಯದ ಹಲವು ಪೊಲೀಸ್ ಠಾಣೆಗಳಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಚಿನ್ನಾಭರಣ ವ್ಯಾಪಾರಿಗಳನ್ನು ಬೆದರಿಸಿ ಸುಲಿಗೆ ಮಾಡುವುದನ್ನೇ ದಂಧೆ ಮಾಡಿಕೊಂಡಿದ್ದಾರೆ. ಒಂದು ಕಳ್ಳತನ ಪ್ರಕರಣ ಮುಂದಿಟ್ಟುಕೊಂಡು ರಾಜ್ಯದ ತುಂಬಾ ವಸೂಲಿ ಮಾಡುತ್ತಾರೆ. ಆ ಹಣವೆಲ್ಲ ಎಲ್ಲಿಗೆ ಹೋಗುತ್ತಿದೆ' ಎಂದು ಪ್ರಶ್ನಿಸಿದರು.

ಕಳ್ಳತನ ಪ್ರಕರಣಗಳಿಗೆ ಸಂಬಂಧಿಸಿದ ಚಿನ್ನಾಭರಣವನ್ನು ವ್ಯಾಪಾರಿಗಳು ಖರೀದಿಸಿದ್ದರೆ, ಪಾನ್ ಬ್ರೋಕರ್‌ಗಳು ಅಡಮಾನ ಇರಿಸಿಕೊಂಡಿದ್ದರೆ ಅದನ್ನು ವಶಕ್ಕೆ ಪಡೆಯಲು ನಿರ್ದಿಷ್ಟ ಪ್ರಕ್ರಿಯೆ ನಡೆಸಬೇಕು. ಸುಪ್ರೀಂ ಕೋರ್ಟ್ ಆದೇಶವೂ ಇದನ್ನು ಸ್ಪಷ್ಟವಾಗಿ ಹೇಳಿದೆ. ಆದರೆ, ಪೊಲೀಸರು ಯಾವುದನ್ನೂ ಪಾಲಿಸುತ್ತಿಲ್ಲ. ಅವರಿಗೆ ಗೂಂಡಾಗಿರಿಗೆ ಪರವಾನಗಿ ನೀಡುವುದು ಉತ್ತಮ ಎಂದರು.

'ನಾನು ರಾಜ್ಯದ ಚಿನ್ನಾಭರಣ ವ್ಯಾಪಾರಿಗಳ ಸಂಘದ ಅಧ್ಯಕ್ಷನೂ ಹೌದು. ವಶಪಡಿಸಿಕೊಂಡ ಚಿನ್ನಾಭರಣದಲ್ಲಿ ಅರ್ಧದಷ್ಟನ್ನು ಪೊಲೀಸರು ಕಬಳಿಸುತ್ತಾರೆ. ತಾಮ್ರ ಮಿಶ್ರಣ ಮಾಡಿ ವಾರಸುದಾರರಿಗೆ ನೀಡಲಾಗುತ್ತಿದೆ. ಅಮಾಯಕರಿಗೆ ಕಿರುಕುಳ ನೀಡುವುದು ನಿಲ್ಲಬೇಕು. ತನಿಖೆಗೆ ಅಗತ್ಯವಿದ್ದರೆ ನಿಯಮಾನುಸಾರ ನೋಟಿಸ್ ನೀಡಿ, ಕರೆಸಿಕೊಳ್ಳಬೇಕು' ಎಂದು ಆಗ್ರಹಿಸಿದರು.

ಸುತ್ತೋಲೆ ಮೂಲಕ ಸೂಚನೆ: ಉತ್ತರ ನೀಡಿದ ಗೃಹ ಸಚಿವ ಆರಗ ಜ್ಞಾನೇಂದ್ರ, 'ಪೊಲೀಸರಲ್ಲಿ ಎಲ್ಲವೂ ಸರಿ ಇದೆ ಎಂದು ನಾನು ಹೇಳುವುದಿಲ್ಲ. ಹೆಚ್ಚಿನವರು ಪ್ರಾಮಾಣಿಕರಿದ್ದಾರೆ. ತಪ್ಪುಗಳೂ ಆಗಬಹುದು. ಆದರೆ, ಕೆಲವು ಚಿನ್ನಾಭರಣ ವರ್ತಕರು ತನಿಖೆಗೆ ಸಹಕಾರ ನೀಡುವುದಿಲ್ಲ. ಅಂತಹ ಸಂದರ್ಭದಲ್ಲಿ ಕ್ರಮ ಕೈಗೊಳ್ಳುವುದು ಅನಿವಾರ್ಯ ಆಗುತ್ತದೆ' ಎಂದರು.

'ತಕ್ಷಣವೇ ಎಲ್ಲ ಪೊಲೀಸ್ ಠಾಣೆಗಳಿಗೆ ಸುತ್ತೋಲೆ ಹೊರಡಿಸಲಾಗುವುದು. ಚಿನ್ನಾಭರಣ ಕಳ್ಳತನಕ್ಕೆ ಸಂಬಂಧಿಸಿದ ಪ್ರಕರಣಗಳ ತನಿಖೆಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ನಿಯಮ ಪಾಲಿಸುವಂತೆ ಸೂಚಿಸಲಾಗುವುದು' ಎಂದು ಆರಗ ಜ್ಞಾನೇಂದ್ರ ಭರವಸೆ ನೀಡಿದರು.

ಸ್ಟೇಟ್‌ಕಾನ್ ಸಮ್ಮೇಳನದಲ್ಲಿ ಭಾಸ್ಕರ್ ಟಿ. ನಾಗೇಂದ್ರಪ್ಪ ಕೋರಿಕೆ

ಅಭಿವೃದ್ಧಿಗೆ ವೇಗ: ನೀತಿಗಳಲ್ಲಿ ಬದಲಾವಣೆ ಅಗತ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರವು ಮೂಲಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡುತ್ತಿದ್ದರೂ ಅಭಿವೃದ್ಧಿಯ ವೇಗ ಹೆಚ್ಚಿಸಲು ನೀತಿಗಳಲ್ಲಿ ಕೆಲವು ಬದಲಾವಣೆ ತರುವುದು ಅಗತ್ಯ' ಎಂದು ಕ್ರೆಡೈ ಬೆಂಗಳೂರು ಅಧ್ಯಕ್ಷ ಭಾಸ್ಕರ್ ಟಿ. ನಾಗೇಂದ್ರಪ್ಪ ಪ್ರತಿಪಾದಿಸಿದರು.

ನಗರದಲ್ಲಿ ಸೋಮವಾರ ಕ್ರೆಡೈ ಆಯೋಜಿಸಿದ್ದ ಸ್ಟೇಟ್‌ಕಾನ್–23 ಸಮ್ಮೇಳನದಲ್ಲಿ ಅವರು ಮಾತನಾಡಿದರು.

'ಕಾಲಮಿತಿ ಒಳಗೆ ಯೋಜನೆಗಳ ಮಂಜೂರಾತಿ, ಅನುಮೋದನೆ ಹಾಗೂ ಬಿಲ್ಡರ್–ಗ್ರಾಹಕರ ನಡುವೆ ವ್ಯವಹಾರ ಸುಲಭಗೊಳಿಸಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತರಬೇಕು' ಎಂದು ಕೋರಿದರು.

'ಮುದ್ರಾಂಕ ಹಾಗೂ ನೋಂದಣಿ ಶುಲ್ಕವನ್ನು ಇಳಿಕೆ ಮಾಡಬೇಕು. ಕ್ರೆಡೈ ಹಾಗೂ ಸರ್ಕಾರದ ನಡುವೆ ಸಮನ್ವಯ ವೇದಿಕೆ ಸ್ಥಾಪಿಸಬೇಕು' ಎಂದು ಅವರು ಒತ್ತಾಯಿಸಿದರು.

'ಪ್ರಧಾನ ಮಂತ್ರಿ ಆವಾಸ್ ಯೋಜನೆ ಬಗ್ಗೆ ಹೆಚ್ಚಿನ ಅರಿವು ಮೂಡಿಸಬೇಕು ಹಾಗೂ ಕಡಿಮೆ ದರದಲ್ಲಿ ವಸತಿ ಅಭಿವೃದ್ಧಿಗೆ ಖಾಸಗಿ ವಲಯಕ್ಕೆ ಸರ್ಕಾರವು ಪ್ರೋತ್ಸಾಹ ನೀಡಬೇಕು' ಎಂದು ಒತ್ತಾಯಿಸಿದರು.

'ರಾಜ್ಯ ಸರ್ಕಾರವು ಭೂಪರಿವರ್ತನೆ ಸರಳೀಕರಿಸಿದೆ. ಅರ್ಜಿ ಸಲ್ಲಿಸಿದ 7 ದಿನಗಳ ಒಳಗೆ ಜಿಲ್ಲಾಧಿಕಾರಿ ಭೂಪರಿವರ್ತನೆ ಅರ್ಜಿ ವಿಲೇವಾರಿ ಮಾಡಬೇಕು. ಯಾವ ಕಾರಣಕ್ಕೂ ವಿಳಂಬ ಮಾಡುವಂತಿಲ್ಲ. ದಾಖಲಾತಿಗಳು ಸರಿಯಿದ್ದರೆ ಸ್ವಯಂ ವಿಧಾನದ ಮೂಲಕವೇ ಅರ್ಜಿ ವಿಲೇವಾರಿ ಆಗುವಂತೆ ವ್ಯವಸ್ಥೆ ಮಾಡಲಾಗಿದೆ' ಎಂದು ಕಂದಾಯ ಸಚಿವ ಆರ್. ಅಶೋಕ್ ಹೇಳಿದರು.

ಸರ್ಕಾರಕ್ಕೂ ಆದಾಯ: 'ಕೈಗಾರಿಕೆಗಳ ಅನುಕೂಲಕ್ಕಾಗಿ 79ಎ ಹಾಗೂ 79 ಕಲಂ ರದ್ದು ಪಡಿಸಿದ್ದೇವೆ. ಇದರಿಂದ ಸರ್ಕಾರಕ್ಕೂ ಮುದ್ರಾಂಕ ಶುಲ್ಕದ ರೂಪದಲ್ಲಿ ಆದಾಯ ಬಂದಿದೆ' ಎಂದರು.

'ಕಂದಾಯ ಇಲಾಖೆಯವರು ಕೇಳಿದ್ದಕ್ಕಿಂತ ಹೆಚ್ಚಿನ ಸೌಲಭ್ಯ ಕಲ್ಪಿಸಲಾಗಿದೆ. ಡ್ರೋನ್ ಸರ್ವೆ ಸೇರಿದಂತೆ ಸಾರ್ವಜನಿಕರ ಅನುಕೂಲಕ್ಕೆ ತಕ್ಕಂತೆ ಎಲ್ಲ ಯೋಜನೆ ರೂಪಿಸಲಾಗುತ್ತಿದೆ. ಕಾವೇರಿ ಹೆಸರಿನ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. ಇನ್ನು ಮುಂದೆ ಉಪ ನೋಂದಣಿ ಕಚೇರಿಗಳಲ್ಲೇ ಆಸ್ತಿ ದಾಖಲೆಗಳೂ ಲಭಿಸಲಿವೆ' ಎಂದು ಹೇಳಿದರು.

ನೋಂದಣಿ ಹಾಗೂ ಮುದ್ರಾಂಕ ಇಲಾಖೆ ಆಯುಕ್ತೆ ಡಾ.ಬಿ.ಆರ್. ಮಮತಾ ಮಾತನಾಡಿ, 'ಆಸ್ತಿ ನೋಂದಣಿ ಪ್ರಕ್ರಿಯೆ ಸರಳ ಹಾಗೂ ನಾಗರಿಕ ಸ್ನೇಹಿಗೊಳಿಸಲು 'ಕಾವೇರಿ–2' ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ. ಆನ್‌ಲೈನ್ ನೋಂದಣಿ ವ್ಯವಸ್ಥೆಯು ಕಲಬುರಗಿ ಜಿಲ್ಲೆಯ ಚಿಂಚೋಳಿ ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ತರಲಾಗಿದೆ' ಎಂದು ಹೇಳಿದರು.

ಬಜೆಟ್‌ನಲ್ಲಿ ಸತ್ಯ ಹೇಳಿಲ್ಲ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರಿಗೆ ಸತ್ಯ ಹೇಳುವ ಕೆಲಸ ರಾಜ್ಯ ಬಜೆಟ್‌ನಲ್ಲಿ ಆಗಿಲ್ಲ. ಬಿಜೆಪಿಯವರು ತಮ್ಮ ಪ್ರಣಾಳಿಕೆಯನ್ನು ಮಂಡಿಸಲಿ. ನಾವು ನಮ್ಮ ಪ್ರಣಾಳಿಕೆಯನ್ನು ಮುಂದಿಡುತ್ತೇವೆ. ಸದನದಲ್ಲಿ ಈ ಕುರಿತು ಚರ್ಚೆ ಆಗಲಿ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು.

ವಿಧಾಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, 'ಇದು ಬಿಜೆಪಿ ಸರ್ಕಾರದ ನಿರ್ಗಮನದ ಬಜೆಟ್' ಎಂದು ಟೀಕಿಸಿದರು.

'ನಾವು ಈ ಸರ್ಕಾರದ ವಿರುದ್ಧ ಯಾವುದೇ ಆರೋಪ ಮಾಡಿದರೂ ಹಿಂದಿನ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆದಿತ್ತು ಎಂದು ಸುಳ್ಳು ಹೇಳುವುದನ್ನೇ ಚಾಳಿ ಮಾಡಿಕೊಂಡಿದ್ದಾರೆ' ಎಂದು ದೂರಿದರು.

ಮಧ್ಯಪ್ರವೇಶಿಸಿದ ಬಿಜೆಪಿಯ ಜಗದೀಶ ಶೆಟ್ಟರ್ ಮಾತನಾಡಿ, 'ಅರ್ಕಾವತಿ ಬಡಾವಣೆಯ ಡಿನೋಟಿಫಿಕೇಷನ್ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ವರದಿಯನ್ನು ನೀವು ಮುಖ್ಯಮಂತ್ರಿ ಆಗಿದ್ದಾಗ ವಿಧಾನಸಭೆಯಲ್ಲಿ ಯಾಕೆ ಮಂಡಿಸಲಿಲ್ಲ' ಎಂದು ಪ್ರಶ್ನಿಸಿದರು.

'ನಾವು ಸದನದಲ್ಲಿ ಮಂಡಿಸಿಲ್ಲ. ಸರಿ, ನೀವು ಅಧಿಕಾರದಲ್ಲಿ ಇದ್ದೀರಲ್ಲವೇ. ಯಾಕೆ ನೀವು ಮಂಡಿಸಿಲ್ಲ. ನಾನೇನಾದರೂ ವರದಿಯನ್ನು ನಾಶ ಮಾಡಿದ್ದೇನಾ?' ಎಂದು ಸಿದ್ದರಾಮಯ್ಯ ಅವರು ತಿರುಗೇಟು ನೀಡಿದರು.

ಉತ್ತರಪ್ರದೇಶ: ಎಲ್ಲ 80 ಕ್ಷೇತ್ರ ಗೆಲ್ಲಲು ಬಿಜೆಪಿ ಕಾರ್ಯತಂತ್ರ

ನವದೆಹಲಿ: ಲೋಕಸಭೆಯ ಮುಂದಿನ ಚುನಾವಣೆಯಲ್ಲಿ ಕೆಲ ಪ್ರಮುಖ ರಾಜ್ಯಗಳಲ್ಲಿ ಹಲವು ಕ್ಷೇತ್ರಗಳನ್ನು ಕಳೆದುಕೊಳ್ಳಬಹುದು ಎಂದು ನಿರೀಕ್ಷಿಸಿರುವ ಬಿಜೆಪಿ, ಇದಕ್ಕೆ ಪ್ರತಿಯಾಗಿ ದೊಡ್ಡರಾಜ್ಯವಾಗಿರುವ ಉತ್ತರಪ್ರದೇಶದಲ್ಲಿ ಎಲ್ಲ 80 ಕ್ಷೇತ್ರಗಳಲ್ಲೂ ಜಯಗಳಿಸುವ ಗುರಿಯೊಂದಿಗೆ ಈಗ ಕಾರ್ಯತಂತ್ರ ರೂಪಿಸುತ್ತಿದೆ.

ಬೂತ್ ಸಮಿತಿಗಳ ಪುನರ್‌ರಚನೆ ಸೇರಿದಂತೆ ವಿವಿಧ ಕ್ರಮಕ್ಕೆ ಮುಂದಾಗಿದೆ. ಬೂತ್‌ಗಳ ಪುನರ್ ರಚನೆ, ಫಲಾನುಭವಿಗಳ ಸಭೆ, ನಿರ್ದಿಷ್ಟ ಕ್ಷೇತ್ರಗಳಲ್ಲಿ ಪಕ್ಷದ ಪ್ರಚಾರ ಅಭಿಯಾನ ಜಾರಿಗೆ ಕೇಂದ್ರ ಸಚಿವರ ನಿಯೋಜನೆ ಸೇರಿದಂತೆ ವಿವಿಧ ಕ್ರಮಗಳನ್ನು ಜಾರಿಗೊಳಿಸಲು ಚಿಂತನೆ ನಡೆಸಿದೆ.

ಅಲ್ಲದೆ, ಇದಕ್ಕೆ ಹೆಚ್ಚುವರಿಯಾಗಿ ಗ್ರಾಮಭೇಟಿ, ಸಂಘಟನಾ ಪ್ರವಾಸ ಕಾರ್ಯಕ್ರಮವನ್ನು ರೂಪಿಸಿದೆ.

ಇತ್ತೀಚೆಗೆ ನಡೆದ ಪಕ್ಷದ ರಾಜ್ಯ ಸಮಿತಿ ಕಾರ್ಯಕಾರಿಣಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆದಿದೆ.

ರಾಜ್ಯದ ಎಲ್ಲ ಕ್ಷೇತ್ರಗಳನ್ನು ಗೆಲ್ಲಲು ಶ್ರಮಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಆಧ್ಯಕ್ಷ ಭೂಪೇಂದ್ರ ಸಿಂಗ್ ಚೌಧರಿ ಅವರು ಮುಖಂಡರಿಗೆ ಕರೆ ನೀಡಿದ್ದಾರೆ.

ಬಿಜೆಪಿ ರಾಜ್ಯದ ಎಲ್ಲ 1.75 ಲಕ್ಷ ಬೂತ್‌ಗಳಲ್ಲಿ ಅಸ್ತಿತ್ವ ಹೊಂದಿದೆ. 2019ರ ಚುನಾವಣೆಯಲ್ಲಿ 62 ಕ್ಷೇತ್ರ ಗೆದ್ದಿತ್ತು. ಸೋತಿದ್ದ 18 ಕ್ಷೇತ್ರಗಳಲ್ಲಿ ಬೂತ್ ಸಶಕ್ತೀಕರಣಕ್ಕೆ ಒತ್ತು ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೃಷಿಕ ಸಮಾಜದ ಕಟ್ಟಡ ಬಳಕೆಗೆ ಹೈಕೋರ್ಟ್ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಡ್ಸನ್ ವೃತ್ತದ ಬಳಿಯಿರುವ ಕರ್ನಾಟಕ ಪ್ರದೇಶ ಕೃಷಿಕ ಸಮಾಜ ಸಂಸ್ಥೆಯ ಕಟ್ಟಡದ (ಹಾಪ್ ಕಾಮ್ಸ್ ಎಂದೇ ಹೆಸರುವಾಸಿ) ಉಪಯೋಗಕ್ಕೆ ಹೈಕೋರ್ಟ್ ಹಸಿರು ನಿಶಾನೆ ತೋರಿದೆ.

'ಕಬ್ಬನ್ ಉದ್ಯಾನದ ವ್ಯಾಪ್ತಿಯಲ್ಲಿ ಅಕ್ರಮ ಕಟ್ಟಡ ನಿರ್ಮಿಸಲಾಗಿದೆ' ಎಂದು ಆರೋಪಿಸಿ 'ಕಬ್ಬನ್ ಪಾರ್ಕ್ ನಡಿಗೆದಾರರ ಸಂಘ'ದ ಅಧ್ಯಕ್ಷ ಎಸ್. ಉಮೇಶ್ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ಸರ್ಕಾರದ ಪರ ವಕೀಲ ಎಸ್.ಎಸ್.ಮಹೇಂದ್ರ, ಈ ಸಂಬಂಧ ಬೆಂಗಳೂರು ನಗರ ಸರ್ವೆ ವಲಯದ ಸಹಾಯಕ ನಿರ್ದೇಶಕರ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ಹೈಕೋರ್ಟ್ ಕಳೆದ ತಿಂಗಳ 25ರಂದು ನೀಡಿದ್ದ ಆದೇಶದಂತೆ ಇದೇ 4ರಂದು ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಪಕ್ಷಗಾರರ ಸಮ್ಮುಖದಲ್ಲಿ ಕೃಷಿಕ ಸಮಾಜದ ಕಟ್ಟಡದ ಜಾಗದ ಸರ್ವೆ ನಡೆಸಲಾಗಿದೆ. ಸರ್ವೆ ಅನುಸಾರ ಕೃಷಿಕ ಸಮಾಜದ ಕಟ್ಟಡವು ಕಬ್ಬನ್ ಪಾರ್ಕ್ ಪ್ರದೇಶದ ವ್ಯಾಪ್ತಿಯಿಂದ ಹೊರಗಿದೆ' ಎಂದು ತಿಳಿಸಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಸರ್ವೆ ವರದಿಯನ್ನು ಪರಿಗಣಿಸಿದರೆ ಕಟ್ಟಡ ಉಪಯೋಗಿಸಲು ಕೃಷಿಕ ಸಮಾಜಕ್ಕೆ ಅನುಮತಿ ನೀಡಬಹುದು' ಎಂಬ ಅಭಿಪ್ರಾಯ ವ್ಯಕ್ತಪಡಿಸಿತು. ಈ ಅನುಮತಿ ಅರ್ಜಿಯ ಕುರಿತಂತೆ ಈ ಕೋರ್ಟ್ ನೀಡುವ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ' ಎಂದೂ ಇದೇ ವೇಳೆ ಸ್ಪಷ್ಟಪಡಿಸಿತು.


ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಭರವಸೆ

'ಜೆಡಿಎಸ್ ಅಧಿಕಾರಕ್ಕೆ ಬಂದರೆ ಸ್ತ್ರೀಶಕ್ತಿ ಸಾಲಮನ್ನಾ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಜೆಡಿಎಸ್ ಅಧಿಕಾರಕ್ಕೆ ಬಂದರೆ ಸ್ತ್ರೀಶಕ್ತಿ ಸಂಘಗಳು ಪಡೆದಿರುವ ಸಾಲವನ್ನು ಸಂಪೂರ್ಣ ಮನ್ನಾ ಮಾಡಲಾಗುವುದು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಭರವಸೆ ನೀಡಿದರು.

ಜೆಡಿಎಸ್‌ಗೆ ಸೇರ್ಪಡೆಯಾದ ಕಾರ್ಯಕರ್ತರನ್ನು ಸ್ವಾಗತಿಸಿ ಮಾತನಾಡಿದ ಅವರು. ಜೆಡಿಎಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ 65 ವರ್ಷ ಮೇಲ್ಪಟ್ಟವರಿಗೆ ₹ 5,000 ಪಿಂಚಣಿ ಹಾಗೂ ವಿಧವಾ ವೇತನವನ್ನು ₹ 800ರಿಂದ ₹ 2,500ಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಿದರು.



ನೆಲಗದರನಹಳ್ಳಿಯ ಬಿಜೆಪಿ ಮುಖಂಡರಾದ ಕಾವ್ಯ ಹಾಗೂ ವೆಂಕಟೇಶ್ (ವೆಂಕಿ) ದಂಪತಿಯನ್ನು ಜೆಡಿಎಸ್‌ಗೆ ಎಚ್‌.ಡಿ. ಕುಮಾರಸ್ವಾಮಿ ಅವರು ಬರಮಾಡಿಕೊಂಡರು. ಶಾಸಕ ಆರ್‌. ಮಂಜುನಾಥ್, ಅಂದಾನಪ್ಪ, ಎಂ.ಮುನಿಸ್ವಾಮಿ, ಚರಣ್ ಗೌಡ, ರುದ್ರೇಗೌಡ, ಪದ್ಮಾವತಿ ನರಸಿಂಹಮೂರ್ತಿ, ಕೆಂಪ ಓಬಳಯ್ಯ ಹಾಜರಿದ್ದರು.

'ದಾಸರಹಳ್ಳಿ ಅಭಿವೃದ್ಧಿ ಕಾಮಗಾರಿಗಳ ತಡೆಯುವಲ್ಲಿ ಸಚಿವ ಆರ್. ಅಶೋಕ ಅವರ ಕೈವಾಡ ಇದೆ ಎಂಬುದು ಗೊತ್ತಾಗಿದೆ. ಈ ಹಿಂದೆ ಗೆಲ್ಲಿಸಿದ್ದ ಜನರಿಗೆ ದ್ರೋಹ ಮಾಡುವಂತಹ ಕೆಲಸವನ್ನು ಅವರು ಮಾಡುತ್ತಿದ್ದಾರೆ. ಇದಕ್ಕೆಲ್ಲಾ ಜನರು ಸರಿಯಾದ ಉತ್ತರ ಕೊಡಬೇಕಿದೆ' ಎಂದು ಆರೋಪಿಸಿದರು.

ಶಾಸಕ ಆರ್. ಮಂಜುನಾಥ್ ಮಾತನಾಡಿ, 'ನೆಲಗದರನಹಳ್ಳಿ ರಸ್ತೆ ಸೇರಿದಂತೆ ಕ್ಷೇತ್ರದ ಅಭಿವೃದ್ಧಿಗೆ ಮಾಜಿ ಶಾಸಕ ಮುನಿರಾಜು ಅಡ್ಡಗಾಲು ಹಾಕುತ್ತಿದ್ದಾರೆ. ಕ್ಷೇತ್ರದ ಜನತೆ ಗಮನಿಸಬೇಕು' ಎಂದರು.

ರಾಜ್ಯ ಉಪಾಧ್ಯಕ್ಷ ಅಂದಾನಪ್ಪ, ನಗರಸಭಾ ಮಾಜಿ ಸದಸ್ಯ ಗೋಪಾಲಕೃಷ್ಣ, ಕ್ಷೇತ್ರದ ಅಧ್ಯಕ್ಷ ಎಂ. ಮುನಿಸ್ವಾಮಿ, ಬಿಬಿಎಂಪಿ ಮಾಜಿ ಉಪ ಮೇಯರ್ ಪದ್ಮಾವತಿ ನರಸಿಂಹಮೂರ್ತಿ, ಮುಖಂಡರಾದ ಚರಣ್ ಗೌಡ, ಜಗದೀಶ್, ಪಾಪಣ್ಣ, ಕೆಂಪಹೋಬಳಯ್ಯ, ರುದ್ರೇಗೌಡ, ಹೆಗ್ಗನಹಳ್ಳಿ ಬ್ಲಾಕ್ ಅಧ್ಯಕ್ಷ ಎಚ್.ಜಿ. ಸುರೇಶ್ ಇದ್ದರು.

ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷಾ ಶುಲ್ಕ: ₹ 10 ಕಡಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಸಾಲಿನ ಎಸ್ಸೆಸ್ಸೆಲ್ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಪ್ರತಿ ವಿದ್ಯಾರ್ಥಿಗೆ ನಿಗದಿ ಮಾಡಿದ್ದ ಶುಲ್ಕದಲ್ಲಿ ₹ 10 ಕಡಿತ ಮಾಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆದೇಶ ಹೊರಡಿಸಿದೆ.

ಪರೀಕ್ಷಾ ಖರ್ಚು, ವೆಚ್ಚಗಳ ಭಾಗವಾಗಿ ಪ್ರತಿ ವಿದ್ಯಾರ್ಥಿಯಿಂದ ₹ 60 ಸಂಗ್ರಹಿಸಬೇಕು ಎಂದು ಮೊದಲು ಸೂಚಿಸಲಾಗಿತ್ತು. ಈಗ ಪ್ರತಿ ವಿದ್ಯಾರ್ಥಿಯಿಂದ ₹ 50 ಸಂಗ್ರಹಿಸುವಂತೆ ಮರು ಆದೇಶ ಹೊರಡಿಸಲಾಗಿದೆ.

ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ (ಬಿಇಒ) ಹಂತದಲ್ಲೇ ಪ್ರಶ್ನೆಪತ್ರಿಕೆ ಸಿದ್ಧಪಡಿಸಲು ಸೂಚಿಸಲಾಗಿದ್ದ ಆದೇಶದಲ್ಲಿ ಮಾರ್ಪಾಡು ಮಾಡಿ, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ, ಬಿಇಒಗಳ ಲಾಗಿನ್‌ಗೆ ಕಳುಹಿಸುವಂತೆ ಸೂಚಿಸಲಾಗಿದೆ. ಪೂರ್ವಸಿದ್ಧತಾ ಪರೀಕ್ಷೆಗಳು ಫೆ.23ರಿಂದ ಮಾರ್ಚ್ 1ರವರೆಗೆ ನಡೆಯಲಿವೆ.

ಪ್ರಾಯೋಗಿಕ ಪರೀಕ್ಷೆಗೆ ಮತ್ತೊಮ್ಮೆ ಅವಕಾಶ: ದ್ವಿತೀಯ ಪಿಯು ಪ್ರಾಯೋಗಿಕ ಪರೀಕ್ಷೆಗೆ ಗೈರು ಹಾಜರಾದ ವಿದ್ಯಾರ್ಥಿಗಳಿಗೆ ಫೆ.28ರವರೆಗೆ ಹಾಜರಾಗಲು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ಮತ್ತೊಮ್ಮೆ ಅವಕಾಶ ನೀಡಿದೆ.

ಸ್ವಾಮೀಜಿಗಳ ಜೊತೆ ನಡ್ಡಾ 'ಸಂತ ಮಂಥನ'

ಪ್ರಜಾವಾಣಿ ವಾರ್ತೆ

ಉಡುಪಿ: ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೋಮವಾರ ಪೇಜಾವರ ಮಠದಲ್ಲಿ ಹಲವು ಮಠಾಧೀಶರೊಂದಿಗೆ 'ಸಂತ ಮಂಥನ' ಸೌಹಾರ್ದ ಸಮಾಲೋಚನೆ ನಡೆಸಿದರು. ಈ ಸಂದರ್ಭ ಸ್ವಾಮೀಜಿಗಳ ನಿಯೋಗ ನಡ್ಡಾ ಅವರಿಗೆ 10 ಅಪೇಕ್ಷೆಗಳ ಮನವಿ ಸಲ್ಲಿಸಿತು.

'ದೇಶದ್ರೋಹಿ ಮತ್ತು ಭಯೋತ್ಪಾದಕ ಚಟುವಟಿಕೆಗಳನ್ನು ಮಟ್ಟಹಾಕಲು ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳಿಗೆ ಅನ್ವಯಿಸುವಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯ ಘಟಕ ಆರಂಭಿಸಬೇಕು. ಸನಾತನ ಧರ್ಮ, ಸಂಸ್ಕೃತಿ ಸಬ್ಬಿತಾರಗಳಿಗೆ ಸದಾ ಮನ್ನಣೆ ನೀಡಬೇಕು. ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೆ ಕ್ರಮ ಕೈಗೊಳ್ಳಬೇಕು, ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಕ್ಕೆ ಆದ್ಯತೆ ನೀಡಬೇಕು, ಕರಾವಳಿಯ ಪ್ರಾಕೃತಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂಪನ್ಮೂಲಗಳಿಗೆ ಹಾನಿಯಾಗದಂತೆ ಔದ್ಯಮಿಕ, ಔದ್ಯೋಗಿಕ ಪ್ರಗತಿಗೆ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು.

ತುಳು ಭಾಷೆಗೆ ರಾಜ್ಯದ ಅಧಿಕೃತ ಭಾಷೆ ಸ್ಥಾನಮಾನ ನೀಡಬೇಕು. ಗೋ ಹತ್ಯಾ ನಿಷೇಧ ಕಾನೂನು ಕಟ್ಟುನಿಟ್ಟಿನ ಜಾರಿಯ ಜೊತೆಗೆ ಗೋ ಸಂರಕ್ಷಣೆಗೆ ಪೂರಕ ಯೋಜನೆಗಳಿಗೆ ನೆರವು ನೀಡಬೇಕು, ಭ್ರಷ್ಟಾಚಾರ ಮುಕ್ತ, ಸ್ವಚ್ಛ, ಪಾರದರ್ಶಕ ಆಡಳಿತ ನೀಡಬೇಕು ಮತ್ತು ದೇವಸ್ಥಾನಗಳ ಭೂಮಿ ಅತಿಕ್ರಮಣ ತಡೆಗೆ ಕ್ರಮ ಕೈಗೊಳ್ಳಬೇಕು' ಎಂದು ಮನವಿಯಲ್ಲಿ ಒತ್ತಾಯಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ನಡ್ಡಾ, 'ಸಂತರೊಂದಿಗಿನ ಸಮಾಲೋಚನೆ ಸಂತಸ ತಂದಿದೆ' ಎಂದರು. ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ನಡ್ಡಾ ಅವರಿಗೆ ಶಾಲು, ಗೋಪಾಲಕೃಷ್ಣನ ಕಂಚಿನ ವಿಗ್ರಹ ನೀಡಿ ಗೌರವಿಸಿದರು.

ಪುತ್ತಿಗೆ ಮಠದ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕುಕ್ಕೆ ಸುಬ್ರಹ್ಮಣ್ಯ ಮಠದ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಮಂಗಳೂರು ಚಿತ್ರಾಪುರ ಮಠ ವಿದ್ಯೇಂದ್ರ ಸ್ವಾಮೀಜಿ, ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ, ಮಂಗಳೂರಿನ ಶ್ರೀ ಧಾಮ ಮಾಣಿಲದ ಮೋಹನದಾಸ ಸ್ವಾಮೀಜಿ, ಆನೆಗುಂದಿ ಸರಸ್ವತಿ ಪೀಠದ ಕಾಳ ಹಸ್ತೇಂದ್ರ ಸರಸ್ವತಿ ಸ್ವಾಮೀಜಿ, ಮಂಗಳೂರು ಗುರುಪುರ ಕ್ಷೇತ್ರದ ರಾಜಶೇಖರಾನಂದ ಸ್ವಾಮೀಜಿ ಇದ್ದರು.



ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಸೋಮವಾರ ಉಡುಪಿಯ ಪೇಜಾವರ ಮಠದಲ್ಲಿ ಮಠಾಧೀಶರೊಂದಿಗೆ 'ಸಂತ ಮಂಥನ' ಸೌಹಾರ್ದ ಸಮಾಲೋಚನೆ ನಡೆಸಿದರು.

ಮಾದಕ ವಸ್ತು ಪ್ರಕರಣ: 2ನೇ ಪೂರಕ ಚಾರ್ಜ್‌ಶೀಟ್ ಸಲ್ಲಿಕೆ

ನವದೆಹಲಿ: 'ಗುಜರಾತ್‌ನ ಮುಂದ್ರಾ ಬಂದರಿನಲ್ಲಿ 2021ರಲ್ಲಿ ಮಾದಕ ವಸ್ತು ವಶಪಡಿಸಿಕೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 22 ಆರೋಪಿಗಳ ವಿರುದ್ಧ ಸೋಮವಾರ ಎನ್‌ಐಎ ಎರಡನೇ ಪೂರಕ ಆರೋಪ ಪಟ್ಟಿ ಸಲ್ಲಿಸಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಆರೋಪಿಗಳಲ್ಲಿ ಆರು ಅಫ್ಗನ್ ಪ್ರಜೆಗಳು ಹಾಗೂ ಏಳು ಸಂಸ್ಥೆಗಳ ಹೆಸರಿದೆ.

ಹಂಪಿ ಕನ್ನಡ ವಿ.ವಿ: ವಿಜಯ್ ನೂತನ ಕುಲಪತಿ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ಹಂಪಿ ಕನ್ನಡ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಪ್ರೊ.ಟಿ.ಪಿ. ವಿಜಯ್ ಅವರನ್ನು ನೇಮಿಸಲಾಗಿದೆ.

ಹಾಲಿ ಕುಲಪತಿ ಪ್ರೊ.ಸ.ಚಿ. ರಮೇಶ ಅವರ ಅಧಿಕಾರದ ಅವಧಿ ಫೆ. 21ರಂದು ಕೊನೆಗೊಳ್ಳಲಿದೆ. ಇವರ ಅಧಿಕಾರದ ಅವಧಿ ಕೊನೆ ದಿನದಂದೇ ಜಾರಿಗೆ ಬರುವಂತೆ ವಿಜಯ್ ಅವರನ್ನು ಕುಲಪತಿಯಾಗಿ ನೇಮಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಆದೇಶ ಹೊರಡಿಸಿದ್ದಾರೆ.



ಟಿ.ಪಿ. ವಿಜಯ್

2019ರ ಫೆ. 20ರಂದ ಜಾರಿಗೆ ಬರುವಂತೆ ಮೂರು ವರ್ಷದ ಅವಧಿಗೆ ರಮೇಶ ಅವರನ್ನು ಕುಲಪತಿಯಾಗಿ ನೇಮಿಸಲಾಗಿತ್ತು. ಪುನಃ 2022ರ ಫೆ.22ರಂದು ಒಂದು ವರ್ಷ ಅಧಿಕಾರದ ಅವಧಿ ವಿಸ್ತರಿಸಲಾಗಿತ್ತು. ಪೂರ್ಣಾವಧಿಗೆ ಹೊಸ ಕುಲಪತಿ ಆಯ್ಕೆ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಹಂಪಿ ಕನ್ನಡ ವಿ.ವಿ. 1991ರ ಅಧಿನಿಯಮ ಸೆಕ್ಷನ್ 13(4)ರ ಪ್ರಕಾರ, ಮುಂದಿನ ಆದೇಶದ ವರೆಗೆ ಟಿ.ಪಿ. ವಿಜಯ್ ಅವರನ್ನು ಕುಲಪತಿ ಹುದ್ದೆಗೆ ನೇಮಿಸಲಾಗಿದೆ. ಟಿ.ವಿ. ವಿಜಯ್ ಅವರು ಸದ್ಯ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಈ ಹಿಂದೆ ಕುಲಸಚಿವರಾಗಿದ್ದರು.

26ರಿಂದ ವಿಪ್ರ ಅಡುಗೆದಾರರ ಸಮಾವೇಶ

ಕಲಬುರಗಿ: 'ವಿಪ್ರ ಅಡುಗೆದಾರರ ರಾಜ್ಯಮಟ್ಟದ ಪ್ರಥಮ ಸಮಾವೇಶ ಫೆ. 26 ಮತ್ತು 27ರಂದು ಕಲಬುರಗಿಯ ಹಳೆಯ ಕೊಹಾಯ ಭವನದಲ್ಲಿ ನಡೆಯಲಿದೆ. ಅಡುಗೆ ತಯಾರಕರ ಸಮಸ್ಯೆ ತಿಳಿಸುವಿಕೆ ಮತ್ತು ಪರಿಹಾರ ಕಂಡುಕೊಳ್ಳುವ ಉದ್ದೇಶವಿದೆ' ಎಂದು ಅಖಿಲ ಕರ್ನಾಟಕ ವಿಪ್ರ ಅಡುಗೆದಾರರು, ಅಡುಗೆ ಸಹಾಯಕರ ಕ್ಷೇಮಾಭಿವೃದ್ಧಿ ಸಂಘದ ರಾಜ್ಯ ಘಟಕದ ಅಧ್ಯಕ್ಷ ಗುರುರಾಜ ಕುಲಕರ್ಣಿ ಚಿಕ್ಕಾರಿ ತಿಳಿಸಿದರು.

'ಅನ್ನಪೂರ್ಣೇಶ್ವರಿ ಅಮ್ಮ ಪೂಜೆ ಮಾಡುವುದರ ಮೂಲಕ ಚಾಲನೆ ನೀಡುವರು. ಪಂಚಾಯತಿ ಸಹಯೋಗದಲ್ಲಿ ನಡೆಯುವ ಸಮಾವೇಶವನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭೆಯ ಉಪಾಧ್ಯಕ್ಷ ರಂಗನಾಥ ದೇಸಾಯಿ ಉದ್ಘಾಟಿಸುವರು. 27ರಂದು ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್ ಉದ್ಘಾಟಿಸುವರು' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.'ಕಾರ್ಮಿಕ ಸಚಿವ ಶಿವರಾಮ ಹೆಬ್ಬಾರ, ಜಿಲ್ಲಾ ಉಸ್ತುವಾರಿ ಸಚಿವ ಮುರಗೇಶ ನಿರಾಣಿ, ಸಂಸದ ಡಾ.ಉಮೇಶ ಜಾಧವ, ಕೆಕೆಆರ್‌ಡಿಬಿ ಅಧ್ಯಕ್ಷ ದತ್ತಾತ್ರೇಯ ಪಾಟೀಲ ರೇವೂರ, ಬ್ರಾಹ್ಮಣ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದ ಮೂರ್ತಿ ಪಾಲ್ಗೊಳ್ಳುವರು' ಎಂದರು.

ಸಿದ್ಧಾರ್ಥ ಜಮೀನು: ₹ 708 ಕೋಟಿಗೆ ಖರೀದಿ ಪ್ರಸ್ತಾವ

ಒಂದನೇ ಪುಟದಿಂದ...

ಈ ಭೂಮಿ ಸ್ವಾಧೀನ ಪಡಿಸಿಕೊಳ್ಳುವುದರಿಂದ ಹುಲಿ ಸಂರಕ್ಷಿತ ಪ್ರದೇಶದ ವನ್ಯಜೀವಿಗಳ ಸಂಚಾರ ಹಾಗೂ ಜೀವನಕ್ರಮಕ್ಕೆ ಅನುಕೂಲಕರ ಪರಿಸ್ಥಿತಿ ಉಂಟಾಗಲಿದೆ ಎಂದು ಪ್ರಸ್ತಾವದಲ್ಲಿ ತಿಳಿಸಲಾಗಿದೆ. ನರಸಿಂಹರಾಜಪುರ ತಾಲ್ಲೂಕಿನ ದಂಡುಬಿಟ್ಟಹಾರ ಹಾಗೂ ನಂದಿಗಾವೆ ಗ್ರಾಮದಲ್ಲಿ ವಿ.ಜಿ. ಸಿದ್ಧಾರ್ಥ ಹಾಗೂ ಕಾಫಿ ಡೇ ಸಂಸ್ಥೆಯ ಹೆಸರಿನಲ್ಲಿದ್ದ 31 ಆಸ್ತಿಗಳನ್ನು ಪಟ್ಟಿಯಲ್ಲಿ ಗುರುತಿಸಲಾಗಿದೆ.

ಜಮೀನಿನಲ್ಲಿದ್ದ ಮರಗಳೂ ಸೇರಿದಂತೆ ಎಕರೆಗೆ ₹ 16 ಲಕ್ಷಕ್ಕೆ ಖರೀದಿಸಲು ಇಲಾಖೆ ಮುಂದಾಗಿದೆ. ಈ ನಿರ್ಧಾರದಿಂದ ಅರಣ್ಯ ಇಲಾಖೆಗೆ ಅನುಕೂಲ ಆಗುವುದಕ್ಕಿಂತ ಸಿದ್ಧಾರ್ಥ ಕುಟುಂಬದವರಿಗೇ ಹೆಚ್ಚಿನ ಅನುಕೂಲವಾಗಲಿದೆ ಎಂದು ಪರಿಸರವಾದಿಗಳು ಹೇಳಿದರು.

‘ಸಿದ್ಧಾರ್ಥ ಕುಟುಂಬ ಆರ್ಥಿಕ ಸಂಕಷ್ಟದಲ್ಲಿದೆ. ಜಮೀನುಗಳನ್ನು ಅಡಮಾನ ಇಡಲಾಗಿದೆ. ಆದರೆ, ಸ್ವಪ್ರೇರಣೆಯಿಂದ ಸ್ಥಳಾಂತರಗೊಳ್ಳುವ ಇಚ್ಛೆಯುಳ್ಳ ಆದಿವಾಸಿಗಳಿಗೆ ಸಹಾಯ ಮಾಡಲು ಇಲಾಖೆಗೆ ಸಾಧ್ಯವಾಗುತ್ತಿಲ್ಲ’ ಎಂದು ದೂರಿದರು.

15 ವರ್ಷಗಳ ಹಿಂದೆಯೇ ಕುದುರೆಮುಖದ ಜನರಿಗೆ ಪುನರ್ವಸತಿ ಕಲ್ಪಿಸಬೇಕಿತ್ತು. ಅದಿನ್ನೂ ಸಾಕಾರಗೊಂಡಿಲ್ಲ. ಅನುದಾನದ ಕೊರತೆಯಿಂದ ದಾಂಡೇಲಿಯ ಪುನರ್ವಸತಿಯೂ ನನೆಗುದಿಗೆ ಬಿದ್ದಿದೆ. ಸದ್ಯಕ್ಕೆ ಈ ಪ್ರಸ್ತಾವವನ್ನು ಹಾಗೆಯೇ ಇಡಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದರು.

‘ಭೂಕಬಳಿಕೆಗೆ ಸಂಬಂಧಿಸಿದಂತೆ, ವಿ.ಜಿ.ಸಿದ್ಧಾರ್ಥ ಸೇರಿದಂತೆ ಹಲವರ ವಿರುದ್ಧ ಹಿಂದೆಯೇ ಸರ್ಕಾರದ ಮುಖ್ಯಕಾರ್ಯದರ್ಶಿಗೆ ದೂರು ನೀಡಿದ್ದೆ. ಮೊದಲು ಪ್ರಬಲರ ವಶದಲ್ಲಿರುವ ಅರಣ್ಯ ಭೂಮಿಯನ್ನು ವಶಕ್ಕೆ ಪಡೆಯಬೇಕು’ ಎಂದು ಸಾಮಾಜಿಕ ಹೋರಾಟಗಾರ ಎಸ್.ಆರ್.ಹಿರೇಮಠ ಹೇಳಿದ್ದಾರೆ.

ಶುದ್ಧ ನೀರು: ತನಿಖೆಗೆ ಶಿಫಾರಸು

ಒಂದನೇ ಪುಟದಿಂದ...

ಅವುಗಳಲ್ಲಿ 24,650 ಘಟಕಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. 569 ಘಟಕಗಳು ಕಾರ್ಯನಿರ್ವಹಿಸುತ್ತಿಲ್ಲ ಎಂಬ ಅಂಶ ವರದಿಯಲ್ಲಿದೆ.

25,219 ಘಟಕಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಮಾತ್ರ ವಿವಿಧ ಇಲಾಖೆಗಳು ಸಮಿತಿಯ ಜತೆ ಹಂಚಿಕೊಂಡಿವೆ. ಹಲವು ಪ್ರಕರಣಗಳಲ್ಲಿ ಟೆಂಡರ್ ಪ್ರಕ್ರಿಯೆ ನಡೆಸದೇ, ಯಾವುದೇ ನಿರ್ದಿಷ್ಟ ಮಾನದಂಡ ಅನುಸರಿಸದೇ ಹಾಗೂ ಪ್ರಯೋಗಾಲಯದ ವರದಿ ಪಡೆಯದೇ ಘಟಕಗಳನ್ನು ಅಳವಡಿಸಿರುವುದು ಕಂಡುಬಂದಿದೆ ಎಂದು ಸಮಿತಿ ಹೇಳಿದೆ.

7,893 ಘಟಕಗಳಲ್ಲಿ ಒಂದು ಅಥವಾ ಒಂದಕ್ಕಿಂತ ಹೆಚ್ಚು ಮಾನದಂಡಗಳ ಉಲ್ಲಂಘನೆ ಪತ್ತೆಯಾಗಿದೆ. ಅವುಗಳಲ್ಲಿ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯ 2,722 ಘಟಕಗಳು ಮತ್ತು ಯೋಜನಾ ಇಲಾಖೆ ವ್ಯಾಪ್ತಿಯ 2,458 ಘಟಕಗಳು ಇವೆ ಎಂದು ಸಮಿತಿ ತಿಳಿಸಿದೆ.

‘ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ (ಕೆಆರ್‌ಐಡಿಎಲ್) ನಿಗಮವು ಬೇರೆ ಬೇರೆಯವರಿಂದ ಬಿಡಿ ಭಾಗಗಳನ್ನು ಖರೀದಿಸಿ ಘಟಕಗಳನ್ನು ಅಳವಡಿಸಿತ್ತು. ನಂತರದಲ್ಲಿ ನಿರ್ವಹಣೆಗೆ ಗಮನಹರಿಸಿರಲಿಲ್ಲ. ವಿದ್ಯುನ್ಮಾನ ಸೇವೆಗಳನ್ನು ಒದಗಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯ ಸೆಕ್ಷನ್ 4-ಜಿ ಅಡಿಯಲ್ಲಿ ರಾಜ್ಯ ಸರ್ಕಾರದ ನೀಡಿದ್ದ ವಿನಾಯಿತಿಯನ್ನು ಕಿಯೋನಿಕ್ಸ್ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಲು ದುರ್ಬಳಕೆ ಮಾಡಿಕೊಂಡಿದೆ’ ಎಂಬುದು ಸದನ ಸಮಿತಿ ತನಿಖೆಯಲ್ಲಿ ಪತ್ತೆಯಾಗಿದೆ.

‘ಸಿದ್ದರಾಮಯ್ಯ ಸರ್ಕಾರ ಅತಿ ಭ್ರಷ್ಟ ಸರ್ಕಾರ’

ಒಂದನೇ ಪುಟದಿಂದ...

‘ನಾವು ಅತ್ಯಂತ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಜನರ ಸೇವೆ ಮಾಡಲು ಇಲ್ಲಿದ್ದೇವೆ. ತಾವು (ಕಾಂಗ್ರೆಸ್) ಭ್ರಷ್ಟರು ಅಂದ್ರೆ ಎಲ್ಲರೂ ಭ್ರಷ್ಟರು ಅನ್ನೋ ಭಾವನೆಯಿಂದ ಮಾತನಾಡುವುದು ಎಷ್ಟರ ಮಟ್ಟಿಗೆ ಸರಿ. ಯಾವ ಆಧಾರದ ಮೇಲೆ ಆರೋಪ ಮಾಡ್ತಾರೆ’ ಎಂದು ಪ್ರಶ್ನಿಸಿದರು.

‘ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಟೆಂಡರ್ ನೀಡಿಕೆಯಲ್ಲಿ ಸಂಪೂರ್ಣ ಪಾರದರ್ಶಕತೆ ಜಾರಿಗೆ ತಂದಿದ್ದೆವು. ಮೂರು ಹಂತಗಳಲ್ಲಿ ಪರಿಶೀಲನೆಗೆ ಒಳಪಟ್ಟ ಬಳಿಕವೇ ಟೆಂಡರ್ ಅಂತಿಮಗೊಳ್ಳುತ್ತದೆ. ನಮ್ಮ ವಿರುದ್ಧ ಶೇ 40 ರಷ್ಟು ಭ್ರಷ್ಟಾಚಾರದ ಆರೋಪವನ್ನು ಮಾಡಿದ್ದಾರೆ. ಆರೋಪ ಮಾಡಿದ ಗುತ್ತಿಗೆದಾರರು ಈವರೆಗೆ ಒಂದು ಸಾಕ್ಷ್ಯವನ್ನೂ ನೀಡಿಲ್ಲ. ತನಿಖಾ ಸಂಸ್ಥೆಗಳಲ್ಲಿ ಒಂದು ದೂರನ್ನೂ ದಾಖಲಿಸಿಲ್ಲ. ಈ ಪಿತೂರಿಯ ಹಿಂದೆ ಯಾರೆಲ್ಲ ಇದ್ದಾರೆ ಎಂಬುದು ಗೊತ್ತಿದೆ’ ಎಂದು ಬೊಮ್ಮಾಯಿ ಹರಿಹಾಯ್ದರು.

ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ

‘ಆ.15ಕ್ಕೆ ಎಲ್ಲ ಶಾಲೆಗಳಿಗೂ ಶೌಚಾಲಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಶಾಲೆಗಳಲ್ಲಿ ಆಗಸ್ಟ್ 15 ರೊಳಗೆ ಶೌಚಾಲಯಗಳ ನಿರ್ಮಾಣ ಪೂರ್ಣಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಉತ್ತರ ನೀಡಿದ ಸಂದರ್ಭದಲ್ಲಿ ಅವರು ಈ ವಿಷಯ ತಿಳಿಸಿದರು.

‘ನಮ್ಮ ಸರ್ಕಾರ ಶಿಕ್ಷಣಕ್ಕೆ ಹಿಂದೆಂಗಿಂತಲೂ ಹೆಚ್ಚಿನ ಆದ್ಯತೆ ನೀಡಿದೆ. ಶಾಲಾ ಕಟ್ಟಡಗಳ ದುರಸ್ತಿ ಮತ್ತು ವಿವೇಕ ಯೋಜನೆಯಡಿ ಹೊಸ ಕೊಠಡಿಗಳ ನಿರ್ಮಾಣ ಜೂನ್ ಒಳಗೆ ಪೂರ್ಣಗೊಳ್ಳಲಿದ್ದು, ಇದಕ್ಕಾಗಿ ₹1,900 ಕೋಟಿ ಮೀಸಲಿಡಲಾಗಿದೆ. 2015–16 ರ ಬಳಿಕ ಶಾಲಾ ಕೊಠಡಿಗಳೇ ನಿರ್ಮಾಣವಾಗಿರಲಿಲ್ಲ. ರಾಜ್ಯದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ನಮ್ಮ ಸರ್ಕಾರ 8,000 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ’ ಎಂದರು.

‘ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ 15,000 ಶಿಕ್ಷಕರನ್ನು ನೇಮಕ ಪ್ರಕ್ರಿಯೆ ಆರಂಭವಾಗಿದ್ದು, ಈ ಪೈಕಿ 5,000 ಶಿಕ್ಷಕರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ. ರಾಜ್ಯದಲ್ಲಿ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಅದರಲ್ಲೂ ಕಲ್ಯಾಣ ಕರ್ನಾಟಕ ಭಾಗದಲ್ಲಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಹೆಣ್ಣು ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಣ ಪಡೆಯುತ್ತಿರುವುದು ಸಕಾರಾತ್ಮಕ ಅಂಶ’ ಎಂದು ಬೊಮ್ಮಾಯಿ ಅವರು ತಿಳಿಸಿದರು.

ಮುಖ್ಯಮಂತ್ರಿಯವರ ಉತ್ತರಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ, ‘ನಿಮ್ಮ ಮಾಹಿತಿ ಸುಳ್ಳು’ ಎಂದರು. ‘ನಿಮ್ಮ ಅವಧಿಯ ಕಥೆ ನನಗೆ ಗೊತ್ತು. ಯಾರದ್ದೋ ಒತ್ತಡಕ್ಕೆ ಮಣಿದು ಪದವಿ ಪೂರ್ವ(ಪಿಯು) ಕಾಲೇಜುಗಳೇ ಇಲ್ಲದ ಊರುಗಳಿಗೂ ಪದವಿ ಕಾಲೇಜು ಮಂಜೂರು ಮಾಡಿದ್ದರು’ ಎಂದು ಬೊಮ್ಮಾಯಿ ಅವರು ಕುಟುಕಿದರು.

ಶೌಚಾಲಯಗಳ ಸಮಸ್ಯೆ ಪ್ರಸ್ತಾಪಿಸಿದ ಬಿಎಸ್‌ವೈ

ಮುಖ್ಯಮಂತ್ರಿ ಬೊಮ್ಮಾಯಿ ಅವರ ಉತ್ತರ ಮಧ್ಯೆಯೇ ಸಾರ್ವಜನಿಕ ಶೌಚಾಲಯಗಳ ಸಮಸ್ಯೆಗಳ ಬಗ್ಗೆ ಬಿಜೆಪಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರು ಸದನದ ಗಮನ ಸೆಳೆದರು.

‘ಸಾರ್ವಜನಿಕ ಶೌಚಾಲಯಗಳಿಂದ ಏನೂ ಪ್ರಯೋಜನ ಆಗುತ್ತಿಲ್ಲ. ಇವುಗಳ ನಿರ್ವಹಣೆಗೆ ಅಗತ್ಯವಿರುವ ನೀರಿನ ಲಭ್ಯತೆ ಇಲ್ಲ. ಶೇ 90 ರಷ್ಟು ಸಾರ್ವಜನಿಕ ಶೌಚಾಲಯಗಳ ಉದ್ದೇಶವೇ ಈಡೇರಿಲ್ಲ. ಆದ್ದರಿಂದ ಇನ್ನು ಮುಂದೆ ಸಾರ್ವಜನಿಕ ಶೌಚಾಲಯ ನಿರ್ಮಿಸುವುದನ್ನು ನಿಲ್ಲಿಸುವುದು ಸೂಕ್ತ’ ಎಂದು ಹೇಳಿದರು.

‘ಸಾರ್ವಜನಿಕ ಶೌಚಾಲಯಗಳ ಬದಲಿಗೆ ಮನೆ–ಮನೆಗೆ ಶೌಚಾಲಯಗಳ ನಿರ್ಮಾಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು’ ಎಂದು ಸಲಹೆ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಬೊಮ್ಮಾಯಿ, ‘ಸುಲಭ್ ಶೌಚಾಲಯ ಸಂಸ್ಥೆಯ ಮಾದರಿಯಲ್ಲಿ ಇವುಗಳ ನಿರ್ವಹಣೆಗೆ ಸರ್ಕಾರ ಚಿಂತನೆ ನಡೆಸಿದೆ’ ಎಂದರು.

ಶಾಸಕರ ಗೈರು: ಸಭಾಧ್ಯಕ್ಷ ಕಾಗೇರಿ ಗರಂ

ಸೋಮವಾರ ಬೆಳಿಗ್ಗೆ ಕಲಾಪ ಆರಂಭಗೊಂಡಾಗ ಕೋರಂ ಕೊರತೆಯಿಂದ ಸುಮಾರು ಒಂದು ಗಂಟೆಯಷ್ಟು ತಡವಾಗಿ ಕಲಾಪ ಆರಂಭಗೊಂಡಿತು. ಇದರಿಂದ ಬೇಸರಗೊಂಡಿದ್ದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಶಾಸಕರನ್ನು ತರಾಟೆಗೆ ತೆಗೆದುಕೊಂಡರು.

ಚುನಾವಣೆ ಬರುತ್ತಿದೆ ಎಂದು ಸದನಕ್ಕೆ ಹಾಜರಾಗದೇ ಕ್ಷೇತ್ರದಲ್ಲೇ ಉಳಿಯುವುದು ಸರಿಯಲ್ಲ. ಚುನಾವಣೆ ಹಿನ್ನೆಲೆಯಲ್ಲಿ ಸಂಸದೀಯ ವ್ಯವಸ್ಥೆಯನ್ನು ಕಡೆಗಣಿಸಬಾರದು. ಚುನಾವಣೆಯಲ್ಲಿ ಸೋಲು–ಗೆಲುವಿನ ಲೆಕ್ಕಾಚಾರದಲ್ಲಿ ಕಲಾಪಕ್ಕೆ ಗೈರಾಗುವುದು ತಪ್ಪು ಎಂದು ಕಾಗೇರಿ ಹೇಳಿದರು.

ಈ ವ್ಯವಸ್ಥೆಯ ಬಗ್ಗೆ ಜನರಲ್ಲಿ ಹೆಚ್ಚು ವಿಶ್ವಾಸ ಮೂಡುವಂತೆ ನಾವೆಲ್ಲ ನಡೆದುಕೊಳ್ಳಬೇಕು. ಜನರ ನಮ್ಮನ್ನು ಆಯ್ಕೆ ಮಾಡಿ ಕಳುಹಿಸುವುದೂ ಸದನಕ್ಕೆ ಹೋಗಿ ಅವರ ವಿಷಯಗಳನ್ನು ಪ್ರಸ್ತಾಪಿಸಲೆಂದು. ಆದ್ದರಿಂದ ಇನ್ನು ಉಳಿದಿರುವ ದಿನಗಳಿಗಾಗದರೂ ಬಂದು ಕಲಾಪದಲ್ಲಿ ಭಾಗವಹಿಸಬೇಕು ಎಂದು ಕಾಗೇರಿ ಮನವಿ ಮಾಡಿದರು.

ರಾಜ್ಯಪಾಲರ ಭಾಷಣದ ಮೇಲೆ ಕೇವಲ 15 ಶಾಸಕರು ಮಾತನಾಡಿದ್ದು, ಈ ಪೈಕಿ ಜೆಡಿಎಸ್‌ನ 7 ಶಾಸಕರು, ಕಾಂಗ್ರೆಸ್‌ನ 5 ಶಾಸಕರು ಮತ್ತು ಆಡಳಿತ ಪಕ್ಷದ ಮೂವರು ಚರ್ಚೆಯಲ್ಲಿ ಭಾಗವಹಿಸಿದ್ದರು.

5 ವರ್ಷಗಳಲ್ಲಿ 9,018 ಮಕ್ಕಳು ನಾಪತ್ತೆ!

ಬೆಂಗಳೂರು: ‘ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ 9,018 ಮಕ್ಕಳ ನಾಪತ್ತೆ ಮತ್ತು ಅಪಹರಣ ಪ್ರಕರಣಗಳು ದಾಖಲಾಗಿವೆ’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಪ್ರಶ್ನೋತ್ತರ ವೇಳೆಯಲ್ಲಿ ಜೆಡಿಎಸ್‌ನ ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ‘ಈ ಹಿಂದೆ ನಾಪತ್ತೆ ಮತ್ತು ಅಪಹರಣ ಪ್ರಕರಣ ವರದಿಯೇ ಆಗುತ್ತಿರಲಿಲ್ಲ. ಮಕ್ಕಳ ಮೇಲಿನ ಅಪರಾಧ ಪ್ರಕರಣಗಳ ಅಂಕಿ ಅಂಶಗಳನ್ನು ವಿಶ್ಲೇಷಿಸಿದರೆ ಸರಾಸರಿ ಶೇ 10ರಿಂದ 20ರಷ್ಟು ಹೆಚ್ಚಾಗಿದೆ’ ಎಂದರು.

‘ಐದು ವರ್ಷಗಳಲ್ಲಿ 12,592 ಪೋಕ್ಸೊ ಪ್ರಕರಣಗಳು ಸಹ ವರದಿಯಾಗಿವೆ. ಅತ್ಯಾಚಾರ, ಪೋಕ್ಸೊ ಪ್ರಕರಣಗಳ ತನಿಖೆಯನ್ನು 60 ದಿನಗಳ ಕಾಲಮಿತಿಯಲ್ಲಿ ತನಿಖೆಯನ್ನು ಪೂರ್ಣಗೊಳಿಸಲು ನಿರ್ದೇಶನ ನೀಡಲಾಗಿದೆ’ ಎಂದು ತಿಳಿಸಿದರು.

‘ಈಗ ಪ್ರತಿ ಠಾಣೆಯಲ್ಲೂ ಕನಿಷ್ಠ ಮೂವರು ಮಹಿಳಾ ಕಾನ್‌ಸ್ಟೆಬಲ್‌ಗಳಿದ್ದಾರೆ. ನಿರ್ಭಯಾ ನಿಧಿ ಅಡಿಯಲ್ಲಿ ₹500 ಕೋಟಿ ವೆಚ್ಚದಲ್ಲಿ 3,200 ಸ್ಥಳಗಳಲ್ಲಿ 7500 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಉದ್ದೇಶ ಹೊಂದಲಾಗಿದೆ. ಈಗಾಗಲೇ 4000 ಸಿಸಿಟಿವಿ ಕ್ಯಾಮೆರಾಗಳನ್ನು ಅಳಡಿಸಲಾಗಿದೆ’ ಎಂದರು.

ರೋಹಿಣಿ, ರೂಪಾಗೆ ನೋಟಿಸ್

ಒಂದನೇ ಪುಟದಿಂದ...

ಅವರ ಮಾತಿಗೆ ಸೋಮವಾರ ಮತ್ತೆ ಸಾಮಾಜಿಕ ಜಾಲತಾಣಗಳಲ್ಲೇ ಪ್ರತಿಕ್ರಿಯೆ ನೀಡಿರುವ ರೂಪಾ, ‘ನನ್ನನ್ನು ಮಾನಸಿಕ ಅಸ್ವಸ್ಥೆ ಎಂದಿದ್ದಾರೆ. ಇದು ಅವರು ಎಷ್ಟು ಕೀಳು ಎಂಬುದನ್ನು ತೋರಿಸುತ್ತದೆ. ಹಾಗೆ ಹೇಳುವುದು ಮಾನನಷ್ಟದ ಹೇಳಿಕೆ. ಅಶ್ಲೀಲ ಚಿತ್ರಗಳನ್ನು ಪುರುಷ ಐಎಎಸ್ ಅಧಿಕಾರಿಗಳಿಗೆ ಕಳುಹಿಸಿದ್ದು ಯಾವ ಕಾರಣಕ್ಕೆ? ಶಿಕ್ಷೆ ಆಗದಂತೆ ತಡೆಯುವುದಕ್ಕಾಗಿಯೇ ಎನ್ನುವುದನ್ನು ಅವರೇ ಉತ್ತರಿಸಲಿ’ ಎಂದು ಸವಾಲು ಹಾಕಿದ್ದಾರೆ.

ರೋಹಿಣಿ ಸಿಂಧೂರಿ ಅಭಿಮಾನಿಗಳ ಹೆಸರಲ್ಲಿ ರೂಪಾ ಅವರಿಗೆ ಜಾಲತಾಣಗಳಲ್ಲಿ ಒಂಬತ್ತು ಪ್ರಶ್ನೆಗಳನ್ನು ಕೇಳಲಾಗಿದೆ. ಕನ್ನಡಿಗರು, ಹೊರ ರಾಜ್ಯದವರು ಎನ್ನುವ ಭೇದದ ವಿರುದ್ಧ ಕಿಡಿಕಾರಲಾಗಿದೆ.

ಮುಖ್ಯಕಾರ್ಯದರ್ಶಿ ಭೇಟಿ ಮಾಡಿದ ಸಿಂಧೂರಿ: ಸೋಮವಾರ ಅಧಿವೇಶನದ ಸಮಯದಲ್ಲೇ ಮುಖ್ಯಕಾರ್ಯದರ್ಶಿ ವಂದಿತಾ ಶರ್ಮಾ ಅವರನ್ನು ಭೇಟಿ ಮಾಡಿದ ಸಿಂಧೂರಿ, ಪ್ರಕರಣ ಕುರಿತು ಚರ್ಚಿಸಿದರು. ಮೂರು ಪುಟಗಳ ಲಿಖಿತ ಪತ್ರ ನೀಡಿದರು.

‘ರೂಪಾ ಅವರಿಗೂ ನನಗೂ ಯಾವುದೇ ಸಂಬಂಧವಿಲ್ಲ. ನನ್ನ ಮೇಲೆ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಈ ಕುರಿತು ಮುಖ್ಯ ಕಾರ್ಯದರ್ಶಿಗೆ ಮಾಹಿತಿ ನೀಡಿದ್ದೇನೆ’ ಎಂದು ಭೇಟಿಯ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

‘ಕರ್ನಾಟಕದಲ್ಲಿ ಹಿರಿಯ ಅಧಿಕಾರಿಗಳ ಮಧ್ಯೆ ನಡೆಯುತ್ತಿರುವ ವಿದ್ಯಮಾನ ದುರದೃಷ್ಟಕರ. ಇಬ್ಬರಿಗೂ ಬುದ್ಧಿ ಹೇಳುವಂತೆ ಪ್ರಧಾನಮಂತ್ರಿ, ಗೃಹ ಸಚಿವಾಲಯವನ್ನು ಒತ್ತಾಯಿಸಿದ್ದೇನೆ’ ಎಂದು ಬಿಜೆಪಿ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯಾ ಅವರು ಟ್ವೀಟ್ ಮಾಡಿದ್ದಾರೆ.

ಸಂಪುಟ ಸಭೆಯಲ್ಲೂ ಪ್ರಸ್ತಾಪ: ‘ಸೋಮವಾರ ಸಂಜೆ ನಡೆದ ಸಚಿವ ಸಂಪುಟ ಸಭೆಯಲ್ಲೂ ಈ ವಿಷಯ ಪ್ರಸ್ತಾಪವಾಗಿದ್ದು, ಘಟನೆಯ ಕುರಿತು ಹಲವು ಸಚಿವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಸ್ಥಳ ತೋರಿಸದೆ ವರ್ಗಾವಣೆ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ’ ಎಂದು ಸಂಪುಟದ ಹಿರಿಯ ಸಚಿವರೊಬ್ಬರು ಮಾಹಿತಿ ನೀಡಿದರು.

ಲಿಖಿತ ಕ್ಷಮೆ ಕೇಳಿದ್ದಾರೆ: ಸಾ.ರಾ.ಮಹೇಶ್

‘ರೋಹಿಣಿ ಸಿಂಧೂರಿ ಹಾಗೂ ನನ್ನ ಮಧ್ಯೆ ಸಂಧಾನ ನಡೆದದ್ದು ನಿಜ. ಅವರು ಬಹಿರಂಗವಾಗಿ, ಲಿಖಿತವಾಗಿ ಕ್ಷಮೆಯಾಚಿಸಿದ್ದಾರೆ. ನಡವಳಿಕೆ ಬದಲಿಸಿಕೊಳ್ಳುವಂತೆ ಅವರಿಗೆ ಸೂಚಿಸಿದ್ದೇನೆ’ ಎಂದು ಶಾಸಕ ಸಾ.ರಾ.ಮಹೇಶ್ ಪ್ರತಿಕ್ರಿಯಿಸಿದ್ದಾರೆ. ‘ಪಕ್ಷದ ವರಿಷ್ಠರಾದ ದೇವೇಗೌಡ, ಕುಮಾರಸ್ವಾಮಿ ಅವರೂ ಸಲಹೆ ನೀಡಿದ್ದರು. ಒಂದೂವರೆ ವರ್ಷದ ಹೋರಾಟಕ್ಕೆ ತೆರೆ ಎಳೆದಿದ್ದೇನೆ. ಅವರ ವಿರುದ್ಧ ಮತ್ತೆ ಸಮರ ಸಾರುವುದಿಲ್ಲ’ ಎಂದಿದ್ದಾರೆ.

‘ರೂಪಾ ಪ್ರಶ್ನೆಗಳ ಸತ್ಯಶೋಧನೆ ಆಗಲಿ’

ಮೈಸೂರು: ‘ಐಪಿಎಸ್ ಅಧಿಕಾರಿ ಡಿ.ರೂಪಾ ಅವರು ಐಎಎಸ್ ರೋಹಿಣಿ ಸಿಂಧೂರಿ ಅವರ ಕುರಿತು ಫೇಸ್‌ಬುಕ್‌ನಲ್ಲಿ ಎತ್ತಿರುವ ಪ್ರಶ್ನೆಗಳು ನೈತಿಕವಾಗಿ ಹಾಗೂ ಕಾನೂನಾತ್ಮಕವಾಗಿ ಸರಿಯಾಗಿವೆ. ಅವುಗಳ ಸತ್ಯಶೋಧನೆಯಾಗಬೇಕು’ ಎಂದು ಸಂಸದ ಪ್ರತಾಪ್ ಸಿಂಹ ಪ್ರತಿಪಾದಿಸಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ‘ರೂಪಾ ಅವರ ಪ್ರಶ್ನೆಗಳ ಕುರಿತು ಮಾಧ್ಯಮಗಳೂ ಶೋಧನೆ ಮಾಡಬೇಕು. ಸರ್ಕಾರವೂ ಸಮಿತಿ ರಚಿಸಿ ಸತ್ಯಾಸತ್ಯತೆ ಪರಾಮರ್ಶಿಸಬೇಕು. ಇದು ಐಎಎಸ್, ಐಪಿಎಸ್ ನಡುವಿನ ಜಗಳವಲ್ಲ. ಕಾನೂನತ್ಮಾಕ ಪ್ರಶ್ನೆಗಳಿಗೆ ಉತ್ತರ ಹುಡುಕುವ ಸಮಯ’ ಎಂದರು.

‘ರೋಹಿಣಿ ಹಾಸನ ಜಿಲ್ಲಾಧಿಕಾರಿಯಾಗಿದ್ದಾಗ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರೊಂದಿಗೆ ಬೀದಿ ರಂಪಾಟವಾಗಿತ್ತು. ಐಎಎಸ್ ಅಧಿಕಾರಿ ರಶ್ಮಿ ಮಹೇಶ್ ಮೇಲೆ ಹಲ್ಲೆಯಾಗಿತ್ತು. ಜಿಲ್ಲಾಧಿಕಾರಿ ಶಿಖಾ ಅವರನ್ನು ಸಿದ್ದರಾಮಯ್ಯ ಶಿಷ್ಯ ಕೆ.ಮರೀಗೌಡ ಅವಾಚ್ಯ ಶಬ್ದದಿಂದ ನಿಂದಿಸಿದ್ದರು. ಪಿಎಸ್‌ಐ ಮಲ್ಲಿಕಾರ್ಜುನ ಬಂಡೆ ಅವರನ್ನು ಡ್ರ್ಯಾಗನ್‌ನಲ್ಲಿ ಚುಚ್ಚಿದಾಗ, ಕೋಲಾರ ಜಿಲ್ಲಾಧಿಕಾರಿಯಾಗಿದ್ದ ಡಿ.ಕೆ.ರವಿ ಅನುಮಾನಸ್ಪದವಾಗಿ ಸತ್ತಾಗ, ಕೊಡಗು ಡಿವೈಎಸ್ಪಿ ಗಣಪತಿ ಆತ್ಮಹತ್ಯೆ ಮಾಡಿಕೊಂಡಾಗ ರಾಜ್ಯದಲ್ಲಿ ಯಾವ ಸರ್ಕಾರವಿತ್ತು. ಅಧಿಕಾರಿಗಳ ಸ್ಥಿತಿ ಏನಾಗಿತ್ತು’ ಎಂದು ಪ್ರಶ್ನಿಸಿದರು.

‘2021ರ ಮೇ ತಿಂಗಳಲ್ಲಿ ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಒಂದೇ ದಿನ 24 ಜನ ಮೃತಪಟ್ಟಿದ್ದಕ್ಕೆ, ಮೈಸೂರಿನಿಂದ ಆಮ್ಲಜನಕ ಪೂರೈಕೆಯಾಗದಿದ್ದುದೇ ಕಾರಣ ಎಂಬ ಆರೋಪ ಬಂತು. ಮೈಸೂರಿನಿಂದಲೇ ಕೊಡಗು, ಮಂಡ್ಯಕ್ಕೂ ಆಮ್ಲಜನಕ ಪೂರೈಕೆಯಾಗುತ್ತಿತ್ತು. ಆರೋಪ ಬಂದ ಬಳಿಕ, ಪೂರೈಕೆ ಜವಾಬ್ದಾರಿ ನಾನು ಹೊತ್ತುಕೊಂಡೆ. ಎಸ್.ಟಿ.ಸೋಮಶೇಖರ್ ಜಿಲ್ಲಾ ಉಸ್ತುವಾರಿ ಸಚಿವರಾದ ಅದೇ ತಿಂಗಳು ಮೈಸೂರಿನಲ್ಲಿ 1,100 ಮಂದಿ ಕೋವಿಡ್‌ನಿಂದ ಮೃತಪಟ್ಟರು. ಇದರ ಬಗ್ಗೆಯೂ ರೂಪಾ ಪ್ರಶ್ನೆ ಎತ್ತಿದ್ದಾರೆ’ ಎಂದರು.

> **ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಹಾಗೂ ಐಪಿಎಸ್ ಅಧಿಕಾರಿ ಡಿ. ರೂಪಾ ನಡುವಿನ ಆರೋಪ, ಪ್ರತ್ಯಾರೋಪದಂತಹ ಅನಾರೋಗ್ಯಕರ ಬೆಳವಣಿಗೆಗೆ ಕಡಿವಾಣ ಅಗತ್ಯ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಮಗನ ಹೆಸರು ಎಳೆದು ತರಬೇಡಿ: ಡಿ.ಕೆ. ರವಿ ತಾಯಿ ಮನವಿ

ರಾಮನಗರ: ‘ನಿಮ್ಮ ಜಗಳದ ನಡುವೆ ನನ್ನ ಮಗನ ಹೆಸರು ಎಳೆದು ತರಬೇಡಿ’ ಎಂದು ಐಎಎಸ್ ಅಧಿಕಾರಿಯಾಗಿದ್ದ ದಿವಂಗತ ಡಿ.ಕೆ. ರವಿ ಅವರ ತಾಯಿ ಗೌರಮ್ಮ ಸೋಮವಾರ ಅಧಿಕಾರಿಗಳಾದ ಡಿ. ರೂಪಾ ಮತ್ತು ರೋಹಿಣಿ ಸಿಂಧೂರಿ ಅವರಿಗೆ ಮನವಿ ಮಾಡಿದರು.

ಚನ್ನಪಟ್ಟಣದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು, ‘ನನ್ನ ಮಗ ರವಿ, ರೋಹಿಣಿ ಸಿಂಧೂರಿ ಅವರ ಬ್ಯಾಚ್‌ಮೇಟ್. ಈ ಹಿಂದೆ ಆಕೆ ನಮ್ಮ ಮನೆಗೂ ಬಂದಿದ್ದರು. ಅವರಿಗೆ ನನ್ನ ಮಗ ಮೆಸೇಜ್ ಮಾಡಿರಲೂಬಹುದು. ಆದರೆ, ಅದೆಲ್ಲ ಈಗ ಮುಗಿದ ಅಧ್ಯಾಯ’ ಎಂದರು.

‘ಐಪಿಎಸ್ ಅಧಿಕಾರಿ ಡಿ. ರೂಪಾ ಅವರು ಈಗ ಅದನ್ನೆಲ್ಲ ಪ್ರಸ್ತಾಪಿಸಿ ಅನಗತ್ಯವಾಗಿ ನನ್ನ ಮಗನ ಹೆಸರಿಗೆ ಕಳಂಕ ತರಬಾರದು ಮತ್ತು ನಮ್ಮ ಕುಟುಂಬಕ್ಕೆ ನೋವು ನೀಡಬಾರದು’ ಎಂದು ಮನವಿ ಮಾಡಿದರು.

‘ಇಬ್ಬರೂ ಅಧಿಕಾರಿಗಳಾಗಿ ದೊಡ್ಡ ಹುದ್ದೆಗಳಲ್ಲಿ ಇದ್ದಾರೆ. ಅದನ್ನು ನಿಭಾಯಿಸಿಕೊಂಡು ಹೋಗಬೇಕು’ ಎಂದು ಗೌರಮ್ಮ ಕೋರಿದರು.

25, 26ರಂದು ಭಾರತಕ್ಕೆ ಜರ್ಮನಿ ಚಾನ್ಸಲರ್ ಭೇಟಿ

ನವದೆಹಲಿ: ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್ ಅವರು ಫೆ. 25 ಮತ್ತು 26ರಂದು ಭಾರತಕ್ಕೆ ಭೇಟಿ ನೀಡಲಿದ್ದಾರೆ. ಚಾನ್ಸಲರ್ ಆಗಿ ಅಧಿಕಾರ ವಹಿಸಿಕೊಂಡ ಬಳಿಕ ಇದೇ ಮೊದಲ ಬಾರಿಗೆ ಅವರು ಭಾರತದ ಪ್ರವಾಸ ಕೈಗೊಂಡಿದ್ದಾರೆ. 25ರಂದು ರಾಷ್ಟ್ರಪತಿ ಭವನದ ಮುಂಭಾಗದಲ್ಲಿ ಓಲಾಫ್ ಅವರಿಗೆ ವಿದ್ಯುಕ್ತ ಸ್ವಾಗತ ನಡೆಯಲಿದ್ದು, ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ.

26ರಂದು ಬೆಂಗಳೂರಿಗೆ ಭೇಟಿ ನೀಡಲಿದ್ದಾರೆ.

‘ಎರಡು ಕನಸು’ ಸಿನಿಮಾದ ಬಳಿಕ ವರನಟ ಡಾ.ರಾಜ್‌ಕುಮಾರ್ ಅವರ ಕಾಲ್‌ಶೀಟ್ ಮೂರು ವರ್ಷಕ್ಕೆ ಭರ್ತಿಯಾಗಿತ್ತು. ಈ ಸಂದರ್ಭದಲ್ಲಿ ಪಾರ್ವತಮ್ಮ ರಾಜ್‌ಕುಮಾರ್ ಅವರು ದೊರೆ–ಭಗವಾನ್ ಅವರಿಗೆ ಕೃತಿಯೊಂದನ್ನು ನೀಡಿ ಸಿನಿಮಾ ಮಾಡಲು ಸೂಚಿಸಿದ್ದರು. ರಾಜ್‌ಕುಮಾರ್ ಅವರಿಲ್ಲದ ಈ ಸಿನಿಮಾ ಮಾಡಲ್ಲ ಎಂದು ಕುಳಿತಿದ್ದ ದೊರೆ–ಭಗವಾನ್‌ಗೆ, ‘ಕಥೆ ಚೆನ್ನಾಗಿದೆ. ಬೇರೆ ಹೀರೊ ಒಬ್ಬರನ್ನು ಹಾಕಿಕೊಂಡು ನೀವೇ ನಿರ್ದೇಶನ ಮಾಡಿ. ನಾನು ನಿರ್ಮಾಣ ಮಾಡುತ್ತೇನೆ’ ಎಂದಿದ್ದರಂತೆ ಪಾರ್ವತಮ್ಮ ಅವರು. ಇದುವೇ ಮುಂದೆ ‘ಬಯಲು ದಾರಿ’ಯಾದ ಕಥೆಯನ್ನು ಭಗವಾನ್ ಹೇಳಿಕೊಂಡಿದ್ದರು. ಈ ದಾರಿಯ ಪಯಣ ನೆನಪಿಸಿಕೊಂಡಿದ್ದಾರೆ ನಟ ಅನಂತನಾಗ್

ಬಯಲ ದಾರಿ ಹಿಡಿದು ಹೋದ ‘ಗುರು’

ನುಡಿ ನಮನ

‘ದೊರೆ’ ಎಂದರೆ ರಾಜ. ‘ಭಗವಾನ್’ ಎಂದರೆ ದೇವರು. ನಿಮ್ಮ ಈ ಕಾಂಬಿನೇಷನ್ ಕೃಷ್ಣಾರ್ಜುನರ ಜೋಡಿಯಂತೆ ಎಂದು ಭಗವಾನ್ ಅವರ ಬಳಿ ನಾನು ಹೇಳಿಕೊಳ್ಳುತ್ತಿದ್ದ ಮಾತು ಈ ಸಂದರ್ಭದಲ್ಲಿ ಮೊದಲಿಗೆ ನೆನಪಾಗುತ್ತಿದೆ.

ನನ್ನ, ಅವರ ನಡುವೆ 50 ವರ್ಷಗಳ ಸುದೀರ್ಘ ಸಂಬಂಧ. ನನ್ನ ಈ ಸಿನಿಮಾಯಾನದಲ್ಲಿ ಕೆಲವರು ಮನಸ್ಸಿನಲ್ಲಿ ಗುರು ಸ್ಥಾನದಲ್ಲಿ ದ್ದಾರೆ. ಅದರಲ್ಲಿ ಜಿ.ವಿ. ಅಯ್ಯರ್, ಶ್ಯಾಮ್ ಬೆನಗಲ್, ಎಂ.ಎಸ್.ಸತ್ಯು ಜತೆ ಎಸ್.ಕೆ.ಭಗವಾನ್ ಅವರೂ ಇದ್ದಾರೆ. ಮುಂಬೈನಲ್ಲಿ ಬೆಳೆದ ನಾನು ಮತ್ತೆ ಕನ್ನಡದ ಮಣ್ಣಿಗೆ ಹೆಜ್ಜೆ ಇಟ್ಟ ಬಳಿಕ ಬೆಂಗಳೂರು, ಮೈಸೂರಿನಲ್ಲೇ ಹೆಚ್ಚು ಚಿತ್ರೀಕರಣ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಹಳೆ ಮೈಸೂರಿನ ಸಂಸ್ಕೃತಿ, ಸಂಸ್ಕಾರವನ್ನು ಕಲಿಸಿದವರೇ ಭಗವಾನ್. ಹಿರಿಯರನ್ನು ಏಕವಚನದಲ್ಲಿ ಕರೆಯಬಾರದು ಎಂದು ಹೇಳುತ್ತಿದ್ದರು. ಅದರಂತೆ ನಡೆದುಕೊಳ್ಳುತ್ತಿದ್ದೆನು. ನಾನು ‘ಗುರುಗಳೇ’ ಎಂದು ಕರೆದರೆ ಸಂತೋಷಪಡುತ್ತಿದ್ದರು. ‘ಅನಂತು ಈ ಕಾಲದಲ್ಲಿ ಯಾರೂ ಗುರು ಅನ್ನುವುದಿಲ್ಲ, ಭಗವಾನ್ ಎಂದೇ ಕರೆ’ ಎನ್ನುತ್ತಿದ್ದರು.

ಉದಯಕುಮಾರ್, ರಾಜ್‌ಕುಮಾರ್ ಹೀಗೆ ಕನ್ನಡ ಚಿತ್ರರಂಗದ ಹಿರಿಯರೆಲ್ಲರೂ ರಂಗಭೂಮಿಯಿಂದ ಬಂದವರು. ಇವರೆಲ್ಲರನ್ನೂ ಭಗವಾನ್ ತಮ್ಮ ಚಿತ್ರಗಳಲ್ಲಿ ಅದ್ಭುತವಾಗಿ ಬಳಸಿಕೊಂಡರು. ದೊರೆ ಅವರು ನಿಧನರಾದರೂ ಅವರ ಹೆಸರನ್ನು ಜೊತೆಯಲ್ಲಿಟ್ಟುಕೊಂಡೇ ಭಗವಾನ್ ಅವರು ಜೀವಿಸಿದ್ದರು.

ರಾಜ್‌ಕುಮಾರ್ ಅವರ ಜೊತೆ ಮೂವತ್ತಕ್ಕೂ ಅಧಿಕ ಸಿನಿಮಾಗಳನ್ನು ಈ ಜೋಡಿ ನೀಡಿತು. ನನ್ನ ಜೊತೆ ಹತ್ತು ಸಿನಿಮಾಗಳು... ಹೀಗಾಗಿ ದೊರೆ–ಭಗವಾನ್ ಜೊತೆ ನಾನು ಸೆಕೆಂಡ್ ಹೈಯೆಸ್ಟ್ ಚಿತ್ರಗಳನ್ನು ಮಾಡಿದವನು.

ನಾನು ಕಲಾತ್ಮಕ ಚಿತ್ರಗಳ ಮೂಲಕ ಚಿತ್ರರಂಗಕ್ಕೆ ಬಂದವನು. ಅಂದು ಕಮರ್ಷಿಯಲ್ ಸಿನಿಮಾಗಳು ಮತ್ತು ಆರ್ಟ್ ಸಿನಿಮಾಗಳು ಎಂಬ ಎರಡು ಮಾದರಿಯಲ್ಲಿ ಸಿನಿಮಾಗಳನ್ನು ಗುರುತಿಸು–ತ್ತಿದ್ದರು. ‘ಸಂಕಲ್ಪ’ ಸಿನಿಮಾ ಬಿಡುಗಡೆಯಾಗಿ ಅರೆಕಲಾ ಸಿನಿಮಾಗಳ ಬಳಿಕ ‘ದೇವರ ಕಣ್ಣು’ ಎಂಬ ಕಮರ್ಷಿಯಲ್ ಸಿನಿಮಾ ಮಾಡಿದೆ. ಇದರಲ್ಲಿ ಲೋಕೇಶ್ ಅವರ ಜೊತೆ ನಾನು ನಟಿಸಿದ್ದೆ. ಇದು ಕಮರ್ಷಿಯಲ್ ಸರ್ಕಿಟ್‌ನಲ್ಲಿ ಹೆಸರು ತಂದುಕೊಟ್ಟಿತು. ಇದಾಗಿ ಕೆಲ ಪ್ರಾಜೆಕ್ಟ್ ಬಳಿಕ ದೊರೆ–ಭಗವಾನ್ ಭೇಟಿ. ಇಲ್ಲಿಂದ ಶುರು ‘ಬಯಲು ದಾರಿ’ ಪಯಣ.

ಈ ಚಿತ್ರದಲ್ಲಿ ನನ್ನ ಜೊತೆಗಿದ್ದದ್ದು ಕಲ್ಪನಾ. ಆಗಲೇ ಅವರು ಸೂಪರ್‌ಸ್ಟಾರ್. ಅದರ ಸಿನಿಮಾಯಾನದಲ್ಲಿ ಅದು ನನ್ನ ಆರಂಭವಾಗಿತ್ತು ಅಷ್ಟೆ. ಇದಾದ ಬಳಿಕ ದೊರೆ–ಭಗವಾನ್ ಜೋಡಿಯ ಜೊತೆ ಸಾಲು ಸಾಲು ಸಿನಿಮಾಗಳನ್ನು ಮಾಡಿದೆ. ‘ಚಂದನದ ಗೊಂಬೆ’, ‘ಬೆಂಕಿಯ ಬಲೆ’, ‘ಬಿಡುಗಡೆಯ ಬೇಡಿ’ ಹೀಗೆ ತರಾಸು ಅವರ ಕಾದಂಬರಿ ಆಧಾರಿತ ಸಿನಿಮಾಗಳಲ್ಲಿ ನಟಿಸಿದೆ. ಈ ನಾಲ್ಕು ಚಿತ್ರಗಳೂ ಸೂಪರ್‌ಹಿಟ್ ಆದವು. ಭಗವಾನ್ ಅವರ ನಿರ್ದೇಶನದ ಕೊನೆಯ ಸಿನಿಮಾ ‘ಆಡುವ ಗೊಂಬೆ’ಯಲ್ಲೂ ನಾನು ನಟಿಸಿದ್ದೆ. ಭಗವಾನ್ ಅವರಿಗಿದ್ದ taste for good music was excellent. ಇದರಿಂದಾಗಿ ಅವರ ಸಿನಿಮಾ ಹಾಗೂ ಅದರಲ್ಲಿದ್ದ ಹಾಡುಗಳು ಇನ್ನೂ ಜೀವಂತವಾಗಿವೆ.

ಸಿನಿಮಾಗಳ ಸಂಖ್ಯೆ ಹೆಚ್ಚಾದಂತೆ ನಮ್ಮ ಬಾಂಧವ್ಯವೂ ಬೆಳೆಯಿತು.

ಭಗವಾನ್ ಎಂದರೆ Active ಪದಕ್ಕೆ ಪರ್ಯಾಯ. ತೆಳ್ಳಗಿನ ದೇಹ, ಚುರುಕಾದ ಓಡಾಟ, ಇನ್‌ಶರ್ಟ್; ಸೂಟು–ಬೂಟು, ಆಕಾರಾಡಿ. ಅವರಲ್ಲಿ ಜೀವನೋತ್ಸಾಹ ತುಂಬಿ ತುಳುಕುತ್ತಿತ್ತು. ಅವರ ದಿರಿಸು ಯುವಕರನ್ನೂ ನಾಚಿಸುವಂತೆ ಇರುತ್ತಿತ್ತು. ನನಗೂ ಟಿಪ್‌ಟಾಪ್ ಆಗಿ ಇರುವಂತೆ ಸೂಚಿಸುತ್ತಿದ್ದರು. ‘ತೆರೆ ಮೇಲೆ ಕಾಣಿಸಿಕೊಳ್ಳುತ್ತೀರಿ. ಜನರಲ್ಲಿ ನಿಮ್ಮ ಬಗ್ಗೆ ಒಂದು ಭಾವ ಮೂಡಿರುತ್ತದೆ. ಇದನ್ನು ಕೆಡಿಸಬಾರದು. ಸ್ಮಾರ್ಟ್ ಆಗಿ ಇರಬೇಕು’ ಎಂದು ನನಗೆ ಸೂಚಿಸುತ್ತಿದ್ದರು. 90 ವರ್ಷದ ಆಸುಪಾಸಿನ ವರೆಗೂ ತಮ್ಮ ಕಾರನ್ನು ತಾವೇ ಚಾಲನೆ ಮಾಡಿಕೊಂಡು ಚಿತ್ರೀಕರಣದ ಸ್ಥಳಕ್ಕೆ ಬರುತ್ತಿದ್ದರು.

ದೊರೆ ಅವರು ಮೂಲತಃ ಸಿನಿಮಾಟೋಗ್ರಫರ್. ನಿರ್ದೇಶನದ ಸಂದರ್ಭದಲ್ಲಿ ಚಿತ್ರಕಥೆ, ಸಾಹಿತ್ಯ, ಸಂಭಾಷಣೆಯ ಬಗ್ಗೆ ಭಗವಾನ್ ಹೆಚ್ಚು ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದರು. ನಟನೆ, ನಿರ್ದೇಶನ ಸೇರಿದಂತೆ ಸಿನಿಮಾದ in and out ಅವರಿಗೆ ತಿಳಿದಿತ್ತು. ಈ ಕಾರಣದಿಂದಲೇ ಸುಮಾರು ಐದಾರು ದಶಕ ಸಿನಿಮಾರಂಗದಲ್ಲಿ ರಾರಾಜಿಸಿದರು.

ನಿರೂಪಣೆ:
ಅಭಿಲಾಷ್ ಪಿ.ಎಸ್.



ಚಿತ್ರ: ಕೆ.ಎನ್. ನಾಗೇಶ್ ಕುಮಾರ್

ರಾಜ್ ಸ್ನೇಹಿ, ಕಾದಂಬರಿ ಪ್ರೇಮಿ

‘ಜೇಡರ ಬಲೆ’, ‘ಗೋವಾದಲ್ಲಿ ಸಿ.ಐ.ಡಿ 99’, ‘ಆಪರೇಷನ್ ಡೈಮಂಡ್ ರಾಕೆಟ್’, ‘ಆಪರೇಷನ್ ಜಾಕ್‌ಪಾಟ್‌ನಲ್ಲಿ ಸಿ.ಐ.ಡಿ 999’... ಹೀಗೆ ಡಾ.ರಾಜ್‌ಕುಮಾರ್ ಅವರ ಸೂಪರ್‌ಹಿಟ್ ಚಿತ್ರಗಳನ್ನು ಮಾಡಿ, ಅಲ್ಲಿ ದೊರೆ–ಭಗವಾನ್ ಛಾಪು ಎದ್ದುಕಾಣುತ್ತಿದೆ. ‘ಜೇಡರ ಬಲೆ’ ಮೂಲಕ ನಿರ್ದೇಶಕನ ಟೋಪಿ ತೊಟ್ಟ ಈ ಜೋಡಿ ಕನ್ನಡ ಚಿತ್ರರಂಗಕ್ಕೆ ಬಾಂಡ್ ಸಿನಿಮಾಗಳನ್ನು ಪರಿಚಯಿಸಿದ ಖ್ಯಾತಿಯೂ ಇದೆ. ಕನ್ನಡ ಚಿತ್ರರಂಗದಲ್ಲಿ ಆ ಕಾಲಕ್ಕೆ ಹೊಸ ಅಲೆಯನ್ನು ಎಬ್ಬಿಸಿದ ಚಿತ್ರಗಳವು.

‘ಕಸ್ತೂರಿ ನಿವಾಸ’, ‘ಗಿರಿಕನ್ಯೆ’, ‘ಜೀವನ ಚೈತ್ರ’, ‘ಎರಡು ಕನಸು’, ‘ನಾನೊಬ್ಬ ಕಳ್ಳ’ ಸೇರಿದಂತೆ ರಾಜ್ ಅವರ 32 ಚಿತ್ರಗಳನ್ನು ಈ ಜೋಡಿಯೇ ನಿರ್ದೇಶಿಸಿದೆ. ‘ಆಡುವ ಗೊಂಬೆ’ ಭಗವಾನ್ ಅವರು ನಿರ್ದೇಶಿಸಿದ ಕೊನೆಯ ಸಿನಿಮಾ.

ಮೈಸೂರಿನಲ್ಲಿ ಜನಿಸಿದ ಭಗವಾನ್ ಬೆಂಗಳೂರಿನಲ್ಲಿ ಶಿಕ್ಷಣ ಪಡೆದರು. ಹಿರಣ್ಣಯ್ಯ ಮಿತ್ರ ಮಂಡಳಿ ನಾಟಕಗಳ ಮೂಲಕ ಬಣ್ಣದ ಬದುಕನ್ನು ಆರಂಭಿಸಿದ್ದ ಅವರು, ‘ಭಾಗ್ಯೋದಯ’ ಸಿನಿಮಾ ಮೂಲಕ ನಟನಾಗಿ ಚಿತ್ರರಂಗಕ್ಕೆ ಹೆಜ್ಜೆ ಇಟ್ಟರು. ಚಿತ್ರರಂಗದಲ್ಲಿಯೇ ಬದುಕು ಅರಸಿ ಮದ್ರಾಸ್‌ಗೆ ಬಂದರು. ಅಲ್ಲಿ ನೆಲೆಯೂರಲು ಅವರು ತುಂಬಾ ಕಷ್ಟಪಟ್ಟರು. ಕ್ಯಾಮೆರಾಮ್ಯಾನ್ ಆಗಿದ್ದ ದೊರೆರಾಜ್ ಅವರ ಸ್ನೇಹಭಾಗ್ಯ ಆ ದಿನಗಳಲ್ಲೇ ಅವರಿಗೆ ಸಿಕ್ಕಿತು. ಅವರೊಂದಿಗೆ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿ, ವರನಟ ಡಾ.ರಾಜ್‌ಕುಮಾರ್ ಅವರ ಹಲವು ಸಿನಿಮಾಗಳಿಗೆ ಸಂಭಾಷಣೆಕಾರರಾಗಿಯೂ ಕಾರ್ಯನಿರ್ವಹಿಸಿದ್ದರು. ನಂತರದಲ್ಲಿ ದೊರೆ–ಭಗವಾನ್ ಜೋಡಿ ನಿರ್ದೇಶನಕ್ಕೆ ಇಳಿಯಿತು.

ರಾಜ್‌ಕುಮಾರ್ ಅವರ ಕುಟುಂಬಕ್ಕೆ ಚಿತ್ರಕಥೆಯನ್ನು ಒಪ್ಪಿಸುವ ಸವಾಲನ್ನು ಭಗವಾನ್ ಸಲೀಸಾಗಿ ನಿಭಾಯಿಸಿದ್ದಕ್ಕೆ ಹಲವು ಉದಾಹರಣೆಗಳಿವೆ. ‘ಕಸ್ತೂರಿ ನಿವಾಸ’ ಸಿನಿಮಾದ ಕಥೆ ತಮಿಳಿನಲ್ಲಿ ಸಿದ್ಧವಾಗಿತ್ತು. ಅದನ್ನು ಶಿವಾಜಿ ಗಣೇಶನ್ ಅವರೇ ತಿರಸ್ಕರಿಸಿದ್ದರು. ಅಂಥ ಸಿನಿಮಾವನ್ನು ಕನ್ನಡದಲ್ಲಿ ಒಪ್ಪಿಸಿದ ಜೋಡಿ ದೊರೆ–ಭಗವಾನ್. ಅದರಲ್ಲಿ ಬಳಸಿದ್ದ ತಂಜಾವೂರು ಬೊಂಬೆಯನ್ನು ತಮಿಳುನಾಡಿನ ಅಂಗಡಿಯಲ್ಲಿ ಹುಡುಕಿ ತರಲು ಪರದಾಡಿದ್ದ ಪ್ರಸಂಗವನ್ನೂ ಭಗವಾನ್ ಮೆಲುಕುಹಾಕುತ್ತಿದ್ದರು. ಆ ಸಿನಿಮಾ ಸೂಪರ್ ಹಿಟ್ ಆದದ್ದೇ ಅಲ್ಲದೆ, ಆಮೇಲೆ ತಮಿಳಿನಲ್ಲಿ ಶಿವಾಜಿ ಗಣೇಶನ್ ಅವರೇ ರೀಮೇಕ್ ಮಾಡಿದ್ದು ವಿಶೇಷ.

ದೊರೆ–ಭಗವಾನ್ ಅವರು ಕಾದಂಬರಿಪ್ರಿಯರಾಗಿದ್ದರು. ಪೌರಾಣಿಕ, ಕಾಲ್ಪನಿಕ ಚಿತ್ರಗಳು ಬರುತ್ತಿದ್ದ ಕಾಲದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳನ್ನು ತೆರೆಗೆ ತಂದ ಶ್ರೇಯಸ್ಸು ಈ ಜೋಡಿಯದ್ದು. ಮೊಟ್ಟಮೊದಲು ಕೃಷ್ಣಮೂರ್ತಿ ಪುರಾಣಿಕ ಅವರ ‘ಧರ್ಮ ದೇವತೆ’ ಕಾದಂಬರಿಯನ್ನು ‘ಕರುಣೆಯೇ ಕುಟುಂಬದ ಕಣ್ಣು’ ಎಂಬ ಸಿನಿಮಾವನ್ನಾಗಿ ಮಾಡಿದ ಈ ಜೋಡಿ, ನಂತರ ಸಾಲು ಸಾಲಾಗಿ ಮಹಿಳಾ ಕೇಂದ್ರಿತ, ಸಾಮಾಜಿಕ ವಿಷಯಗಳುಳ್ಳ ಇಪ್ಪತ್ನಾಲ್ಕು ಕಾದಂಬರಿ ಆಧಾರಿತ ಚಿತ್ರಗಳನ್ನು ತೆರೆಗೆ ತಂದಿತ್ತು. ಆದರ್ಶ ಫಿಲ್ಮ್ ಇನ್‌ಸ್ಟಿಟ್ಯೂಟ್ ಮೂಲಕ ಭಗವಾನ್ ಅವರು ಹಲವು ಪ್ರತಿಭೆಗಳನ್ನು ಚಿತ್ರರಂಗಕ್ಕೆ ಪರಿಚಯಿಸಿದರು.

ನಿರ್ದೇಶಕ ಭಗವಾನ್ ಇನ್ನಿಲ್ಲ

ಒಂದನೇ ಪುಟದಿಂದ...

‘ವಾರದ ಹಿಂದೆ ಮತ್ತೊಮ್ಮೆ ಹೃದಯದ ಸಮಸ್ಯೆ ಎದುರಾದಾಗ ಅವರನ್ನು ಜಯದೇವ ಹೃದ್ರೋಗ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಶಸ್ತ್ರಚಿಕಿತ್ಸೆ ನಡೆಸಿ ಪೇಸ್‌ಮೇಕರ್ ಅಳವಡಿಸಲಾಗಿತ್ತು. ಸೋಮವಾರ (ಫೆ.20) ಅವರನ್ನು ಮನೆಗೆ ಕರೆದುಕೊಂಡು ಹೋಗಲು ನಿರ್ಧರಿಸಿದ್ದೆವು. ಭಾನುವಾರ ತಡರಾತ್ರಿ ಅವರಿಗೆ ಹೃದಯಾಘಾತವಾಗಿದೆ. ಬೆಳಗ್ಗೆ 6.05ಕ್ಕೆ ಅವರು ನಿಧನರಾದರು’ ಎಂದು ಭಗವಾನ್ ಅವರ ಹಿರಿಯ ಪುತ್ರ ಜ್ಯೋತಿಂದರ್ ಮಾಹಿತಿ ನೀಡಿದರು.

ಮಧ್ಯಾಹ್ನ ರವೀಂದ್ರ ಕಲಾಕ್ಷೇತ್ರದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ನಟರಾದ ಅನಂತನಾಗ್, ಶಿವರಾಜ್‌ಕುಮಾರ್, ಗಣೇಶ್, ನಟಿ ಸುಧಾರಾಣಿ ಮುಂತಾದವರು ಅಂತಿಮ ದರ್ಶನ ಪಡೆದರು. ಸಂಜೆ ಚಾಮರಾಜಪೇಟೆ ಚಿತಾಗಾರದಲ್ಲಿ ಅಂತ್ಯಕ್ರಿಯೆ ನಡೆಯಿತು.

ಸಂಕ್ಷಿಪ್ತ ಸುದ್ದಿ

ಗುಂಡು ತಗುಲಿ ಬೈಕ್ ಸವಾರರಿಬ್ಬರು ಸಾವು: ಆರೋಪಿ ಬಂಧನ

ಚಿಕ್ಕಮಗಳೂರು: ತಾಲ್ಲೂಕಿನ ಬಿದಿರೆ ಸಮೀಪದ ರಸ್ತೆಯಲ್ಲಿ ರಮೇಶ್ ಎಂಬಾತ ಅಂಗನವಾಡಿ ಸಹಾಯಕಿಗೆ ಹಾರಿಸಿದ ಗುಂಡು, ಗುರಿ ತಪ್ಪಿ ಬೈಕ್ ಸವಾರರಿಗೆ ತಗುಲಿ, ಸವಾರರಿಬ್ಬರು ಸಾವಿಗೀಡಾಗಿದ್ದಾರೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಬಿದಿರೆಯ ಪ್ರವೀಣ್ (24) ಹಾಗೂ ಪ್ರಕಾಶ್ (25) ಮೃತರು.

‘ಹಳೆಯ ದ್ವೇಷ ಹಿನ್ನಲೆಯಲ್ಲಿ ಅಂಗನವಾಡಿ ಸಹಾಯಕಿ ಮಮತಾ ಮತ್ತು ರಮೇಶ್ ನಡುವೆ ಸೋಮವಾರ ಬೆಳಿಗ್ಗೆ ರಸ್ತೆಯಲ್ಲಿ ವಾಗ್ವಾದ ನಡೆದಿದೆ. ರಮೇಶ್ ಮನೆಯಿಂದ ಬಂದೂಕು ತಂದು ಗುಂಡು ಹಾರಿಸಿದ್ದಾರೆ. ಗುರಿ ತಪ್ಪಿ ಬೈಕ್‌ನಲ್ಲಿ ಸಾಗುತ್ತಿದ್ದವರಿಗೆ (ಒಬ್ಬರಿಗೆ ಎದೆ ಭಾಗ, ಮತ್ತೊಬ್ಬರಿಗೆ ಭುಜ) ಗುಂಡು ತಗುಲಿದೆ. ಒಬ್ಬರು ಸ್ಥಳದಲ್ಲೇ ಮೃತಪಟ್ಟರೆ, ಮತ್ತೊಬ್ಬರು ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಉಮಾಪ್ರಶಾಂತ್ ತಿಳಿಸಿದರು.

‘ಆರೋಪಿಗೆ ಮಾನಸಿಕ ಸ್ಥಿಮಿತ ಇಲ್ಲ; ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪ್ರಾಥಮಿಕ ವಿಚಾರಣೆಯಲ್ಲಿ ತಿಳಿದುಬಂದಿದೆ’ ಎಂದು ಹೇಳಿದರು.

ಬಾಳೆಹೊನ್ನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಕೀಲರ ರಕ್ಷಣಾ ಕಾಯ್ದೆಗಾಗಿ ಮಸೂದೆಗೆ ಒಪ್ಪಿಗೆ

ಬೆಂಗಳೂರು: ವಕೀಲರ ಬಹುದಿನಗಳ ಬೇಡಿಕೆಯಾಗಿದ್ದ ‘ವಕೀಲರ ರಕ್ಷಣಾ ಕಾಯ್ದೆ’ ಜಾರಿಗಾಗಿ ಮಸೂದೆಯೊಂದನ್ನು ಇದೇ ಅಧಿವೇಶನದಲ್ಲಿ ಮಂಡಿಸಲು ಸೋಮವಾರ ನಡೆದ ಸಚಿವ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ವಕೀಲರ ರಕ್ಷಣಾ ಕಾಯ್ದೆ ಜಾರಿ ಮಾಡಬೇಕು ಎಂದು ಬೆಂಗಳೂರು ಸೇರಿ ರಾಜ್ಯದ ಹಲವೆಡೆಗಳಲ್ಲಿ ವಕೀಲರು ಹೋರಾಟ ನಡೆಸುತ್ತಿ–ದ್ದರು. ಈ ಕುರಿತ ಮಸೂದೆಯನ್ನು ಅಧಿವೇಶನಲ್ಲಿ ಮಂಡಿಸಲು ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ ಎಂದು ಹಿರಿಯ ಸಚಿವರೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವೃತ್ತಿ ನಿರ್ವಹಿಸುವ ಸಂದರ್ಭದಲ್ಲಿ ವಕೀಲರು ಮತ್ತು ಅವರ ಕುಟುಂಬದವರು ಸಾಕಷ್ಟು ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದ್ದು, ಅವರ ರಕ್ಷಣೆಗಾಗಿ 2021 ರಲ್ಲಿ ‘ಬಾರ್ ಕೌನ್ಸಿಲ್ ಆಫ್ ಇಂಡಿಯಾ’ ಒಂದು ಕರಡು ಕಾಯ್ದೆಯನ್ನು ರೂಪಿಸಿತ್ತು.

ಕೈ ನೋವು– ಅರುಣ್ ಸಿಂಗ್‌ಗೆ ವೈದ್ಯಕೀಯ ತಪಾಸಣೆ

ಮಂಗಳೂರು: ಉಡುಪಿಯಲ್ಲಿ ಏರ್ಪಡಿಸಿದ್ದ ಬಿಜೆಪಿ ಬೂತ್ ಮಟ್ಟದ ಸಮಾವೇಶದಲ್ಲಿ ಭಾಗವಹಿಸಲು ನಗರಕ್ಕೆ ಬಂದಿದ್ದ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಇಲ್ಲಿನ ಎ.ಜೆ. ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಒಳಗಾದರು.

‘ಅರುಣ್ ಸಿಂಗ್ ಅವರಿಗೆ ಕೈ ನೋವು ಕಾಣಿಸಿಕೊಂಡಿತ್ತು. ಹಾಗಾಗಿ ವೈದ್ಯರಿಗೆ ತೋರಿಸಿದ್ದರು. ಇದೊಂದು ಮಾಮೂಲಿ ವೈದ್ಯಕೀಯ ಪರೀಕ್ಷೆ. ಆ ಬಳಿಕ ನಿಗದಿತ ಕಾರ್ಯಕ್ರಮಗಳಲ್ಲಿ ಅವರು ಭಾಗವಹಿಸಿದ್ದಾರೆ’ ಎಂದು ಬಿಜೆಪಿ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಸುದರ್ಶನ ಮೂಡುಬಿದಿರೆ ‘ಪ್ರಜಾವಾಣಿ’ಗೆ ತಿಳಿಸಿದರು.

ಕ್ಷೇಮ ಕುಶಲ



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಮಾದರಿ ಪ್ರಶ್ನೋತ್ತರ — ಎಸ್ಸೆಸ್ಸೆಲ್ಸಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

18) ಒಂದು ಸಮಾಂತರ ಶ್ರೇಢಿಯ 4ನೇ ಮತ್ತು 8ನೇ ಪದಗಳ ಮೊತ್ತವು 24 ಹಾಗೂ ಅದೇ ಶ್ರೇಢಿಯ 6ನೇ ಮತ್ತು 10ನೇ ಪದಗಳ ಮೊತ್ತವು 44 ಆಗಿದೆ. ಅದರ ಮೊದಲ 3 ಪದಗಳನ್ನು ಕಂಡುಹಿಡಿಯಿರಿ.

ಉತ್ತರ:– ದತ್ತ ಹೇಳಿಕೆಯಂತೆ,

$T_4 + T_8 = 24$ ಮತ್ತು $T_6 + T_{10} + 44$

$a + 3d + a + 7d = 24$ | $a + 5d + a + 9d = 44$

$2a + 10d = 24$ | $2a + 14d = 44$

2 ರಿಂದ ಭಾಗಿಸಿದಾಗ | 2 ರಿಂದ ಭಾಗಿಸಿದಾಗ

$a + 5d = 12$ ....(1) | $a + 7d = 22$ .... (2)

(1) ನ್ನು (2) ರಿಂದ ಕಳೆದಾಗ

$a + 7d = 22$

$\underline{a \pm 5d = 12}$

$2d = 10$

$$d = \frac{10}{2} = 5$$

(2) ರಿಂದ $a + 7d = 22$

$a + 7(5) = 22$

$a + 35 = 22$

$a = 22 - 35$

$a = -13$

$\therefore$ I ಪದ= $a = -\underline{13}$


II ಪದ = $a + d = -13 + 5 = -\underline{8}$

III ಪದ = $a + 2d$

$-13 + 2(5) = -13 + 10 = \underline{-3}$

19) Δ ABCಯಲ್ಲಿ $\angle ABC = 90^\circ$, $BD \perp AC$, BD= 8cm ಮತ್ತು AD= 4 cm ಆದಾಗ CDಯನ್ನು ಕಂಡುಹಿಡಿಯಿರಿ.

ಉತ್ತರ:–



$\angle ABC = 90^\circ$ $BD \perp AC$.

$\therefore BD^2 = AD \times CD \Rightarrow 8^2 = 4 \times CD$

$$CD = \frac{64}{4} = 16$$

$\therefore CD = 16$ cm

20) ವರ್ಗ ಸಮೀಕರಣವನ್ನು ಬಿಡಿಸಿ.

(1) $x^2 - 196 = 0$ (2) $5x^2 = 625$

ಉತ್ತರ (1) $x^2 - 196 = 0$


$\therefore x^2 - 196, \quad x = \pm 14$

(2) $5x^2 = 625$,

$$x^2 = \frac{625}{5} = 125$$

$$= \pm 5\sqrt{5}$$

21) ಈ ಚಿತ್ರದಲ್ಲಿ AB ಜ್ಯಾ = CD ಜ್ಯಾ. OP = x ಮಾನಗಳಿದ್ದರೆ OQನ ಉದ್ದವೆಷ್ಟು?



ಉತ್ತರ:– **OP = OQ = x**

[ಸಮ ಜ್ಯಾಗಳು ಕೇಂದ್ರದಿಂದ ಸಮದೂರದಲ್ಲಿರುತ್ತವೆ]

22) ಯೂಕ್ಲಿಡ್‌ನ ಅಲ್ಗಾರಿಥಂನ್ನು ಉಪಯೋಗಿಸಿಕೊಂಡು . 65 ಮತ್ತು 117 ಮ.ಸಾ.ಅ.ವನ್ನು ಕಂಡುಹಿಡಿಯಿರಿ

ಪರಿಹಾರ:– ಹಂತ 1: 65 ಮತ್ತು 117 ನ್ನು ಪರಿಗಣಿಸಿ

a = 117 & b = 65 ಆಗಿರಲಿ

65) 117 (1 — $a = (b \times q) + r$
65 — $117 = (65 \times 1) + 52$
52

ಹಂತ 2: a =65, b = 52ನ್ನು ಪರಿಗಣಿಸಿ


52) 65 (1 — $a = (b \times q) + r$
52 — $65 = (52 \times 1) + 13$
13

ಹಂತ 3: a = 52, b = 13ನ್ನು ಪರಿಗಣಿಸಿ


13) 52 (4 — $a = (b \times q) + r$
52 — $52 = (13 \times 4) + 0$
0

ಶೇಷವು ಸೊನ್ನೆಯಾದ್ದರಿಂದ 65 ಮತ್ತು 117 ರ ಮ.ಸಾ.ಅ.ವು 13.

23) ಈ ಚಿತ್ರದಲ್ಲಿ DE || BC. AD = 6 ಸೆಂ.ಮೀ., BD = 1.5 ಸೆಂ.ಮೀ. ಮತ್ತು AE = 4 ಸೆಂ.ಮೀ. ಇದ್ದರೆ CE ಯ ಉದ್ದವನ್ನು ಕಂಡುಹಿಡಿಯಿರಿ.



ಉತ್ತರ:-



$$\frac{AD}{DB} = \frac{AE}{EC}$$

$$\frac{6}{1.5} = \frac{4}{EC}$$

$6\,EC = 1.5 \times 4$

$6\,EC = 6$

$\therefore EC = 1$

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ರಸಾಯನ ವಿಜ್ಞಾನ

ಮಾದರಿ ಪ್ರಶ್ನೋತ್ತರ — ಪಿಯುಸಿ

10) ಯಾವುದನ್ನು ಗ್ಲೈಕೊಸೈಡಿಕ್ ಬಂಧ ಎನ್ನುವರು?

ಉತ್ತರ:- ಡೈಸಕರೈಡ್‌ಗಳನ್ನು ದುರ್ಬಲ ಆಮ್ಲ ಅಥವಾ ಕಿಣ್ವಗಳೊಡನೆ ಜಲವಿಭಜನೆಗೊಳಿಸಿದಾಗ ಎರಡು ಅಣುಗಳನ್ನು ನೀಡುತ್ತಿದ್ದು, ಅವು ಒಂದೇ ರೀತಿಯ ಅಥವಾ ಬೇರೆ ಬೇರೆ ರೀತಿಯ ಮೋನೋಸಕರೈಡ್‌ಗಳು ಇರಬಹುದು. ಎರಡು ಮೋನೋಸಕರೈಡ್‌ಗಳು ಆಕ್ಸೈಡ್ ಬಂಧದ ಮೂಲಕ ಒಂದು ನೀರಿನ ಅಣುವಿನ ನಷ್ಟದೊಂದಿಗೆ ಒಟ್ಟಿಗೆ ಸೇರಿಕೊಳ್ಳುತ್ತವೆ. ಈ ರೀತಿ ಎರಡು ಮೋನೋಸಕರೈಡ್ ಘಟಕಗಳು ಆಮ್ಲಜನಕ ಪರಮಾಣುವಿನ ಮೂಲಕ ಹೊಂದುವ ಸಂಪರ್ಕವನ್ನು `ಗ್ಲೈಕೊಸೈಡಿಕ್ ಬಂಧ' ಎನ್ನುವರು.

11) ಪ್ರೋಟಿನ್‌ಗಳ ಬಗ್ಗೆ ಸಂಕ್ಷಿಪ್ತ ಟಿಪ್ಪಣಿ ಬರೆಯಿರಿ

ಉತ್ತರ:- ಪ್ರೋಟೀನುಗಳು ಜೀವ ವ್ಯವಸ್ಥೆಯಲ್ಲಿ ಅತೀ ಹೇರಳವಾಗಿ ಇರುವ ಜೈವಿಕ ಅಣುಗಳಾಗಿವೆ. ಪ್ರೋಟೀನುಗಳ ಮುಖ್ಯ ಆಕರಗಳು ಹಾಲು, ಗಿಣ್ಣು (Cheese), ಧಾನ್ಯಗಳು, ನೆಲಗಡಲೆ, ಮೀನು, ಮಾಂಸ. ಮುಂತಾದವು. ಇವುಗಳು ದೇಹದ ಪ್ರತಿಯೊಂದು ಭಾಗದಲ್ಲೂ ಇವೆ ಮತ್ತು ಜೀವದ ರಚನೆ ಮತ್ತು ಕಾರ್ಯವಿಧಾನಗಳ ಮೂಲಾಧಾರವಾಗಿರುತ್ತವೆ. ಇವು ದೇಹದ ಬೆಳವಣಿಗೆ ಮತ್ತು ನಿರ್ವಹಣೆಗೆ ಅಗತ್ಯವಾಗಿವೆ. ಪ್ರೋಟೀನ್ ಎಂಬ ಶಬ್ಧವನ್ನು ಗ್ರೀಕ್ ಪದ ಪ್ರೊಟೀಯೋಸ್ (Protieios)) ನಿಂದ ಪಡೆಯಲಾಗಿದ್ದು ಇದರ ಅರ್ಥ ಪ್ರಾಥಮಿಕ ಅಥವಾ ಪ್ರಾಮುಖ್ಯ. ಎಲ್ಲಾ ಪ್ರೋಟೀನುಗಳು - ಅಮೈನೋ ಆಮ್ಲಗಳ ಪಾಲಿಮರ್‌ಗಳಾಗಿವೆ. ನೂರಕ್ಕಿಂತ ಹೆಚ್ಚು ಅಮೈನೋ ಆಮ್ಲ ಉಳಿಕೆಯನ್ನು ಹೊಂದಿರುವ ಅಣುತೂಕ 10000u ಗಿಂತ ಹೆಚ್ಚಿರುವ ಒಂದು ಪಾಲಿಪೆಪ್ಟೈಡನ್ನು ಪ್ರೋಟೀನ್ ಎನ್ನುತ್ತಾರೆ

12) ಪ್ರೋಟಿನುಗಳನ್ನು ಅವುಗಳ ಅಣ್ವಿಕ ಆಕಾರವನ್ನು ಆಧರಿಸಿ 2 ವಿಧಗಳಾಗಿ ವಿಂಗಡಿಸಬಹುದು. ಹಾಗಾದರೆ ಅವು ಯಾವುವು?

ಉತ್ತರ:- ಪ್ರೋಟಿನುಗಳನ್ನು ಅವುಗಳ ಅಣ್ವಿಕ ಆಕಾರವನ್ನು ಆಧರಿಸಿ 2 ವಿಧಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

(a) ಫೈಬ್ರಸ್ ಅಥವಾ ನಾರು, ಎಳೆಗಳಂತಹ ಪ್ರೋಟೀನ್ (Fibrous Protiens): ಪಾಲಿಪೆಪ್ಟೈಡ್ ಸರಪಣಿಗಳು ಪರಸ್ಪರ ಸಮಾನಾಂತರವಾಗಿದ್ದು ಒಂದಕ್ಕೊಂದು ಹೈಡ್ರೋಜನ್ ಅಥವಾ ಡೈಸಲ್ಫೈಡ್ ಬಂಧಗಳ ಮೂಲಕ ಜೋಡಿಸಲ್ಪಟ್ಟಾಗ, ಎಳೆಗಳಂತಹ (ನಾರಿನ) ರಚನೆ ಉಂಟಾಗುತ್ತದೆ. ಅಂತಹ ಪ್ರೋಟೀನುಗಳು ಸಾಮಾನ್ಯವಾಗಿ ನೀರಿನಲ್ಲಿ ಕರಗುವುದಿಲ್ಲ. ಕೆಲವು ಸಾಮಾನ್ಯ ಉದಾಹರಣೆಗಳು ಕೆರಾಟಿನ್ (Keratin– ಕೂದಲು, ಉಣ್ಣೆ, ರೇಶ್ಮೆಗಳಲ್ಲಿರುತ್ತದೆ) ಮತ್ತು ಮಯೋಸಿನ್ (Myosin - ಮಾಂಸಖಂಡಗಳಲ್ಲಿರುತ್ತದೆ) ಮುಂತಾದವುಗಳು.

(b) ಗೋಳಾಕಾರದ ಪ್ರೋಟೀನುಗಳು (Globular Proteins) ಪಾಲಿಪೆಪ್ಟೈಡ್ ಸರಪಣಿಗಳು ಸುರುಳಿಯಾಕಾರದಲ್ಲಿ ಸುತ್ತಿಕೊಂಡ ಪರಿಣಾಮವಾಗಿ ಉಂಟಾಗಿ ಗೋಳಾಕಾರವನ್ನು ಹೊಂದುವುದರಿಂದ ಈ ರಚನೆ ಉಂಟಾಗುತ್ತದೆ. ಇವು ಸಾಮಾನ್ಯವಾಗಿ ನೀರಿನಲ್ಲಿ ಕರಗುತ್ತವೆ. ಇನ್ಸುಲಿನ್ ಮತ್ತು ಆಲ್ಬುಮಿನ್‌ಗಳು ಗೋಳಾಕಾರದ ಪ್ರೋಟೀನುಗಳ ಸಾಮಾನ್ಯ ಉದಾಹರಣೆಗಳಗಿವೆ. ಪ್ರೋಟೀನುಗಳ ರಚನೆ ಮತ್ತು ಆಕಾರವನ್ನು ನಾಲ್ಕು ವಿವಿಧ ಹಂತಗಳಲ್ಲಿ ಕಲಿಯಬಹುದು. ಅವೆಂದರೆ : ಪ್ರಾಥಮಿಕ, ದ್ವಿತೀಯಕ, ತೃತೀಯಕ ಮತ್ತು ಚತುರ್ಥಕ. ಇಲ್ಲಿ ಪ್ರತಿಹಂತವೂ ಮೊದಲನೆಯದಕ್ಕಿಂತ ಸಂಕೀರ್ಣವಾಗಿರುತ್ತದೆ

13) ವಿಟಮಿನ್/ಜೀವಸತ್ವಗಳ ಮತ್ತು ಅವುಗಳ ವರ್ಗೀಕರಣಗಳ ಬಗ್ಗೆ ಬರೆಯಿರಿ

ಉತ್ತರ:- ಕೆಲವು ಸಾವಯವ ಸಂಯುಕ್ತ ವಸ್ತುಗಳು ನಮ್ಮ ಆಹಾರದಲ್ಲಿ ಅತ್ಯಂತ ಕನಿಷ್ಠ ಪ್ರಮಾಣಗಳಲ್ಲಿ ಅಗತ್ಯವಿವೆ. ಆದರೆ ಅವುಗಳ ಕೊರತೆಯು ನಿರ್ದಿಷ್ಟ ಕಾಯಿಲೆಗಳನ್ನು ಉಂಟು ಮಾಡುತ್ತವೆ, ಈ ಸಂಯುಕ್ತಗಳನ್ನು ಜೀವಸತ್ವಗಳು ಅಥವಾ ವಿಟಮಿನ್‌ಗಳು ಎಂದು ಕರೆಯಲಾಗುತ್ತದೆ. ಹೆಚ್ಚಿನ ಜೀವಸತ್ವಗಳು ನಮ್ಮ ದೇಹದಲ್ಲಿ ಉತ್ಪತ್ತಿ ಮಾಡಲಾಗುವದಿಲ್ಲ. ಆದರೆ ಸಸ್ಯಗಳು ಅವುಗಳನ್ನು ಬಹುತೇಕವಾಗಿ ಉತ್ಪಾದಿಸುವುದರಿಂದ ಅವುಗಳನ್ನು ಅಗತ್ಯ ಆಹಾರ ಅಂಶಗಳೆಂದು ಪರಿಗಣಿಸಲಾಗುತ್ತದೆ. ಅದಾಗ್ಯೂ, ಕರುಳಿನಲ್ಲಿನ ಬ್ಯಾಕ್ಟೀರಿಯಾಗಳು ನಮಗೆ ಅಗತ್ಯವಾದ ಕೆಲವು ಜೀವಸತ್ವಗಳನ್ನು ಉತ್ಪಾದಿಸಬಲ್ಲವು. ನಮ್ಮ ಆಹಾರದಲ್ಲಿ ಎಲ್ಲಾ ಜೀವಸತ್ವಗಳು ಸಾಮಾನ್ಯವಾಗಿ ಲಭ್ಯವಿವೆ. ವಿವಿಧ ಜೀವಸತ್ವಗಳು ಬೇರೆ ಬೇರೆ ರಾಸಾಯನಿಕ ವರ್ಗಗಳಿಗೆ ಸೇರಿವೆ. ಆದ್ದರಿಂದ ಅವುಗಳ ರಚನೆಯ ಆಧಾರದ ಮೇಲೆ ಅವುಗಳನ್ನು ವ್ಯಾಖ್ಯಾನಿಸುವುದು ಕಷ್ಟಕರವಾಗಿದೆ. ಅವುಗಳನ್ನು ಸಾಮಾನ್ಯವಾಗಿ "ಜೀವಿಗಳ ಗರಿಷ್ಠ ಬೆಳವಣಿಗೆ ಮತ್ತು ಆರೋಗ್ಯಕ್ಕಾಗಿ, ನಿರ್ದಿಷ್ಟ ಜೈವಿಕ ಕಾರ್ಯಗಳನ್ನು ನಿರ್ವಹಿಸಲು ಸಣ್ಣ ಪ್ರಮಾಣದಲ್ಲಿ ನಮ್ಮ ಆಹಾರದಲ್ಲಿ ಅಗತ್ಯವಿರುವ ಸಾವಯವ ಸಂಯುಕ್ತಗಳು" ಎಂದು ಪರಿಗಣಿಸಬಹುದು. ಜೀವಸತ್ವಗಳನ್ನು ಆಂಗ್ಲ ವರ್ಣಮಾಲೆಯ A, B, C, D ಮುಂತಾದವುಗಳಿಂದ ಹೆಸರಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಉಪ ಗುಂಪುಗಳಾಗಿ ಹೆಸರಿಸಲಾಗಿದೆ.

ಉದಾ: B_1, B_2 , B_3, B_{12} ಮುಂತಾದವು. ಅತಿಯಾದ ಜೀವಸತ್ವಗಳು ಕೂಡಾ ಹಾನಿಕಾರಕ ಮತ್ತು ಜೀವಸತ್ವ ಮಾತ್ರೆಗಳನ್ನು ವೈದ್ಯರ ಸಲಹೆ ಇಲ್ಲದೆ ಸೇವಿಸಬಾರದು.

"Vitamine" ಎಂಬ ಶಬ್ದವು vital + amin ಎಂಬುದರಿಂದ ಬಂದಿದೆ. ಏಕೆಂದರೆ ಹಿಂದಿನ ಕೆಲವು ಗುರುತಿಸಿದ ವಿಟಾಮಿನ್ ಅಮೈನೋ ಗುಂಪುಗಳಿದ್ದವು. ಆ ನಂತರದ ಸಂಶೋಧನೆಗಳು ಜೀವಸತ್ವಗಳಲ್ಲಿ ಕೆಲಸಗಳು ಹೆಚ್ಚಿನವುಗಳಲ್ಲಿ ಅಮೈನೋ ಗುಂಪುಗಳು ಇಲ್ಲ ಎಂಬುದನ್ನು ತೋರಿಸಿದವು. ಆದ್ದರಿಂದ ನಂತರದಲ್ಲಿ 'e' ಎಂಬ ಅಕ್ಷರವನ್ನು ಕೈ ಬಿಡಲಾಯಿತು ಮತ್ತು 'ವಿಟಮಿನ್' ಎಂಬ ಶಬ್ದವು ಈ ದಿನಗಳಲ್ಲಿ ಬಳಕೆಯಲ್ಲಿದೆ.

ಜೀವಸತ್ವಗಳ ವರ್ಗೀಕರಣ: = ಜೀವಸತ್ವಗಳನ್ನು ಅವುಗಳ ನೀರಿನಲ್ಲಿ ಕರಗುವಿಕೆ ಅಥವಾ ಕೊಬ್ಬಿನಲ್ಲಿ ಕರಗುವಿಕೆಯನ್ನಾಧರಿಸಿ ಎರಡು ಗುಂಪುಗಳಾಗಿ ವರ್ಗೀಕರಿಸಲಾಗಿದೆ.

(i) ಕೊಬ್ಬಿನಲ್ಲಿ ಕರಗುವ ಜೀವಸತ್ವಗಳು: ಕೊಬ್ಬು ಮತ್ತು ಎಣ್ಣೆಯಲ್ಲಿ ಕರಗುವ ಮತ್ತು ನೀರಿನಲ್ಲಿ ಕರಗದ ಜೀವಸತ್ವಗಳನ್ನು ಈ ಗುಂಪಿನಲ್ಲಿರಿಸಲಾಗಿದೆ. ಇದರಲ್ಲಿ Vit A, D, E & Kಗಳಿವೆ. ಅವುಗಳು ಯಕೃತ್ತು ಮತ್ತು ಅಡಿಪೋಸ್(ಕೊಬ್ಬು ಸಂಗ್ರಹ)ನಲ್ಲಿ ಸಂಗ್ರಹವಾಗುತ್ತವೆ.

(ii) ನೀರಿನಲ್ಲಿ ಕರಗುವ ವಿಟಮಿನ್‌ಗಳು: 'ಬಿ' ಗುಂಪಿನ ಜೀವಸತ್ವಗಳು ಮತ್ತು ಜೀವಸತ್ವ ಅ ನೀರಿನಲ್ಲಿ ಕರಗುತ್ತವೆ. ಆದ್ದರಿಂದ ಅವುಗಳನ್ನು ಒಟ್ಟಿಗೆ ಸೇರಿಸಲಾಗಿದೆ. ನೀರಿನಲ್ಲಿ ಕರಗುವ ಜೀವಸತ್ವಗಳನ್ನು ನಿಯಮಿತವಾಗಿ ಆಹಾರದಲ್ಲಿ ಸರಬರಾಜು ಮಾಡಬೇಕು. ಏಕೆಂದರೆ ಅವುಗಳು ಸುಲಭವಾಗಿ ನಮ್ಮ ದೇಹದಿಂದ ಮೂತ್ರದಲ್ಲಿ ಹೊರ ಹೋಗುತ್ತವೆ ಮತ್ತು ಅವನ್ನು ಸಂಗ್ರಹಿಸುವುದು ಸಾಧ್ಯವಿಲ್ಲ (Vit B_{12}ನ್ನು ಹೊರತುಪಡಿಸಿ)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ — ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ನಿದ್ರೆಯಲ್ಲಿದೆ ಆರೋಗ್ಯದ ಗುಟ್ಟು

ಡಾ. ಕಿರಣ್ ವಿ. ಎಸ್.

'ನಿದ್ರಿಸುವಾಗ ಕಾಣುವುದು ಕನಸಲ್ಲ; ಸಾಧನೆಯ ಬೆಂಬತ್ತುವಂತೆ ಮಾಡಿ ನಿದ್ರಿಸಲು ಬಿಡದಿರುವುದು ನಿಜವಾದ ಕನಸು' – ಎನ್ನುವ ಸ್ಫೂರ್ತಿದಾಯಕ ಮಾತುಗಳನ್ನು ಕೇಳಿರುತ್ತೇವೆ. ಈ ಮಾತುಗಳ ಹಿಂದಿನ ಭಾವಾರ್ಥದ ಬದಲಿಗೆ ಪದಶಃ ಅರ್ಥದಲ್ಲಿ ಗ್ರಹಿಸಿ ಸತತವಾಗಿ ನಿದ್ರೆಗೆಡುವುದರಿಂದ ಸಾಧನೆಗಿಂತಲೂ ಅನಾರೋಗ್ಯವಾಗುವುದು ಹೆಚ್ಚು ಖಚಿತ.

ನಮ್ಮ ದೇಹಕ್ಕೆ ಪ್ರತಿದಿನ ಸುಮಾರು ಏಳರಿಂದ ಎಂಟು ಗಂಟೆಗಳ ನಿದ್ರೆಯ ಅಗತ್ಯವಿದೆ. ಹೀಗಾಗಿ ನಮ್ಮ ಜೀವನದ ಬೇರೆ ಯಾವುದೇ ಪ್ರಕ್ರಿಯೆಗಿಂತಲೂ ಅಧಿಕ ಕಾಲವನ್ನು ನಾವು ನಿದ್ರೆಯಲ್ಲಿ ಕಳೆಯುತ್ತೇವೆ. ನಿದ್ರೆ ಕಡಿಮೆಯಾದಾಗ ಇಡೀ ದಿನ ಕಿರಿಕಿರಿಯ ಮನಃಸ್ಥಿತಿ ಇರುತ್ತದೆ. ನಾವು ಎಷ್ಟು ಸುಖವಾಗಿ ನಿದ್ರಿಸುತ್ತೇವೆ ಎಂಬುದರ ಮೇಲೆ ದೇಹದ ಮತ್ತು ಮನಸ್ಸಿನ ಆರೋಗ್ಯ ನಿರ್ಧಾರವಾಗುತ್ತದೆ.

ಆಳವಾದ ನಿದ್ರೆ ಮತ್ತು ಕನಸುಗಳ ನಿದ್ರೆ ಎಂದು ವಿಜ್ಞಾನಿಗಳು ನಿದ್ರೆಯ ಅವಧಿಯನ್ನು ವಿಭಾಗಿಸುತ್ತಾರೆ. ಇದರ ಹೆಚ್ಚಿನ ಭಾಗ ಆಳವಾದ ನಿದ್ರೆಯದ್ದು. ಈ ವೇಳೆಯಲ್ಲಿ ದೇಹದ ಸ್ನಾಯುಗಳು ಸಡಿಲವಾಗುತ್ತವೆ; ಉಸಿರಾಟ ಆಳವಾಗಿ, ನಿಧಾನವಾಗಿ ಆಗುತ್ತದೆ; ದಿನವಿಡೀ ಕ್ರಿಯಾಶೀಲವಾಗಿದ್ದು ದಣಿದಿರುವ ದೇಹ ಮತ್ತು ಮೆದುಳಿಗೆ ಆಳನಿದ್ರೆಯ ವೇಳೆ ಮರುಚೈತನ್ಯ ದೊರೆಯುತ್ತದೆ. ಇದಕ್ಕಿಂತ ಭಿನ್ನವಾದದ್ದು ಕನಸುಗಳ ನಿದ್ರೆ. ಈ ವೇಳೆಯಲ್ಲಿ ಮೆದುಳಿನ ಚಟುವಟಿಕೆ ಹೆಚ್ಚುತ್ತದೆ; ಸ್ನಾಯುಗಳು ನಿಶ್ಚೇಷ್ಟವಾಗುತ್ತವೆ; ಉಸಿರಾಟ ಮತ್ತು ಎದೆಬಡಿತದಲ್ಲಿ ಏರುಪೇರಾಗುತ್ತದೆ. ಒಂದು ರಾತ್ರಿಯಲ್ಲಿ ಆಳನಿದ್ರೆ ಮತ್ತು ಕನಸುಗಳ ನಿದ್ರೆಗಳ ನಾಲ್ಕೈದು ಆವರ್ತನಗಳು ಜರುಗುತ್ತವೆ. ಹಲವಾರು ಮಾಹಿತಿಗಳನ್ನು ಸಂಸ್ಕರಿಸುವಾಗ ಉಳಿದುಹೋದ ಅನೇಕಾನೇಕ ಸಂಗತಿಗಳು ಮೆದುಳಿನ ಕೋಶಗಳಲ್ಲಿ 'ಜೇಡರಬಲೆ'ಗಳನ್ನು ನಿರ್ಮಿಸಿರುತ್ತವೆ. ಇದನ್ನು ಮೆದುಳು ಚೊಕ್ಕ ಮಾಡಲು ನಿದ್ರೆಯ ಅವಧಿ ಬಳಕೆಯಾಗುತ್ತದೆ. ಹೀಗೆ ಅನಗತ್ಯ ವಿಷಯಗಳು ತೊಡೆದುಹೋದರೆ, ನಿರ್ಧಾರಗಳನು ಕೈಗೊಳ್ಳುವ ಮೆದುಳಿನ ಸಾಮರ್ಥ್ಯ ವೃದ್ಧಿಸುತ್ತದೆ. ನಮ್ಮನ್ನು ಕಾಡುತ್ತಿರುವ ಪ್ರಶ್ನೆಗಳಿಗೆ ಒಂದು ಒಳ್ಳೆಯ ನಿದ್ರೆಯ ನಂತರ ಅಕಸ್ಮಾತ್ತಾಗಿ ಉತ್ತರ ದೊರೆಯುವುದರ ಚಮತ್ಕಾರದ ಹಿನ್ನೆಲೆ ಇದೇ. ಒಂದು ವೇಳೆ ಯಾವುದೇ ಕಾರಣಕ್ಕೆ ನಿದ್ರೆಯ ಪ್ರಮಾಣ ಕಡಿಮೆಯಾದರೆ ಅನಗತ್ಯ ಮಾಹಿತಿಯನ್ನು ತೊಡೆದುಹಾಕಲು ಮೆದುಳಿಗೆ ಸಮಯ ಸಿಗುವುದಿಲ್ಲ; ಅದರ ಚೇತರಿಕೆ ಪೂರ್ಣವಾಗುವುದಿಲ್ಲ. ಇದರಿಂದ ಮೆದುಳಿನ ಕಾರ್ಯಕ್ಷಮತೆ ಕುಂಠಿತವಾಗುತ್ತದೆ; ನೆನಪಿನಲ್ಲಿ ಇಟ್ಟಿರುವ ಮಾಹಿತಿ ಬೇಕಾದ ಸಮಯಕ್ಕೆ ಹೊರಬರುವುದಿಲ್ಲ. ಪರಿಸ್ಥಿತಿ ಮಹಾಭಾರತದ ಕರ್ಣನ ಕಥೆಯಾಗುತ್ತದೆ. ಈ ಕಾರಣಕ್ಕೇ ಪರೀಕ್ಷೆಯಂತಹ ಮುಖ್ಯವಾದ ಕೆಲಸಗಳ ಹಿಂದಿನ ರಾತ್ರಿ ನಿದ್ರೆಗೆಡೆವುದು ಸರಿಯಲ್ಲ.

> ಎಷ್ಟು ಸುಖವಾಗಿ ನಿದ್ರಿಸುತ್ತೇವೆ ಎಂಬುದರ ಮೇಲೆ ದೇಹದ ಮತ್ತು ಮನಸ್ಸಿನ ಆರೋಗ್ಯ ನಿರ್ಧಾರವಾಗುತ್ತದೆ. ಹಾಗಾಗಿ ನಿದ್ರೆಗೆಡುವುದು ಒಳ್ಳೆಯದಲ್ಲ.

ನಿದ್ರಾಹೀನತೆಯ ಚಿಕಿತ್ಸೆಯ ಭಾಗವಾಗಿ ಜೀವನಶೈಲಿಯ ಬದಲಾವಣೆಗಳನ್ನು ವಿಜ್ಞಾನಿಗಳು ಕ್ಲುಪ್ತವಾಗಿ ಹೀಗೆ ಹೇಳುತ್ತಾರೆ: 'ನಿಮ್ಮ ಹಗಲನ್ನು ಮತ್ತಷ್ಟು ಬೆಳಗಾಗಿಸಿ; ನಿಮ್ಮ ರಾತ್ರಿಯನ್ನು ಇನ್ನಷ್ಟು ಕತ್ತಲಾಗಿಸಿ; ಸೂರ್ಯರಶ್ಮಿಗೆ ಮೈ ಒಡ್ಡುವಂತೆ ನಿಮ್ಮ ಕೆಲಸಕ್ಕೆ ನಡೆದೋ ಅಥವಾ ಬೈಸಿಕಲ್ ಸವಾರಿ ಮಾಡುತ್ತಲೋ ಹೋಗಿ; ಸಂಜೆ ಆಗುತ್ತಿದ್ದಂತೆ ನಿಮ್ಮ ಎಲೆಕ್ಟ್ರಾನಿಕ್ ಸಲಕರಣೆಗಳ ಬೆಳಕನ್ನು ಮಂದವಾಗಿಸಿ'.

ಸಾವಿರಾರು ವರ್ಷಗಳಿಂದ ನಮ್ಮ ಅನೂಚಾನ ಸಂಸ್ಕೃತಿ ಇದನ್ನು ಮತ್ತಷ್ಟು ಸಾಂದ್ರವಾಗಿ 'ಬ್ರಾಹ್ಮಿ ಮುಹೂರ್ತಕ್ಕೆ ಎದ್ದು, ಪೂರ್ವದಲ್ಲಿ ಮೇಲೇಳುತ್ತಿರುವ ಸೂರ್ಯನಿಗೆ ನಮನ ಸಲ್ಲಿಸಿ, ದಿನವಿಡೀ ನಿಷ್ಠೆಯಿಂದ ಕೆಲಸ ಮಾಡಿ, ಸಂಜೆಯ ನಂತರ ಮಲಗಿ ಸಾಕಷ್ಟು ಕಾಲ ನಿದ್ರಿಸಿರಿ' ಎಂದು ಹೇಳಿದೆ.

ಒಳಿತು ಕಾಲಾಂತರದಲ್ಲಿ ಬದಲಾಗುವುದಿಲ್ಲ – ಎನ್ನುವುದಕ್ಕೆ ನಿದ್ರಾಹೀನತೆಯ ಚಿಕಿತ್ಸೆಯಲ್ಲಿ ಜೀವನಶೈಲಿಯ ಪದ್ಧತಿಗಳು ಸಾಕ್ಷಿಯಾಗಿವೆ.

ನಿದ್ರೆ ಬಾರದಿರಲು ಕಾರಣ ಹಲವು

ಹಲವಾರು ದೈಹಿಕ ಮತ್ತು ಮಾನಸಿಕ ಸಮಸ್ಯೆಗಳ ಕಾರಣದಿಂದ ನಿದ್ರೆಯ ವ್ಯವಸ್ಥೆಯಲ್ಲಿ ಏರಿಳಿತವಾಗಬಹುದು. ಶ್ವಾಸದ ಸಮಸ್ಯೆಗಳು ಇರುವವರು ಅಂಗಾತ ಮಲಗಿದಾಗ ಉಸಿರಾಟದ ಮೇಲಿನ ಒತ್ತಡ ಹೆಚ್ಚುತ್ತದೆ. ದೀರ್ಘಕಾಲಿಕ ರಾತ್ರಿಪಾಳಿಯ ಕೆಲಸ ಇರುವವರ ನಿದ್ರೆಯ ಆವರ್ತನಚಕ್ರ ವಿಲೋಮವಾಗುತ್ತದೆ. ರಾತ್ರಿಯಿಡೀ ಮೋಜು ಮಾಡಿ, ಹಗಲಿನಲ್ಲಿ ಕೆಲವು ಗಂಟೆಗಳ ಕಾಲ ಮಾತ್ರ ಮಲಗುವ 'ಪಾರ್ಟಿ-ಪ್ರಾಣಿಗಳು' ದೀರ್ಘಕಾಲಿಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಯಾವುದೋ ಕೆಲಸ ಇಲ್ಲವೇ ಹವ್ಯಾಸಕ್ಕೆ ಸಿಲುಕಿ, ನಿದ್ರೆಯ ಸಮಯವನ್ನು ಕಡಿಮೆ ಮಾಡಿಕೊಳ್ಳುವುದು ನಿದ್ರಾಹೀನತೆಗೆ ಸಮಾನವಾದದ್ದು. ಇಂತಹ ಬಾಹ್ಯಕಾರಣಗಳ ಹೊರತಾಗಿಯೂ ನಿದ್ರಾಹೀನತೆಯಿಂದ ಬಳಲುವವರು, ಎಷ್ಟೋ ಪ್ರಯತ್ನ ಮಾಡಿದರೂ ನಿದ್ರೆ ಬಾರದವರು ಇದ್ದಾರೆ. ನಿದ್ರಾಹೀನತೆಗೆ ಔಷಧಗಳನ್ನು ಬಳಸುವ ಬದಲಿಗೆ ಇಂತಹವರು ತಮ್ಮ ಜೀವನಶೈಲಿಯಲ್ಲಿ, ಆಹಾರವಿಧಾನಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕು.



ನಿದ್ರಾಹೀನತೆಗೆ ಪರಿಹಾರ

ಒಂದು ನಿಶ್ಚಿತ ಸಮಯಕ್ಕೆ ಮಲಗುವ ಮತ್ತು ಏಳುವ ಪದ್ಧತಿ ಒಳಿತು. ಈ ಪದ್ಧತಿಯನ್ನು ಯಾವ ಕಾರಣಕ್ಕೂ ಬದಲಾಯಿಸದಂತೆ ಕಟ್ಟುನಿಟ್ಟಾಗಿ ಪಾಲಿಸಬೇಕು. ವಾರಾಂತ್ಯಕ್ಕಾಗಲೀ, 'ಚೀಟ್-ಡೆ' ಎನ್ನುವ ನೆಪಗಳಿಗಾಗಲೀ ಮಲಗೇಳುವ ಸಮಯಗಳನ್ನು ಮಾರ್ಪಾಡು ಮಾಡಬಾರದು. ಅಧಿಕ ಬೆಳಕಿನಲ್ಲಿ ಕಾಲ ಕಳೆಯುವುದು ನಿದ್ರೆಯ ಶತ್ರು. ಹೀಗಾಗಿ, ಮಲಗುವ ಸಮಯಕ್ಕೆ ಒಂದು ತಾಸು ಮುನ್ನವೇ ಬೆಳಕಿನ ಪ್ರಮಾಣವನ್ನು ತಗ್ಗಿಸಿ, ಮಂದ ಬೆಳಕಿಗೆ ದೃಷ್ಟಿಯನ್ನು ಹೊಂದಿಸಿಕೊಳ್ಳಬೇಕು. ಮಲಗುವ ಸಮಯಕ್ಕೆ ಮೊದಲು ದೂರದರ್ಶನ, ಕಂಪ್ಯೂಟರ್, ಮೊಬೈಲ್ ಪರದೆಗಳಂತಹ ಬೆಳಕನ್ನು ಸೂಸುವ ಆಕರಗಳಿಂದ ದೂರವಿರಬೇಕು. ಇದರ ಬದಲಿಗೆ ನಿದ್ರೆಯ ವೇಳೆಗೆ ಮುನ್ನ ಮನಸ್ಸಿಗೆ ಆಪ್ತವಾದ ಪುಸ್ತಕವನ್ನು ಓದುವುದು ಒಳಿತು. ನಿದ್ರೆಯ ಸಮಯದಲ್ಲಿ ಸಾಮಾನ್ಯ ಆಹಾರಸೇವನೆ ಸೂಕ್ತ. ರಾತ್ರಿಯ ವೇಳೆ ಭೂರಿಭೋಜನ, ಮದ್ಯಪಾನ, ಧೂಮಪಾನ, ಕಾಫಿ-ಟೀಗಳನ್ನು ದೂರವಿರಬೇಕು. ಪ್ರತಿದಿನವೂ ಶರೀರಕ್ಕೆ ಸಹ್ಯವಾಗುವಷ್ಟು ವ್ಯಾಯಾಮ, ವೇಗದ ನಡಿಗೆ, ತೋಟದ ಕೆಲಸದಂತಹ ಚಟುವಟಿಕೆಗಳಿಗೆ ಸಮಯವನ್ನು ಹೊಂದಿಸಿಕೊಳ್ಳಬೇಕು. ನಿದ್ರೆಯ ಕೋಣೆ ತಂಪಾಗಿ, ಸಾಧ್ಯವಾದಷ್ಟೂ ನಿಶ್ಶಬ್ದವಾಗಿ, ಮಂದಬೆಳಕಿನಿಂದಿರುವುದು ಅಗತ್ಯ. ಈ ರೀತಿಯ ಪ್ರಯತ್ನಗಳು ಫಲಕಾರಿಯಾಗದಿದ್ದರೆ ನಿದ್ರೆಗೆ ಮುನ್ನ ಬಿಸಿನೀರಿನಲ್ಲಿ ಸ್ನಾನ ಮಾಡಿ, ಧ್ಯಾನ ಮಾಡುವುದರಿಂದ ನಿದ್ರಾಹೀನತೆ ಕಡಿಮೆಯಾಗುತ್ತದೆ. ಹಗಲುವೇಳೆಯಲ್ಲಿ ಮಲಗುವ ಅಭ್ಯಾಸ ಕೂಡ ರಾತ್ರಿ ನಿದ್ರೆ ಬಾರದಿರುವುದಕ್ಕೆ ಪ್ರಮುಖ ಕಾರಣ. ನಿದ್ರಾಹೀನತೆಯಿಂದ ಬಳಲುವವರು ಹಗಲಿನ ವೇಳೆ ಸಾಧ್ಯವಾದಷ್ಟೂ ಯಾವುದಾದರೂ ಒಂದು ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಆಗ ರಾತ್ರಿಯ ವೇಳೆ ನಿದ್ರೆ ಹತ್ತುವ ಸಾಧ್ಯತೆಗಳು ಹೆಚ್ಚುತ್ತವೆ.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ




ಸುಭಾಷಿತ

ನಿಮ್ಮ ಮನಸ್ಸು ಅತ್ಯಂತ ಶಕ್ತಿಶಾಲಿ. ಅದರಲ್ಲಿನ ಸಕಾರಾತ್ಮಕ ಅಂಶಗಳನ್ನು ಜರಡಿ ಹಿಡಿಯುವಿರಾದರೆ, ನಿಮ್ಮ ಬದುಕು ಬದಲಾಗತೊಡಗುತ್ತದೆ. **-ಗೌತಮ ಬುದ್ಧ**

ರಾಜಕಾರಣಿಗಳ ಸಡಿಲ ನಾಲಿಗೆ ಅಧೋಗತಿಗೆ ರಾಜ್ಯ ರಾಜಕಾರಣ

ಟಿಪ್ಪು ಸುಲ್ತಾನನನ್ನು ಮೇಲಕ್ಕೆ ಕಳಿಸಿದಂತೆ ಸಿದ್ದರಾಮಯ್ಯ ಅವರನ್ನೂ ಮೇಲಕ್ಕೆ ಕಳಿಸಬೇಕು ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರು ಆಡಿರುವ ಮಾತು ಕೀಳು ಅಭಿರುಚಿಯಿಂದ ಕೂಡಿರುವಂತಹದ್ದು, ಜನಸಾಮಾನ್ಯರನ್ನು ಪ್ರಚೋದಿಸುವಂತಹದ್ದು ಹಾಗೂ ಅವರು ಪ್ರತಿನಿಧಿಸುವ ಸ್ಥಾನದ ಘನತೆಯನ್ನು ಕುಗ್ಗಿಸುವಂತಹದ್ದು. ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಆಡಿರುವ ಸಚಿವರ ಮಾತುಗಳು ಉದ್ರೇಕಕಾರಿ ಆಗಿರುವುದು ಮಾತ್ರವಲ್ಲ, ಸಾರ್ವಜನಿಕ ಸಭ್ಯತೆಯಿಂದಲೂ ಕೂಡಿಲ್ಲ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ದಿಸೆಯಲ್ಲಿ ಜನಪ್ರತಿನಿಧಿಗಳು, ಅದರಲ್ಲೂ ಅಧಿಕಾರ ಸ್ಥಾನದಲ್ಲಿ ಇರುವವರು ಜನಸಾಮಾನ್ಯರಿಗೆ ಮೇಲ್ಪಂಕ್ತಿ ಹಾಕಿಕೊಡಬೇಕು. ಕೋಮುದ್ವೇಷದ ಮಾತುಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ, ಸಚಿವರ ಮಾತುಗಳು ದ್ವೇಷಭಾವನೆಗೆ ಉತ್ತೇಜನ ಕೊಡುವಂತಿವೆ. ಮಾಜಿ ಮುಖ್ಯಮಂತ್ರಿಯನ್ನು ಟೀಕಿಸುವ ಭರದಲ್ಲಿ, ಅವರನ್ನು ಮೇಲಕ್ಕೆ ಕಳಿಸಬೇಕು ಎಂದು ಹೇಳಿರುವುದು ಜನರ ಮೇಲೆ ಯಾವ ರೀತಿಯ ಪ್ರಭಾವ ಬೀರಬಹುದೆನ್ನುವ ವಿವೇಚನೆ ಸಚಿವರಿಗೆ ಇದ್ದಂತಿಲ್ಲ. ತಮ್ಮ ಮಾತನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ ಎಂದು ಹೇಳಿರುವ ಅವರು, 'ಸಿದ್ದರಾಮಯ್ಯ ಅವರಿಗೆ ನೋವಾಗಿದ್ದರೆ ವಿಷಾದಿಸುತ್ತೇನೆ' ಎಂದು ಹೇಳಿರುವುದನ್ನು ನೋಡಿದರೆ, ಆಡಿರುವ ಮಾತಿನ ಬಗ್ಗೆ ಅವರಿಗೆ ಪಶ್ಚಾತ್ತಾಪವೂ ಆದಂತಿಲ್ಲ. ಕಾರ್ಯಕರ್ತರು ಅಥವಾ ಮುಖಂಡರು ತಪ್ಪು ಮಾಡಿದಾಗ ಅವರನ್ನು ತಿದ್ದುವುದು ಹಾಗೂ ತಿಳಿಹೇಳುವುದು ಪಕ್ಷದ ಹಿರಿಯ ಮುಖಂಡರ ಜವಾಬ್ದಾರಿ. ಆದರೆ, ಪ್ರಸ್ತುತ ಘಟನೆಗೆ ಸಂಬಂಧಿಸಿದಂತೆ ಸಚಿವರಿಗೆ ತಿಳಿ ಹೇಳುವುದಿರಲಿ, ಅವರ ಮಾತಿಗೆ ಸ್ಪಷ್ಟೀಕರಣ ನೀಡುವ ಗೋಜಿಗೂ ಮುಖ್ಯಮಂತ್ರಿಯಾಗಲೀ ಪಕ್ಷವಾಗಲೀ ಹೋಗಿಲ್ಲ. ಈ ಮೌನವನ್ನು ಅಶ್ವತ್ಥನಾರಾಯಣ ಅವರ ಮಾತಿಗೆ ಪಕ್ಷದ ಸಮ್ಮತಿಯೆಂದು ಭಾವಿಸಬಹುದೇ? ಭಿನ್ನಮತ ವ್ಯಕ್ತಪಡಿಸಿದ ಕಾರಣಕ್ಕಾಗಿ ಇಬ್ಬರು ವಿಚಾರವಾದಿಗಳ ಹತ್ಯೆ ನಡೆದಿದ್ದನ್ನು ಕರ್ನಾಟಕ ಇನ್ನೂ ಮರೆತಿಲ್ಲ. ಅಂಥ ಕೃತ್ಯಗಳು ಪುನರಾವರ್ತನೆಗೊಳ್ಳದಂತೆ ಎಚ್ಚರ ಹಾಗೂ ವಿವೇಕ ಪ್ರದರ್ಶಿಸಬೇಕಾದ ಸರ್ಕಾರವೇ ದ್ವೇಷ ಭಾಷಣಕ್ಕೆ ಕುಮ್ಮಕ್ಕು ಕೊಡುವಂತೆ ನಡೆದುಕೊಳ್ಳುತ್ತಿರುವುದು ದುಃಖದ ಸಂಗತಿ.



ಸಮಕಾಲೀನ ರಾಜಕಾರಣವು ಪಕ್ಷಗಳ ತಾತ್ವಿಕ ಸಂಘರ್ಷವನ್ನು ಆಧರಿಸಿರುವುದರ ಬದಲು, ವ್ಯಕ್ತಿವಿರೋಧದ ಸ್ವರೂಪ ಪಡೆದುಕೊಂಡಿದೆ. ಇದು ಪ್ರಜಾಪ್ರಭುತ್ವವನ್ನು ಶಿಥಿಲಗೊಳಿಸುವ ಆತಂಕಕಾರಿ ಬೆಳವಣಿಗೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, 'ಟಿಪ್ಪುವನ್ನು ಪ್ರೀತಿಸುವವರು ಈ ನೆಲದಲ್ಲಿ ಉಳಿಯಬಾರದು. ಹನುಮನ ಭಜನೆ ಮಾಡುವವರು ಇಲ್ಲಿರಬೇಕು' ಎಂದು ಹೇಳಿರುವುದು ಕೂಡ ಸಮಾಜದಲ್ಲಿ ಒಡಕು ಮೂಡಿಸುವಂತಹ ಮಾತೇ. ಈ ರಾಜ್ಯದಲ್ಲಿ ಯಾರು ಇರಬೇಕು, ಯಾರು ಇರಬಾರದು ಎನ್ನುವುದನ್ನು ನಿರ್ಧರಿಸುವುದಕ್ಕೆ ಟಿಪ್ಪು ಅಥವಾ ಹನುಮ ಮಾನದಂಡ ಆದುದು ಯಾವಾಗಿನಿಂದ? ಟಿಪ್ಪು ಮತ್ತು ಹನುಮನ ಆಧಾರದ ಮೇಲೆ ಕಾನೂನು ನಿರ್ಧಾರ ಆಗುವುದಾದರೆ, ಸಂವಿಧಾನಕ್ಕೆ ಯಾವ ಅರ್ಥವಿದೆ? ಸಮಕಾಲೀನ ರಾಜಕಾರಣವು ಪಕ್ಷಗಳ ತಾತ್ವಿಕ ಸಂಘರ್ಷವನ್ನು ಆಧರಿಸಿರುವುದರ ಬದಲು, ವ್ಯಕ್ತಿವಿರೋಧದ ಸ್ವರೂಪ ಪಡೆದುಕೊಂಡಿದೆ. ಇದು ಪ್ರಜಾಪ್ರಭುತ್ವವನ್ನು ಶಿಥಿಲಗೊಳಿಸುವ ಆತಂಕಕಾರಿ ಬೆಳವಣಿಗೆ. ವಿಧಾನಸಭೆ ಚುನಾವಣೆ ಸನ್ನಿಹಿತವಾಗುತ್ತಿರುವಂತೆ ರಾಜಕೀಯ ಪಕ್ಷಗಳ ಮುಖಂಡರು ನಾಲಿಗೆ ಮೇಲಿನ ಹಿಡಿತ ಕಳೆದುಕೊಳ್ಳುತ್ತಿರುವ ಉದಾಹರಣೆಗಳು ಹೆಚ್ಚುತ್ತಿವೆ. ಪರಸ್ಪರ ಕೆಸರು ಎರಚಿಕೊಳ್ಳುವುದರ ಜೊತೆಗೆ, ಇತಿಹಾಸದ ವ್ಯಕ್ತಿತ್ವಗಳನ್ನೂ ಬೀದಿ ರಾಜಕೀಯಕ್ಕೆ ಎಳೆದುತರಲಾಗುತ್ತಿದೆ. ಜನಸಾಮಾನ್ಯರ ತವಕ ತಲ್ಲಣಗಳಿಗೆ ಯಾವ ಪಕ್ಷ ಯಾವ ರೀತಿ ಸ್ಪಂದಿಸುತ್ತಿದೆ ಎನ್ನುವುದರ ಆಧಾರದ ಮೇಲೆ ಚುನಾವಣೆ ನಡೆಯಬೇಕೇ ವಿನಾ ಇತಿಹಾಸ-ಪುರಾಣದ ಆಗುಹೋಗುಗಳ ಮೇಲಲ್ಲ. ಈವರೆಗೆ ಮಾತುಗಳ ಮೂಲಕವೇ ಹಲ್ಲೆ ನಡೆಸುತ್ತಿದ್ದ ರಾಜಕಾರಣಿಗಳು, ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ 'ಮುಗಿಸುವ' ಮಾತುಗಳನ್ನಾಡುತ್ತಿದ್ದಾರೆ. ಸಮಾಜದಲ್ಲಿ ಅಶಾಂತಿ ಉಂಟುಮಾಡುವಂತಹ ಹೇಳಿಕೆಗಳು ಬಹಿರಂಗವಾಗಿ ವ್ಯಕ್ತವಾದ ಸಂದರ್ಭದಲ್ಲಿ ಪೊಲೀಸರು ಸ್ವಯಂಪ್ರೇರಿತರಾಗಿ ದೂರು ದಾಖಲಿಸಿಕೊಳ್ಳಬೇಕು. ಆ ಕೆಲಸವೂ ಅಶ್ವತ್ಥನಾರಾಯಣ ಅವರ ದ್ವೇಷದ ಮಾತುಗಳಿಗೆ ಸಂಬಂಧಿಸಿದಂತೆ ಆಗಿಲ್ಲ. ಪೊಲೀಸ್ ಇಲಾಖೆಯ ಈ ನಿಷ್ಕ್ರಿಯತೆ, ರಾಜ್ಯದಲ್ಲಿ ಕಾನೂನು ಎಲ್ಲರಿಗೂ ಏಕಪ್ರಕಾರದಲ್ಲಿ ಅನ್ವಯಿಸುವುದಿಲ್ಲ ಎನ್ನುವುದನ್ನು ಸೂಚಿಸುತ್ತಿರುವಂತಿದೆ. ದ್ವೇಷ ಭಾಷಣಗಳು ಹೆಚ್ಚುತ್ತಿದ್ದರೂ ನಿಗ್ರಹಕ್ಕೆ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ ಅಸಮಾಧಾನ ವ್ಯಕ್ತಪಡಿಸಿತ್ತು. ಸುಪ್ರೀಂ ಕೋರ್ಟ್ ಆದೇಶವನ್ನು ಜಾರಿಗೊಳಿಸಬೇಕಾದ ಸರ್ಕಾರದ ಪ್ರತಿನಿಧಿಗಳೇ ಹೊಡಿ-ಕೊಲ್ಲು ರೂಪದ ಕೆರಳಿಸುವ ಮಾತುಗಳನ್ನು ಮತ್ತೆ ಮತ್ತೆ ಆಡುತ್ತಲೇ ಇರುವುದು ದುರದೃಷ್ಟಕರ.

ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂಬ ನುಡಿಯೆಡೆಗೆ ನಡೆಯಬೇಕು

ಇರಲಿ ಇತ್ಯಾತ್ಮಕ ಸಾಮಾಜಿಕ ಚಹರೆ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಜೆಂಟಲಾಗನ್ ಎಂಬ ಪದ ನಮಗೆ ಅಪರಿಚಿತ. ಇದು ಸ್ವೀಡನ್‌ನಲ್ಲಿ ಇರುವ ನಿಷೇಧದ ಹೆಸರು. ಆದರೆ ಇದರ ಉದ್ದೇಶ ಇತ್ಯಾತ್ಮಕವಾದುದು. ಇದೊಂದು ಅಲ್ಲಿನ ಸಾಮಾಜಿಕ ಚಹರೆಯಾಗಿದ್ದು ಜನ ತಮ್ಮ ಸಂಪತ್ತು, ಸಂಬಳ ಎಷ್ಟು ಎಂದು ಸಾರ್ವಜನಿಕವಾಗಿ ಮಾತಾಡುವುದಿಲ್ಲ. ಯಾಕೆಂದರೆ, ಆ ಮೂಲಕ ತಾನು ಇತರರಿಗಿಂತ ಹೆಚ್ಚು ಅನುಕೂಲ ಇರುವವನು ಎಂದು ಹೇಳಿದಂತಾಗುತ್ತದೆ ಮತ್ತು ಇದು ಇತರರಿಗೆ ಇರಿಸುಮುರಿಸು ಉಂಟುಮಾಡುತ್ತದೆ ಎಂಬ ಕಾರಣಕ್ಕಾಗಿ. ಹಾಗೆಯೇ ತಮಗೆ ಬಂದ ಮನ್ನಣೆಗಳನ್ನೂ ಹೇಳಿಕೊಳ್ಳುವುದಿಲ್ಲವಂತೆ. ಅದು ಜಂಬ ಕೊಚ್ಚಿಕೊಂಡಂತಾಗುತ್ತದೆ ಎಂದವರು ಲಜ್ಜಿತರಾಗುತ್ತಾರೆ. ನೂರಾರು ವರ್ಷಗಳಿಂದ ಇದು ಅಲ್ಲಿನ ಸಾಮಾಜಿಕತೆಯ ಬೇರಿನಲ್ಲಿ ಸೇರಿಹೋಗಿದೆ.

ಸಾಮಾಜಿಕ ಚಹರೆಯನ್ನು ಬೇರೆ ಬೇರೆ ರೀತಿಯ ವರ್ತನೆಗಳ ಮೂಲಕ ಸ್ಥಾಪಿಸಲಾಗುತ್ತದೆ. ಆಕ್ರಮಣ, ಅಧಿಕಾರದ ಮೂಲಕ ಸಾಮಾಜಿಕ ಶ್ರೇಣೀಕರಣದಲ್ಲಿ ಮೇಲ್ನೆಲೆಯಲ್ಲಿಯೇ ಇರಲು ಹಪಹಪಿಸುವವರನ್ನು ಸೆಲೆಬ್ರಿಟಿಗಳನ್ನಾಗಿಸುವ ಸಮಾಜವೊಂದರಲ್ಲಿ ವ್ಯಕ್ತಿಯ ಸಂಪತ್ತು ಮತ್ತು ಯಾವುದೇ ರೂಪದಲ್ಲಿ ಗಳಿಸಿದ ಮನ್ನಣೆಗಳು ಮಾತ್ರ ಆಧಾರವಾಗಿ, ಅವರನ್ನು ಸಮೂಹಗಳು ಆರಾಧಿಸುವುದಕ್ಕೆ ಅನುವು ಮಾಡಿಕೊಡಲಾಗುತ್ತದೆ. ಸಾಮಾಜಿಕ ಮಾಧ್ಯಮಗಳ ಕಾಲದಲ್ಲಿ ಇದು ಇನ್ನಷ್ಟು ಮುನ್ನೆಲೆಗೆ ಬರುತ್ತಿದೆ. ಸಾರ್ವಜನಿಕವಾಗಿ ತೋರುವ ನಡೆಗಳು ಹೇಗೆ ಕೆಲವು ನಿಯಮಗಳನ್ನು ತಮಗೆ ಬೇಕಾದಂತೆ ಗಟ್ಟಿಗೊಳಿಸುತ್ತವೆ ಮತ್ತು ನಮ್ಮ ವಿರುದ್ಧದ ಸಂಚನ್ನು ಜಾರಿಗೊಳಿಸಲು ನಾವೇ ಹೇಗೆ ಸಹಾಯ ಮಾಡುತ್ತೇವೆ ಎಂಬುದನ್ನು ಕೆಲವು ಘಟನೆಗಳ ಮೂಲಕ ಗಮನಿಸಬಹುದು. ಈಚೆಗೆ ಮದ್ರಾಸ್ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿ ನೇಮಕಗೊಂಡ ಮಹಿಳೆಯೊಬ್ಬರು ಅಧಿಕಾರ ಸ್ವೀಕರಿಸುವ ಮೊದಲು ಸಾರ್ವಜನಿಕವಾಗಿ ತಮ್ಮ ಮನದ ಮಾತುಗಳನ್ನು ಹೇಳಿಕೊಂಡರು. ತಮಗೆ ಎಲ್ಲ ರೀತಿಯಿಂದಲೂ ಪ್ರೋತ್ಸಾಹ ನೀಡುವ ತಮ್ಮ ಪತಿಯ 'ಪವಿತ್ರ ಪಾದ'ಗಳಿಗೆ ಎರಗುತ್ತೇನೆ ಎಂದರು. ಅವರನ್ನು ಪ್ರೋತ್ಸಾಹಿಸಿದ ಅವರ ಪತಿಯ ಆರೋಗ್ಯಕರ ಮನಸ್ಸನ್ನು ನಾವೂ ಮೆಚ್ಚಿಕೊಳ್ಳೋಣ. ಮತ್ತು ಅವರ ನಡೆಯನ್ನು ಸಾರ್ವಜನಿಕವಾಗಿ ಹೇಳಿದರೆ ಅದು ಇನ್ನಷ್ಟು ಗಂಡಸರನ್ನು ಪ್ರೇರೇಪಿಸುತ್ತದೆ ಎಂದಾದರೆ ಅದೂ ಒಳ್ಳೆಯದೇ. ಪ್ರಶ್ನೆ ಅದಲ್ಲ. ಮನಸ್ಸಿನ ದೊಡ್ಡತನವನ್ನು ಪಾದಗಳಿಗೆ ಸಮೀಕರಿಸಿ, ಆ ಪಾದಗಳಿಗೆ ಎರಗುತ್ತೇನೆ ಎನ್ನುವ ಮೂಲಕ, ಎಷ್ಟೇ ದೊಡ್ಡ ಹುದ್ದೆಗೆ ಏರಿದರೂ ತನ್ನ ಜಾಗ ಪತಿಯ ಪಾದದ ಸಮೀಪವೇ ಎನ್ನುವುದನ್ನು ಇದು ಸ್ಥಾಪಿಸುತ್ತದೆ ಮತ್ತು ಪರಿಣಾಮವು ಅವರು ಭಾವಿಸುವುದಕ್ಕಿಂತ ವಿರುದ್ಧ ನೆಲೆಯಲ್ಲಿ ಆಗುತ್ತದೆ.

ಗಂಡು ಎಂಬ ಏಕೈಕ ಕಾರಣಕ್ಕೆ ತಾನೇ ಉಂಡ ತನ್ನದೇ ತಟ್ಟೆಯನ್ನು ತೊಳೆಯಲು ಬಿಡದೆ ಅವನಲ್ಲಿ ಮೇಲರಿಮೆ ಹುಟ್ಟಿಸಿ, ಹೆಂಡತಿಗೆ ಹೊಡೆದಾಗ 'ಯಾಕೆ ಹೊಡೆದೆ' ಎಂದು ಕೇಳಿದರೆ, 'ನಾನು ನಿನ್ನ ಗಂಡ ಕಣೇ' ಎಂಬ ಮೂರ್ಖ ಉತ್ತರವನ್ನು ಅಧಿಕೃತಗೊಳಿಸಿದ ಈ ಸಮಾಜದಲ್ಲಿ, ಇಂತಹ ವರ್ತನೆಗಳ ಬಗೆಗೆ ಮೈಯೆಲ್ಲಾ ಎಚ್ಚರ ಇರಬೇಕಾಗುತ್ತದೆ. ಜೀವನ ದುದ್ದಕ್ಕೂ ಅಪಾರ ತ್ಯಾಗ ಮಾಡುವ ಹೆಂಡತಿಯರು ಕೋಟ್ಯಂತರ ಜನರಿದ್ದಾರೆ. ಅತ್ಯುನ್ನತ ಹುದ್ದೆಗೆ ಏರುವಾಗ ಹೆಂಡತಿಯನ್ನು ಕನಿಷ್ಠ ನೆನಪಿಸಿಕೊಳ್ಳುವುದನ್ನೂ ನಿರೀಕ್ಷಿಸದ ಸಮಾಜದಲ್ಲಿ ಹೆಂಗಸು ತನ್ನ ಪರಿಶ್ರಮ, ಪ್ರತಿಭೆ, ತ್ಯಾಗವನ್ನು ಸಲೀಸಾಗಿ ಗಂಡನ ಪಾದಗಳಿಗೆ ಸಮೀಕರಿಸುವಂತೆ ಗಂಡಸು ಕೂಡ ಹೆಣ್ಣಿನ ಪಾದಗಳಿಗೆ ಸಮೀಕರಿಸಿದರೆ ಅದು ನಮಗೆ ಅಸಹಜವಾಗಿ ಕಾಣಿಸುತ್ತದೆಯಲ್ಲವೇ? ಯಾಕೆ? ಯಾಕೆಂದರೆ ನಾವು ಸಾವಿತ್ರಿಯು ಸತ್ಯವಾನನನ್ನು ಬದುಕಿಸಿಕೊಂಡ ಕತೆಯನ್ನು ಪ್ರತೀ ಮಗುವಿನ ಕಿವಿಗೆ ಹಾಕಿ ಬೆಳೆಸಿದಂತೆ, ಪ್ರಮದ್ವರೆಯನ್ನು ಬದುಕಿಸಿಕೊಳ್ಳಲು ರುರು ತನ್ನ ಅರ್ಧ ಆಯಸ್ಸು ತ್ಯಾಗ ಮಾಡಿದ್ದನ್ನು ಜನಪ್ರಿಯಗೊಳಿಸಿಲ್ಲ. ಹಾಗೆ ಮಾಡುವ ಮೂಲಕ ಹೆಂಗಸರಿಗೆ ನೀಡುವ ಸಂದೇಶವನ್ನು ಗಂಡಸರಿಗೆ ದಾಟಿಸುವುದಿಲ್ಲ. ಅರಿಸಿನ ಕುಂಕುಮದ ಮೂಲಕ ಗಂಡನ ಆಯಸ್ಸನ್ನು ಮೈಯ ಕಣಕಣದಲ್ಲಿ ತುಂಬಿದಂತೆ ಹೆಂಡತಿಯ ಆಯಸ್ಸನ್ನು ಅನಿವಾರ್ಯವಾಗಿಸಿಲ್ಲ. ಇವೆಲ್ಲವೂ ತಾರತಮ್ಯವನ್ನು ಪೊರೆವ ಸಾಂಸ್ಕೃತಿಕ ರಾಜಕಾರಣಗಳೇ ಆಗಿವೆ.

ಕಾರ್ಕಳದಲ್ಲಿ ಈಚೆಗೆ ಪರಶುರಾಮ ಥೀಮ್‌ಪಾರ್ಕ್ ನಿರ್ಮಾಣದ ಸುದ್ದಿ ಬಂತು. ಬೆನ್ನ ಹಿಂದೇ ಕರಾವಳಿಯ ಜನರು ಆರಾಧಿಸುವ, ಅವರ ವಿಶಿಷ್ಟ ಗುರುತೇ ಆಗಿರುವ ದೈವಗಳನ್ನು ಪರಶುರಾಮನ ಕಾಲಬುಡದಲ್ಲಿ ದೀನರಾಗಿ ಚಿತ್ರಿಸಿರುವ ಕುರಿತು ಆಕ್ಷೇಪಗಳೂ ಬಂದವು. ಪರಶುರಾಮ ತನ್ನ ಕೊಡಲಿಯಿಂದ ಸಮುದ್ರವನ್ನು ತಳ್ಳಿ ಕರಾವಳಿ ಭೂಪ್ರದೇಶ ಸೃಷ್ಟಿಸಿದ ಎಂದೂ, ಆತ ಕ್ಷತ್ರಿಯರ ವಂಶ ನಾಶ ಮಾಡಲು ಹೊರಟವನು ಎಂದೂ ಕತೆಗಳಿವೆ. ಹಾಗೆಯೇ ಅತ ತಾಯಿಯ ಕತ್ತು ಕಡಿದು ಮುಂದೆ ಆಕೆ ಪುನಃ ಬದುಕಿದ ಕತೆಯೂ ಇದೆ. ಕರಾವಳಿಯ ಕ್ಷತ್ರಿಯರೂ ಸೇರಿದಂತೆ ದೈವಾರಾಧನೆ ಮಾಡುವ ಬ್ರಾಹ್ಮಣೇತರರು ತಮ್ಮ ದೈವವನ್ನು ಆತನ ಕಾಲಬುಡಕ್ಕೆ ಹಾಕುವ ಮೂಲಕ ಅವನ ಶ್ರೇಷ್ಠತೆಯನ್ನು ಮಾನ್ಯ ಮಾಡಿ,



ತಾವು ಸ್ವತಃ ದೀನರಾಗಲು ತಯಾರಾಗುವ ಸಾಂಸ್ಕೃತಿಕ ನಡೆಯಿದು. ಕರಾವಳಿಯಲ್ಲಿ ಹೆಣ್ಣುದೈವಗಳೂ ಇವೆ. ಮಾತೃಮೂಲೀಯ ಕುಟುಂಬ ಪದ್ಧತಿ ಇದೆ. ಸಿರಿಯ ಪಾಡ್ದನಗಳನ್ನು ಇವರು ಹಾಡುತ್ತಾರೆ. ಸ್ತ್ರೀ ದೈವಗಳನ್ನು ಆರಾಧಿಸಿಯೂ ವಂಶ ಮೂಲವನ್ನು ಹೆಣ್ಣುಮಕ್ಕಳ ಮೂಲಕ ಗುರುತಿಸಿಯೂ ಹೆಂಗಸರು ಸಮರ್ಥವಾಗಿ ಆಡಳಿತ ನಿರ್ವಹಣೆ ಮಾಡುವುದನ್ನು ಗಮನಿಸಿಯೂ ಇಲ್ಲಿ ಪುರುಷರ ಯಜಮಾನಿಕೆಯೇ ನಡೆಯುವುದು. ಅಂದರೆ, ತತ್ವದಲ್ಲಿ ಸ್ತ್ರೀಯನ್ನು ಮುನ್ನೆಲೆಗೆ ತಂದರೂ ಆಚರಣೆಯಲ್ಲಿ 'ನೀನು ಏನೇ ಆದರೂ ಗಂಡಿನ ಅಧೀನಳು' ಎಂಬುದನ್ನು ಸ್ಥಾಪಿಸಲಾಗಿದೆ.

ಕರಾವಳಿಯ ಜೀವನಾನುಭವದ ದಟ್ಟ ಚಿತ್ರಣ ಇರುವ, ಎಚ್.ನಾಗವೇಣಿಯವರು ಬರೆದ 'ಗಾಂಧಿ ಬಂದ' ಕಾದಂಬರಿಯಲ್ಲಿ ಒಂದು ಸನ್ನಿವೇಶ ಬರುತ್ತದೆ. ದಾರುವಿನ ಗಂಡ ಮಾರಪ್ಪ. ಬಂಟರ ಕುಟುಂಬದ ಆಕೆಯ ತಂದೆಗೆ ನೂರಾರು ಮುಡಿ ಆಸ್ತಿ ಇದೆ. ಹೇರಳ ಒಡವೆಯ ಸಂಪತ್ತಿದೆ. ಇದರ ಪಾಲು ಅವಳಿಗೂ ಇದೆ. ಗಾಂಧಿಯ ಆದರ್ಶಗಳಿಂದ ಪ್ರಭಾವಿತನಾಗಿದ್ದ ಮಾರಪ್ಪ ತನಗೆ ಹೆಂಡತಿ ಮನೆಯಿಂದ ಏನೂ ಬೇಡ ಎನ್ನುವುದೇನೋ ಸರಿ. ಆದರೆ, ಪ್ರೀತಿಯ ಏಕೈಕ ಮಗಳಿಗೆ ಮೀನೆಂದರೆ ಬಹಳ ಪ್ರೀತಿ ಎಂಬ ಕಾರಣಕ್ಕೆ, ಮೀನು ಹಿಡಿಯುವ ಹಬ್ಬ ಮುಗಿಸಿ ಅವಳಪ್ಪ ಅವಳಿಗೆ ಮೀನು ಕೊಡಲು ಹೋದಾಗ ಅಳಿಯ ಕೆಂಡಾಮಂಡಲನಾಗಿ ಅದನ್ನು ನಿರಾಕರಿಸುತ್ತಾನೆ. ತಂದೆ ಅಸಹಾಯಕನಾಗಿ ಹೊರಟು ಹೋಗುತ್ತಾನೆ. ತವರಿನ ಎಲ್ಲಾ ಹಕ್ಕು ಇರುವ ಕುಟುಂಬ ಪದ್ಧತಿಯೂ ಕೊನೆಗೆ ಅವಳಿಗಿಂತ ಅವನು ಶ್ರೇಷ್ಠ ಎಂದು ನಿರೂಪಿಸುತ್ತದೆಯೇ ವಿನಾ ಇಬ್ಬರೂ ಸಮಾನರು ಎಂದಲ್ಲ. ಹೀಗಿರುವಾಗ, ಇಂದಿಗೂ ಹೇರಿಕೆ ಹೇಗೆಲ್ಲಾ ಆಗುತ್ತಿರುತ್ತದೆಯೆಂದರೆ, ನಮ್ಮ ನಮ್ಮ ಸರ್‌ನೇಮ್‌ಗಳನ್ನೂ ನಾವು ನಿರ್ಧರಿಸುವಂತಿಲ್ಲ ಎಂಬಲ್ಲಿವರೆಗೆ!

ಅತ್ಯಾಧುನಿಕ ತಂತ್ರಜ್ಞಾನಗಳು ಓಬೀರಾಯನ ಕಾಲದ ಭಿನ್ನ ಭೇದದ ಚಿಂತನೆಗಳನ್ನು ಹೊಸ ಹೊಸ ವೇಷದಲ್ಲಿ ನಮ್ಮ ಮನದೊಳಗೆ ಹೊಲಿಗೆ ಹಾಕುತ್ತವೆ. ಇದರ ಪರಿಣಾಮವಾಗಿ, ವ್ಯಕ್ತಿಗತ ಬದುಕನ್ನು ಹೆಚ್ಚು ಪ್ರೀತಿಸಬೇಕೆಂಬ ಒಂದು ಚಲನೆ ಸ್ವೀಡನ್‌ನಲ್ಲಿ ಶುರುವಾಗಿದೆ. ಜೆಂಟಲಾಗನ್ ಅನ್ನು ವಿರೋಧಿಸುವ ಮನೋಭಾವ ಆರಂಭವಾಗಿದ್ದು, ಇದು ಅಷ್ಟು ಬೇಗ ಅಲ್ಲಿ ಬೇರೂರಲಾರದು ಎಂದು ಹೆಚ್ಚಿನವರು ಆಶಿಸುತ್ತಾರೆ. ಜಗತ್ತಿನಲ್ಲೇ ತಾರತಮ್ಯದ ಅಂತರ ಕಡಿಮೆ ಇರುವ, ಲಿಂಗ ತಾರತಮ್ಯ ಅತಿ ಕಡಿಮೆ ಇರುವ ದೇಶ ಇದಾಗಿರುವುದಕ್ಕೂ ಇಂತಹ ಮನೋಭಾವಕ್ಕೂ ಒಂದು ಸಂಬಂಧ ಇರುವಂತಿದೆ. ಇದು ಸಾಧ್ಯವಾಗಿದ್ದು ಅಲ್ಲಿನ ಜನರ ಶೈಕ್ಷಣಿಕ ಸಾಧನೆ ಮತ್ತು ಸೆಕ್ಯುಲರ್ ಮನೋಭಾವದಿಂದ ಎನ್ನಲಾಗುತ್ತಿದೆ. ವೈಯಕ್ತಿಕತೆಯ ತಪ್ಪು ವ್ಯಾಖ್ಯಾನದಿಂದ ಸಾಮುದಾಯಿಕತೆಯಲ್ಲಿ ಬಿರುಕು ತರುವುದು ಸುಲಭ. ಅದನ್ನು ನಾವು ಈಗಾಗಲೇ ಅನುಭವಿಸುತ್ತಿದ್ದೇವೆ. ಹಣವೆಂಬ ಕೇಂದ್ರದ ಸುತ್ತ ತಾರತಮ್ಯದ ಕೋಟೆಯನ್ನು ಬೆಳೆಸುವುದು, ಅದಕ್ಕಾಗಿ ಅಧಿಕಾರದ ಅಸ್ತ್ರವಾಗಿ ಧರ್ಮವನ್ನು ಬಳಸಿಕೊಳ್ಳುವುದು, ಆ ಮೂಲಕ ನಮ್ಮ ಅನನ್ಯ ಚಹರೆಗಳನ್ನೇ ಅಳಿಸುವುದು ನಮಗೆ ತಿಳಿಯಬೇಕಾಗಿದೆ.

ಆಕ್ರಮಣದ ಸಾಂಸ್ಕೃತಿಕ ರಾಜಕಾರಣವನ್ನು ಮೀರುವುದರೆಡೆಗೆ ಆಕ್ರಮಣಕ್ಕೆ ಒಳಗಾದವರಾದರೂ ಯೋಚಿಸಬೇಕಲ್ಲವೇ?

ಚುರುಮುರಿ



ಎಲೆಕ್ಷನ್ ಕುರುಕ್ಷೇತ್ರ

• ಲಿಂಗರಾಜು ಡಿ.ಎಸ್.

ನಮ್ಮೂರ ಮಾರಿಹಬ್ಬಕ್ಕೆ ಎಲೆಕ್ಷನ್ ಕುರುಕ್ಷೇತ್ರ ನಾಟಕ ಆಡಬಕು ಅಂತ ತೀರ್ಮಾನ ಆಗಿತ್ತು. ನಾಟಕದಲ್ಲಿ ಕೈರಾಜ, ಕಮಲನಾಭ, ತೆನೆರಾಯ ಅನ್ನೋವು ಮೂರೇ ಪಾತ್ರ ಇದ್ದೋವು. ನಾಟಕ ಸುರುವಾತು.

'ದಂಡಿಪೆ ಬಾಲರೇ! ತಲೆಗಳ ಮೆಟ್ಟಿ, ಕುಟ್ಟಿ ಬಹುಮತವ ಗೆಲ್ವೆ' ಸೂತ್ರಧಾರನಾದ ತೆನೆರಾಜ ಬಂದು ಗರ್ಜಿಸಿ ಹೋದ.

'ಟೆಂಡರಾಭರಣ, ಕ್ಯಾಶು ಹರಣ, ವಂದಿಪೆ ನಿನಗೆ ಪರ್ಸೆಂಟೇಜ್ ಸಿರಿಯೇ' ಹಾಡುತ್ತಾ ಬಂದ ಕೈರಾಜ ಕಮಲನಾಭನ ಕಂಡು 'ತರಾತುರಿಯಲ್ಲಿ ಟೆಂಡರು ನುಂಗುತ್ತಾ ಸಾಲಕ್ಷೇಪದಲ್ಲಿ ತೊಡಗಿರುವ ನೀನು ಧಾರ್ಯ ಸಾರಥಿ, ನಿನ್ನ ಮುಖಕ್ಕೆ ಮಂಗಳಾರತಿ' ಅಂದ.

'ತಲೆ ಸರಿಯಿಲ್ಲದವರ ಮಾತು ಕೇಳಿ ಮನಸ್ಸು ಪರಿತಪಿಸುತ್ತಿದೆ. (ಹಾಡು) ಅನೀತಿಯಲಿ ಬಲು ಮಾತನಾಡಿ ಘಾತಿಸುವೆಯೇಕೆ, ತರವೆನಿಸದು ಛೀ ದುರುಳ. ಕಟ್ಟುಕಥೆಗಳ ಕುಟ್ಟುತ ಬರುವೆಯ. ಬಿಗಿದು ಸಿಗಿದುಬಿಡುವೆ' ಅಂದ ಕಮಲನಾಭ.

'ನಿನ್ನ ಕೇಸರಿ ಬಾಣಕ್ಕೆ ತ್ರಾಣವೆಲ್ಲಿದೆ? ನಮಗೆ ರಾಜ್ಯ ಸಿಕ್ಕೊಡನೆಯೇ ನಿಮ್ಮ ಅಕ್ರಮಗಳನ್ನೆಲ್ಲಾ ಸೀಳಿ ಹಾಳುಗೈವೆ!' ಅನ್ನುತ್ತಾ ಕೈರಾಜ ಎದೆ ಬಡಿದುಕೊಂಡ.

'ಎಲೆಲವೋ ಧೂರ್ತ, ನಮಗೆ ಮಠ ಸ್ವಾಮಿಯ ಆಶೀರ್ವಾದವಿದೆ. ನಿಮ್ಮ ಕಾಲದ ಹಗರಣಗಳನ್ನು ಮರೆತೆಯಾ? (ಹಾಡು) ಕೊಡುವುದಿಲ್ಲವೋ ರಾಜ್ಯವಾ, ಎಲೆಕ್ಷನ್ ರಣದೊಳ್ ಜೈಸಿ ಗೆಲ್ವೇ ನಾಂ ರಾಜ್ಯವ, ಹರಟೆಯ ಬಿಡು ಮರುಳಾ' ಕಮಲನಾಭ ತೊಡೆ ತಟ್ಟಿದ.

'ಅಧಿಕಾರ ಲುಪ್ತವಾಗಿ ಸಿರಿಸಂಪದ ಬರಿದಾಗಿ ನೊಂದಿರುವ ಎಮಗೆ ಒಂದು ಟೆಂಡರನ್ನೂ ಕೊಡದ ಕಪಟಿಯೇ, ನಿನ್ನ ಮರುಳು ಮಾತಿಗೆ ಮಠಸ್ವಾಮಿಯು ಭ್ರಾಂತನಾಗನು. ನಮ್ಮನ್ನು ಹೊಡೆಯುವ ಸಂಭ್ರಮವೇಕೆ? ಬಾರೆಲೋ ಹೇಡೀಯೆ ನೀಂ' ಅಂದ ಕೈರಾಜ.

ಇವರಿಬ್ಬರ ಕಪಟನಾಟಕ ನೋಡುತ್ತಿದ್ದ ನಮ್ಮೂರ ಮತರಾಯ 'ಅನುದಿನ ನಿಮ್ಮ ನಂಬಿದ್ದೆನಾಂ, ಮತದಾರರಾದ ಎಮ್ಮ ಅನುದಿನ ಕೆರಳಿಸುವ ನಿಮ್ಮ ದುರಾವೇಶಗಳ ತೊರೆಸಿ ಧ್ವಂಸಗೈವೆ' ಅಂತ ಎದ್ದೇಟಿಗೆ ಪಾತ್ರಧಾರಿಗಳು ಹೆದರಿ ಪಲಾಯನ ಗೈಯ್ಯಲಾಗಿ ನಾಟಕ ಕೊನೆಯಾಯ್ತು.

ಸಂಗತ

ಜೋಕೆ, ಮನೆಯ ಭಾಷೆ ಕಳೆದೀತು...

ಪೋಷಕರು ಮಕ್ಕಳೊಂದಿಗೆ ಮಾತೃಭಾಷೆಯಲ್ಲೇ ಮಾತನಾಡುವ, ಕಥೆ ಹೇಳುವ, ಪದ್ಯ ಕಲಿಸುವ ವ್ಯವಧಾನವನ್ನು ಕಲ್ಪಿಸಿಕೊಳ್ಳಬೇಕು

• ಯೋಗಾನಂದ

ಮಾತೃಭಾಷೆ, ಮಗು ಕಲಿಯುವ ಮೊದಲ ಭಾಷೆ. ಭಾಷೆ ಎನ್ನುವುದು ಪ್ರತಿಯೊಂದು ಸಂಸ್ಕೃತಿಯ ಅಸ್ತಿಭಾರ. ಜಾಗತೀಕರಣ ತ್ವರಿತವಾಗಿ ಆವರಿಸುತ್ತಿದೆ. ಎಲ್ಲೆಲ್ಲೂ ನಿರರ್ಗಳ ಇಂಗ್ಲಿಷಿನ ಬೆನ್ನೇರುವ ಧಾವಂತ. ಮಾತೃಭಾಷೆ ಅಥವಾ ಮನೆಭಾಷೆಯು ಹುಟ್ಟಿನಿಂದ ಮಗು ತನ್ನದಾಗಿಸಿಕೊಳ್ಳುವ ಭಾಷೆ. ಮಕ್ಕಳು ಆಡುತ್ತಾ, ನೋಡುತ್ತಾ, ಒಡನಾಡುತ್ತಾ ಮೈಗೂಡಿಸಿಕೊಳ್ಳುವ ಸಂವಹನದ ಬುನಾದಿ ಅದು.

ಸಂಸ್ಕೃತಿಯೊಂದಿಗೆ ಬೆರೆತಿರುವ ಮಾತೃಭಾಷೆಯು ಶಾಲೆಯಲ್ಲಿ ಕಲಿಕೆಯ ಭಾಷೆಯೂ ಆದರೆ ಬಹುಮುಖ ಅನುಕೂಲಗಳಿವೆ. ಮಕ್ಕಳಲ್ಲಿ ಚಿಂತನಾ ಸಾಮರ್ಥ್ಯ, ಸಂವೇದನಾಶೀಲತೆ ವರ್ಧಿಸುತ್ತದೆ, ಇತರ ಭಾಷೆಗಳನ್ನೂ ಕಲಿತಾಡಲು ಅವರಿಗೆ ಆಸರೆ ಲಭಿಸುತ್ತದೆ. ಮಕ್ಕಳಲ್ಲಿ ಶಾಲೆಯ ಬಗ್ಗೆ ಹೆಚ್ಚಿನ ಸಕಾರಾತ್ಮಕ ಮನೋಭಾವ ರೂಪುಗೊಳ್ಳುವುದು. ಶಾಲೆಯನ್ನು ಪ್ರೀತಿಸುತ್ತಾರೆ, ಆನಂದಿಸುತ್ತಾರೆ. ಅಧ್ಯಾಪಕರಿಗೂ ಬೋಧಿಸುವುದು ಸರಾಗವಾಗುವುದು.

ಮಾತೃಭಾಷೆಯಲ್ಲಿ ರೂಢಿಸಿಕೊಂಡ ಕೌಶಲಗಳು ಮಕ್ಕಳಿಗೆ ಮರೆಯದಂತೆ ನಾಟಿರುತ್ತವೆ. ನೆಲ್ಸನ್ ಮಂಡೇಲಾ 'ಒಬ್ಬಾತನಿಗೆ ಅರ್ಥವಾಗುವ ಭಾಷೆಯಲ್ಲಿ ಮಾತನಾಡಿದರೆ ಅವನ ತಲೆಗೆ ಸಲ್ಲುವುದು, ಅದೇ ಅವನ ಭಾಷೆಯಲ್ಲಿ ಮಾತನಾಡಿದರೆ ಆತನ ಹೃದಯಕ್ಕೆ ಸಲ್ಲುತ್ತದೆ' ಎಂದರು. ಒಂದು ಅಂಶವಂತೂ ವಿಪರೀತ ಚಕಿತಗೊಳಿಸುತ್ತದೆ. ಜಾಗತಿಕ ಮಟ್ಟದಲ್ಲಿ ಶೇಕಡ 40ರಷ್ಟು ಮಂದಿಗೆ ಅವರು ಮಾತನಾಡದ ಅಥವಾ ಅರ್ಥವಾಗದ ಭಾಷೆಯಲ್ಲಿ ಶಿಕ್ಷಣ ದೊರೆಯುತ್ತಿದೆ! ಮಾತೃಭಾಷೆಯು ಆತ್ಮವಿಶ್ವಾಸದ ಪ್ರತೀಕ.

ಶೈಕ್ಷಣಿಕ ಗುಣಮಟ್ಟವನ್ನು ವೃದ್ಧಿಸುವಲ್ಲಿ ಮಾತೃಭಾಷೆಗೆ ಪರ್ಯಾಯವಿಲ್ಲ ಎಂಬುದನ್ನು ಮನಗಂಡ ಯುನೆಸ್ಕೊ, ಮಾತೃಭಾಷಾ ಮಾಧ್ಯಮವನ್ನು ಎತ್ತಿ ಹಿಡಿದಿದೆ. ಹಾಗಾಗಿಯೇ ಅದು ಫೆಬ್ರುವರಿ 21ನೇ ತೇದಿಯನ್ನು 'ಅಂತರರಾಷ್ಟ್ರೀಯ ಮಾತೃಭಾಷೆ ದಿನ' ಎಂದು ಘೋಷಿಸಿದೆ. ಜಗತ್ತಿನ ಭಾಷಾ ವೈವಿಧ್ಯದ ಪರಂಪರೆಗೆ ಚ್ಯುತಿಯಾಗದಂತೆ ಅವರವರ ತಾಯಿನುಡಿಯ ಹಿರಿಮೆ ಮನಗಾಣಬೇಕೆಂಬ ಯುನೆಸ್ಕೊ ಮಾರ್ಗದರ್ಶನವು ವಿಶ್ವದಾದ್ಯಂತ ಮನ್ನಣೆಗೆ ಪಾತ್ರವಾಗಿದೆ.

ಕನ್ನಡದ ಸಂದರ್ಭದಲ್ಲಿ ಸಂಭಾವ್ಯ ಎಡವಟ್ಟೊಂದು ಜನಪ್ರಿಯವಾಗಿದೆ. ಆ ಬಾಲಕನ ಮಾತೃಭಾಷೆ ಕನ್ನಡ, ಶಾಲೆಯ ಭಾಷೆ ಇಂಗ್ಲಿಷ್. ಒಮ್ಮೆ ಪ್ರಬಂಧ ರಚಿಸುವಾಗ ಗುಬ್ಬಿಯ ಮಲಕ್ಕೆ ಇಂಗ್ಲಿಷಿನಲ್ಲಿ ಸಂವಾದಿ ಪದಕ್ಕಾಗಿ ಗಲಿಬಿಲಿಗೊಂಡ. ಕಡೆಗೆ 'ಕೌ ಡಂಗ್ ಆಫ್ ದಿ ಸ್ಪ್ಯಾರೊ' ಪ್ರಯೋಗ ಅನಿವಾರ್ಯವಾಯಿತು! ಮನೆ ಮತ್ತು ಶಾಲೆಯ ಭಾಷೆ ಬೇರೆಯಾದುದರ ಫಲವಿದು.

ಜರ್ಮನಿಯ ರಾಜನೀತಿ ತಜ್ಞರಾಗಿದ್ದ ಜಿ.ಸ್ಟ್ರೇಸಿಮನ್ ಅವರ 'ಮಾತೃಭಾಷೆ ಆತ್ಮದ ಅಂತರಂಗದ ಅಭಯಧಾಮ' ಎಂಬ ನುಡಿ ಹೃದಯಸ್ಪರ್ಶಿ. ಮಗು ಬೆಳೆಯುವುದು ತಾಯಿಯ ಮಡಿಲಿನಲ್ಲೇ. ಹಾಗಾಗಿಯೇ ಆಕೆ ಅನ್ಯೋನ್ಯವಾಗಿಸುವ ಮಾತನ್ನು ಮಾತೃಭಾಷೆ ಎನ್ನುವುದು. ಮಾತೃಭಾಷೆಯು ಪೋಷಕರ ಮೂಲ ಭಾಷೆ. ಕನ್ನಡದಲ್ಲಿ ಆಲೋಚಿಸಿ, ಕನ್ನಡದಲ್ಲಿ ರಚಿಸಿದ ಗುಣಮಟ್ಟದ ಪಠ್ಯಪುಸ್ತಕಗಳು ಬೇಕು. ಇದಕ್ಕೂ ಮುಖ್ಯವಾಗಿ ಅವನ್ನು ಸಮರ್ಥವಾಗಿ ಬೋಧಿಸಬಲ್ಲ ಶಿಕ್ಷಕ ಪಡೆಯೂ ಅಗತ್ಯ. ನಮ್ಮದಲ್ಲದ ಭಾಷೆಯಲ್ಲಿ ಓದಿದರೆ ಅರ್ಥವಾಗದು. ಅರ್ಥವಾಗದಿದ್ದನ್ನು ಕಲಿಯಲಾಗದು. ಹಾಗಾಗಿ ಸ್ವಯಂ ಸ್ಫೂರ್ತಿಯಿಂದ ಮಾತೃಭಾಷೆಯ ಮೂಲಕವೇ ಓದುವುದನ್ನು ಗ್ರಹಿಸಿ ನಮ್ಮದಾಗಿಸಿಕೊಳ್ಳಬೇಕು.

ಸ್ವದೇಶಿ ಭಾಷೆಗಳ ಸಂರಕ್ಷಣೆ ಎಲ್ಲರ ಹೊಣೆ. ವಿಶ್ವದ ಒಟ್ಟು 7,000 ಭಾಷೆಗಳ ಪೈಕಿ 3,000 ಭಾಷೆಗಳು ಈ ಶತಮಾನದ ಕೊನೆಗೆ ನಶಿಸುವ ಆತಂಕವಿದೆ. ಭಾರತದಲ್ಲಿ ಅರುಣಾಚಲ ಪ್ರದೇಶದ ಗುಡ್ಡಗಾಡು ಪ್ರದೇಶಗಳಲ್ಲಿನ 'ಕೋರೋ' ಎಂಬ ಭಾಷೆ ಅಳಿಯುತ್ತಿದೆ. 'ಮಾಸಿ' ಸಿಕ್ಕಿಂ ರಾಜ್ಯದ ಒಂದು ಸ್ಥಳೀಯ ಭಾಷೆ. ಅದನ್ನಾಡುವವರ ಸಂಖ್ಯೆ ಕೇವಲ ನಾಲ್ಕು. ಅವರಾದರೋ ಗ್ಯಾಂಗ್ಟಕ್‌ನಲ್ಲಿರುವ ಒಂದೇ ಕುಟುಂಬದವರು. ಇಂಡೊನೇಷ್ಯಾದಲ್ಲಿ 136 ಭಾಷೆಗಳಿದ್ದು ಶೇಕಡ 80ರಷ್ಟು ಭಾಷೆಗಳು ಆಡುವವರಿಲ್ಲದೆ ಮರೆಯಾಗುತ್ತಿವೆ. ಮಲೇಷ್ಯಾದಲ್ಲಿ 707 ಭಾಷೆಗಳಿವೆ. ಆದರೆ, ಅದರ ಅರ್ಧದಷ್ಟು ಅಳಿವಿನ ಅಂಚಿನಲ್ಲಿವೆ.



ವಿಶ್ವದಾದ್ಯಂತ ಹಲವಾರು ಮಾತೃಭಾಷೆಗಳು ಅವಸಾನದ ಅಂಚು ತಲುಪಿವೆ. ಹದಿನೈದು ದಿನಗಳಿಗೊಂದು ಸ್ವದೇಶಿ ಭಾಷೆ ನಶಿಸುತ್ತಿದೆ. ಸ್ವದೇಶಿ ಭಾಷೆಗಳ ಅವಸಾನವಾದರೆ ಒದಗುವ ನಷ್ಟ ಅಪಾರ. ಜ್ಞಾನ, ಅನುಭವ, ಸ್ಥಳೀಯ ಸಸ್ಯ ಮತ್ತು ಪ್ರಾಣಿಗಳ ಮಾಹಿತಿ, ಗಿರಿಕಂದರಗಳ ವಿವರ, ಸಮುದಾಯ ಪ್ರಜ್ಞೆ, ಅನನ್ಯ ಪ್ರಾಪಂಚಿಕ ದೃಷ್ಟಿ ಎಲ್ಲವೂ ಕಳೆದುಹೋಗುತ್ತವೆ. ಇನ್ನು ಭಾವಿ ಪೀಳಿಗೆಗಳಿಗೆ ರವಾನೆಯಾಗುವ ಅರಿವೇನು? ಸಾಹಿತ್ಯವೇನು? ಹಾಡು ಹಸೆ ಏನು?

ಅಂತರ್ಜಾತಿ ವಿವಾಹದ ಕಾರಣದಿಂದಾಗಿ ತಂದೆ, ತಾಯಿಯ ಭಾಷೆಗಳು ಭಿನ್ನವೇ ಇರಲಿ. ಮಕ್ಕಳ ಹಿತದೃಷ್ಟಿಯಿಂದ ಯಾವುದಾದರೂ ಒಂದು ಭಾಷೆ ಮಾತೃಭಾಷೆಯಾಗಬಹುದಲ್ಲ. ಪೋಷಕರು ತಮ್ಮ ಮಕ್ಕಳೊಂದಿಗೆ ಹೆಚ್ಚು ಸಮಯ ಕಳೆಯಬೇಕು. ಮಾತೃಭಾಷೆಯಲ್ಲೇ ಮಾತನಾಡುವ, ಕಥೆ ಹೇಳುವ, ಪ್ರಾಸಬದ್ಧ ಪದ್ಯ ಕಲಿಸುವ ವ್ಯವಧಾನವನ್ನು ಕಲ್ಪಿಸಿಕೊಳ್ಳಬೇಕು. ಇದರಿಂದ ಭಾಷೆಗಳ ಅಳಿವಿಗೆ ಬಹುಮಟ್ಟಿಗೆ ಲಗಾಮು ಬೀಳುವುದು. ಎಷ್ಟಾದರೂ ಮನೆಯಂಗಳದಿಂದಲೇ ಅಲ್ಲವೆ ಜಾಗತಿಕ ಸವಾಲಿಗೆ ಪರಿಹಾರದ ನಾಂದಿ?

ವಾಚಕರ ವಾಣಿ

ಕತ್ತೆ ಎಂದರೆ...?!

ಬಟ್ಟೆ ತೊಳೆಯುವವನೊಬ್ಬ ಒಮ್ಮೆ ತನ್ನ ಕತ್ತೆಯ ಮೇಲೆ ಅಪಾರ ಹೊರೆಯನ್ನು ಹೊರಿಸಿಕೊಂಡು ರಸ್ತೆಯಲ್ಲಿ ನಡೆದುಹೋಗುತ್ತಿದ್ದ. ಆಗ ಅವನಿಗೆ ಹಸಿವು, ಬಾಯಾರಿಕೆಯಾದ್ದರಿಂದ, ಅವನು ಕತ್ತೆಯನ್ನು ಒಂದು ಬದಿಗೆ ನಿಲ್ಲಿಸಿ, ತಾನು ಪಕ್ಕದಲ್ಲಿದ್ದ ಹೋಟೆಲ್‌ಗೆ ತಿನ್ನಲು ಹೋದ. ಇದನ್ನು ಗಮನಿಸುತ್ತಿದ್ದ ಒಬ್ಬ ವ್ಯಕ್ತಿ, ಆ ಕತ್ತೆಯ ಬಳಿ ಬಂದು 'ನಿನ್ನನ್ನು ನೋಡಿದರೆ ಅಯ್ಯೋ ಪಾಪ ಅನ್ಸುತ್ತೆ, ನಾನು ಸಹ ಬಟ್ಟೆ ತೊಳೆಯುವವನೇ. ಪಕ್ಕದ ಊರು. ನೀನು ನನ್ನ ಜೊತೆಗೆ ಬರುತ್ತೀಯ? ನಿನ್ನನ್ನು ಚೆನ್ನಾಗಿ ನೋಡಿಕೊಳ್ತೀನಿ' ಎಂದಾಗ, ಆ ಕತ್ತೆಯು ಕ್ಷಣಕಾಲ ಯೋಚಿಸಿ, ಆನಂತರ 'ಇಲ್ಲಪ್ಪ ನಾನು ನಿನ್ನ ಜೊತೆ ಬರುವುದಿಲ್ಲ. ನೀನೇನು ನನ್ನನ್ನು ಸಿಂಹಾಸನದ ಮೇಲೆ ಕೂರಿಸುತ್ತೀಯ? ಇಲ್ಲವಲ್ಲ, ಇದೇ ಹೊರೆ ಹೊರುವ ಚಾಕರಿಗೆ ತಾನೇ ನನ್ನನ್ನು ಬಳಸುತ್ತೀಯ' ಎಂದಾಗ, ಅವನು ನಿರ್ವಾಹವಿಲ್ಲದೆ 'ನಿನ್ನ ಹಣೆಬರಹ' ಎಂದು ಹೇಳಿ ಅಲ್ಲಿಂದ ನಿರ್ಗಮಿಸಿದ. ಈಗ ಹೇಳಿ ಕೇಳಿ ಚುನಾವಣೆ ಹತ್ತಿರವಾಗುತ್ತಿರುವ ಸಮಯ. ಇದನ್ನು ನಾವು, ಬಟ್ಟೆ ತೊಳೆಯುವವನು ಎಂದರೆ ಸರ್ಕಾರ, ಕತ್ತೆ ಎಂದರೆ ಮತದಾರ, ಹೊರೆ ಎಂದರೆ ಏರುತ್ತಿರುವ ಅಗತ್ಯ ವಸ್ತುಗಳ ದರಗಳು, ತೆರಿಗೆಗಳು... ಎಂದುಕೊಳ್ಳಬಹುದೇನೊ! **ವಿ.ವಿಜಯೇಂದ್ರ ರಾವ್,** ಬೆಂಗಳೂರು

ಲಾಡು ಏನಾಯ್ತು ಮಗಾ...?!

ಅಂದು ಏಳನೇ ವೇತನ ಆಯೋಗ ರಚನೆಯಾದಾಗ ಎಲ್ಲರೂ ನೌಕರರಿಗೆ ಹೇಳಿದರು 'ಲಾಡು ಬಿತ್ತು ಮಗಾ' ಎಂದು! (ಆಗ ನೌಕರರ ಸಂಘದವರು ಬಾಕ್ಸ್‌ನಲ್ಲಿ ಏಳೇಳು ಲಾಡು ತುಂಬಿ ಹಂಚಿದ್ದರು). ಈಗ ಬಜೆಟ್‌ನಲ್ಲಿ ವೇತನ ಆಯೋಗದ ಬಗ್ಗೆ ಸೊಲ್ಲಿಲ್ಲದ ವಿಚಾರ ತಿಳಿದು, ನೌಕರರನ್ನು ಎಲ್ಲರೂ ಕೇಳುತ್ತಿದ್ದಾರೆ 'ಲಾಡು ಬಿದ್ದೋಯ್ತಾ ಮಗಾ' ಎಂದು! **ಜೆ.ಬಿ.ಮಂಜುನಾಥ,** ಪಾಂಡವಪುರ

ಕಾರ್ಖಾನೆ ಸ್ಥಗಿತ ಸಲ್ಲ

ಭದ್ರಾವತಿಯಲ್ಲಿರುವ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಮುಚ್ಚುವುದರ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಬಿಜೆಪಿ ಮುಖಂಡ ಬಿ.ಎಸ್.ಯಡಿಯೂರಪ್ಪ ಹಾಗೂ ಆ ಭಾಗದ ಜನಪ್ರತಿನಿಧಿಗಳು ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳು, ವಿವಿಧ ರಾಜಕೀಯ ಪಕ್ಷಗಳಿಗೆ ಸೇರಿದ ನಾಯಕರು ಈ ಕಾರ್ಖಾನೆಯನ್ನು ಉಳಿಸಿಕೊಳ್ಳಬೇಕೆಂಬ ಮನವಿಯನ್ನು ಮುಖ್ಯಮಂತ್ರಿಗೆ ಸಲ್ಲಿಸಿದ್ದಾರೆ. 'ಯಾವುದೇ ಕಾರಣಕ್ಕೂ ಈ ಕಾರ್ಖಾನೆಯನ್ನು ಮುಚ್ಚಲು ಅವಕಾಶ ನೀಡುವುದಿಲ್ಲ' ಎಂಬ ಭರವಸೆಯನ್ನು ಮುಖ್ಯಮಂತ್ರಿ ವಿಧಾನಸಭೆಯಲ್ಲಿ ನೀಡಿರುವುದನ್ನು ಇಲ್ಲಿ ಸ್ಮರಿಸಬಹುದು. ನಷ್ಟದ ನೆಪವೊಡ್ಡಿ ಕಾರ್ಖಾನೆಯನ್ನು ಮುಚ್ಚುವುದಾಗಿ ಹೇಳಿರುವುದು ಕಾರ್ಮಿಕ ವಲಯದಲ್ಲಿ ಅಭದ್ರತೆಯನ್ನು ಸೃಷ್ಟಿಸಿದೆ. ನಷ್ಟದ ನೆಪದಲ್ಲಿ ಈಗಾಗಲೇ ರಾಜ್ಯದ ಹಲವಾರು ಪ್ರತಿಷ್ಠಿತ ಕಾರ್ಖಾನೆಗಳು ಮುಚ್ಚಿವೆ. ಕೇಂದ್ರ ಸರ್ಕಾರವು ಪ್ರತಿಷ್ಠಿತ ಕಾರ್ಖಾನೆಗಳನ್ನು ಮುಚ್ಚುವ ಬದಲು, ಅವುಗಳ ಪುನಶ್ಚೇತನಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಲಕ್ಷಾಂತರ ಕೋಟಿ ರೂಪಾಯಿ ಬಂಡವಾಳ ರಾಜ್ಯಕ್ಕೆ ಹರಿದುಬರುತ್ತಿರುವಾಗ, ಸರ್ಕಾರಿ ಕಾರ್ಖಾನೆಗಳ ಪುನಶ್ಚೇತನ ಏಕೆ ಸಾಧ್ಯವಿಲ್ಲ? ಈ ವಿಚಾರವನ್ನು ರಾಜ್ಯ ಸರ್ಕಾರ ಪ್ರತಿಷ್ಠೆಯ ಪ್ರಶ್ನೆಯನ್ನಾಗಿಸಿಕೊಂಡು, ಈ ಹೆಸರಾಂತ ಕಾರ್ಖಾನೆಯನ್ನು ಉಳಿಸಿಕೊಳ್ಳಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಲಿ.

ಕೆ.ವಿ.ವಾಸು, ಮೈಸೂರು

ನಾವು ಏನಾಗಿದ್ದೇವೆ ಅನ್ನುವುದಕ್ಕಿಂತ...

ಭಾರತೀಯ ಆಡಳಿತ ಸೇವೆಯಲ್ಲಿರುವ ಮತ್ತು ಭಾರತೀಯ ಪೊಲೀಸ್ ಸೇವೆಯಲ್ಲಿರುವ ಇಬ್ಬರು ಮಹಿಳಾ ಅಧಿಕಾರಿಗಳ ಕಿತ್ತಾಟ ಬೀದಿಗೆ ಬಿದ್ದಿದೆ. ಸಮಾಜದಲ್ಲಿ ಹೆಚ್ಚಿನ ಅಧಿಕಾರ ಮತ್ತು ಹೆಚ್ಚಿನ ಗೌರವಕ್ಕೆ ಪಾತ್ರರಾದವರು ಈ ರೀತಿ ಕಿತ್ತಾಡುವುದನ್ನು ನೋಡಿದರೆ, ಅವರ ಹುದ್ದೆಗೆ ಮತ್ತು ಅವರ ಶಿಕ್ಷಣಕ್ಕೆ ಅರ್ಥವಿಲ್ಲ ಎನಿಸುತ್ತದೆ.

ಈ ಸಂದರ್ಭದಲ್ಲಿ, ಭಾರತದ ಮುಖ್ಯ ಚುನಾವಣಾಧಿಕಾರಿಯಾಗಿದ್ದ ಟಿ.ಎನ್.ಶೇಷನ್ ಅವರ ಮಾತು ಜ್ಞಾಪಕಕ್ಕೆ ಬರುತ್ತದೆ. ಶೇಷನ್ ಅವರು ಕುಟುಂಬ ಸಮೇತ ಉತ್ತರಪ್ರದೇಶದಲ್ಲಿ ಪ್ರವಾಸ ಮಾಡುತ್ತಿರುತ್ತಾರೆ. ಕಾರಿನಲ್ಲಿ ಹೋಗುತ್ತಿರುವಾಗ, ಒಂದು ಮಾವಿನ ಮರದಲ್ಲಿನ ಗುಬ್ಬಚ್ಚಿ ಗೂಡು ಶೇಷನ್ ಅವರ ಪತ್ನಿಯ ಕಣ್ಣಿಗೆ ಬೀಳುತ್ತದೆ. ಅದನ್ನು ಕಿತ್ತು ತರುವಂತೆ ಅವರ ಜೊತೆಯಲ್ಲಿದ್ದ ಕಾನ್‌ಸ್ಟೆಬಲ್‌ಗೆ ಹೇಳುತ್ತಾರೆ. ಕಾನ್‌ಸ್ಟೆಬಲ್ ಮರದ ಹತ್ತಿರ ಹೋಗಿ, ಅಲ್ಲಿಯೇ ದನ ಕಾಯುತ್ತಿದ್ದ ಹುಡುಗನನ್ನು ಗುಬ್ಬಚ್ಚಿಗೂಡು ಕಿತ್ತುಕೊಡುವಂತೆ ಕೇಳುತ್ತಾನೆ.

ಆ ಹುಡುಗ ಒಪ್ಪುವುದಿಲ್ಲ. ಕೇಳಿದಷ್ಟು ಹಣ ಕೊಡುವುದಾಗಿ ಹೇಳುತ್ತಾನೆ. ಅದಕ್ಕೂ ಆ ಹುಡುಗ ಒಪ್ಪುವುದಿಲ್ಲ. ಕಾರಿನಲ್ಲಿ ಕುಳಿತಿರುವವರು ಭಾರತದ ದೊಡ್ಡ ಅಧಿಕಾರಿಗಳು, ಆ ರೀತಿ ಆಗುವುದಿಲ್ಲ ಎಂದು ಹೇಳಬಾರದು ಎಂದು ಕಾನ್‌ಸ್ಟೆಬಲ್ ಹೇಳಿದಾಗ, ಹುಡುಗ ಹೇಳುತ್ತಾನೆ, 'ಗೂಡಿನಲ್ಲಿ ಮರಿಗಳಿವೆ. ಅವುಗಳಿಗೆ ಆಹಾರ ತರಲು ಅಮ್ಮ ಗುಬ್ಬಿ ಹೊರಗೆ ಹೋಗಿದೆ. ಅದು ವಾಪಸ್ ಬಂದಾಗ, ಗೂಡು ಮತ್ತು ಮರಿಗಳು ಇಲ್ಲದ್ದನ್ನು ತಿಳಿದು ಅಳುತ್ತದೆ. ಅದನ್ನು ನೋಡಿ ಸಹಿಸುವ ಶಕ್ತಿ ನನಗಿಲ್ಲ'. ಹುಡುಗನ ಈ ಮಾತನ್ನು ಕೇಳಿಸಿಕೊಂಡ ಶೇಷನ್ ಅವರಿಗೆ ಆಘಾತವಾಗುತ್ತದೆ. ಅವರು ಹೇಳುತ್ತಾರೆ, 'ನನ್ನ ಐಎಎಸ್ ಪದವಿ, ನಾನು ಅಲಂಕರಿಸಿರುವ ಹುದ್ದೆ ಎಲ್ಲವೂ ಆ ಹುಡುಗನ ಮುಂದೆ ಆವಿಯಾಯಿತು. ಆ ಹುಡುಗನ ಎದುರಲ್ಲಿ ನಾನು ಕುಬ್ಜನಾಗಿ ಹೋದೆ'. ಅದರಿಂದ, ನಾವು ಏನಾಗಿದ್ದೇವೆ ಅನ್ನುವುದಕ್ಕಿಂತ, ನಾವು ಹೇಗೆ ನಡೆದುಕೊಳ್ಳುತ್ತಿದ್ದೇವೆ ಎಂಬುದು ಮುಖ್ಯವಾಗುತ್ತದೆ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಕನಸಿನ ಮಾತು!

ರಾಜ್ಯದಲ್ಲಿ ಚುನಾವಣಾ ಪ್ರಚಾರ ಬಿರುಸುಗೊಳ್ಳುತ್ತಿದೆ. ಮತದಾರರ ಮನವೊಲಿಕೆಗೆ ಕಸರತ್ತು ಚುರುಕುಗೊಂಡಿದೆ. ಇದು ಮಾಮೂಲಿ ಎಂದುಕೊಂಡರೂ ಈ ಬಾರಿಯ ಪ್ರಚಾರದ ವೈಖರಿ ಆತಂಕ ಮೂಡಿಸುವಂತಿದೆ. ಸೀರೆ, ಬಾಗಿನ, ತುಂಡು- ಗುಂಡಿನ ಊಟ ಅಂತ ದಿನಬೆಳಗಾದರೆ ಯಾವುದೋ ಒಂದು ಆಮಿಷ ಮತದಾರರನ್ನು ಎದುರುಗೊಳ್ಳುತ್ತಿದೆ. ಇಷ್ಟೆಲ್ಲ ವೆಚ್ಚ ಮಾಡುವ ಅಭ್ಯರ್ಥಿಗಳು ಗೆದ್ದ ಮೇಲೆ ಅದನ್ನು ಬಡ್ಡಿಸಹಿತ ವಸೂಲಿ ಮಾಡದೇ ಬಿಡುವರೆ? ಇನ್ನುಮುಂದೆ ಜನಸಾಮಾನ್ಯರು ಚುನಾವಣೆಗೆ ನಿಂತು ಗೆಲ್ಲುವುದು ಹಾಗೂ ಚುನಾವಣೆಗಳನ್ನು ನೀತಿಯುತವಾಗಿ ನಡೆಸುವುದು ಕನಸಿನ ಮಾತಾಗಬಹುದೇನೋ?! **ಚಾವಲ್ಮನೆ ಸುರೇಶ್ ನಾಯಕ್,** ಹಾಲ್ಮುತ್ತೂರ್, ಕೊಪ್ಪ

ದಿನದ ಟ್ವೀಟ್

ಕನ್ನಡದ ಕೆಲಸಗಳು



ಕನ್ನಡದ ನೆಲೆ ಗಟ್ಟಿಯಾದರೆ ಕನ್ನಡವನ್ನೇ ನೆಚ್ಚಿಕೊಂಡಿರುವ ಜನರ ಬದುಕಿನ ನೆಲೆ ಗಟ್ಟಿಯಾಗುತ್ತದೆ. ಕನ್ನಡ ಹಾಗೂ ಇಂಗ್ಲಿಷ್ ಪ್ರಪಂಚಗಳೆರಡರಲ್ಲೂ ಒಡನಾಡುವ ಆರ್ಥಿಕ, ಸಾಮಾಜಿಕ ಅವಕಾಶ, ಪ್ರಿವಿಲೇಜಸ್ ಇರುವ ಜನರಿಗಿಂತ ಇಲ್ಲದ ಜನರ ಏಳಿಗೆಗೇ ಕನ್ನಡ ಗಟ್ಟಿಯಾಗುವುದು ಹೆಚ್ಚು ಮುಖ್ಯ. ಇದು ಅರ್ಥ ಆದರೆ ಕನ್ನಡದ ಕೆಲಸಗಳ ಬಗ್ಗೆ ಸ್ಪಷ್ಟತೆ ಸಿಗುತ್ತದೆ.

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ವ್ಯಕ್ತಿಯೊಬ್ಬ ತನ್ನ ಮನೆಯ ಮೌಲ್ಯ ಎಷ್ಟು ಎಂಬುದನ್ನು ಪ್ರತಿದಿನವೂ ಪರಿಶೀಲಿಸುತ್ತಿದ್ದಾನೆ ಎಂದಾದರೆ, ನಾವು ಆತನ ಮಾನಸಿಕ ಆರೋಗ್ಯದ ಬಗ್ಗೆ ಅನುಮಾನಪಡಬಹುದು. ಆದರೆ, ಷೇರುಗಳ ಮೌಲ್ಯದ ವಿಚಾರದಲ್ಲಿ ನಾವು ಪ್ರತಿದಿನವೂ ಮಾಡುವುದು ಇದೇ ಕೆಲಸವನ್ನು!

ಡಿ. ಮುತ್ತುಕೃಷ್ಣನ್, ಹೂಡಿಕೆದಾರ

25 ವರ್ಷಗಳ ಹಿಂದೆ

ಶನಿವಾರ, 21-2-1998

- **ಪಟ್ನಾ ಕ್ಷೇತ್ರದ ಚುನಾವಣೆ ರದ್ದು: ಪರಿಶೀಲನೆಯಲ್ಲಿ ಮಾಧೇಪುರ**

ನವದೆಹಲಿ, ಫೆ. 20 (ಯುಎನ್‌ಐ, ಪಿಟಿಐ)– ಕಳೆದ 16ರಂದು ನಡೆದ ಪಟ್ನಾ ಲೋಕಸಭಾ ಕ್ಷೇತ್ರದ ಚುನಾವಣೆಯನ್ನು ಇಂದು ಅನೂರ್ಜಿತಗೊಳಿಸಲಾಗಿದೆ. ಅಲ್ಲಿ ಹೊಸದಾಗಿ ಚುನಾವಣೆ ನಡೆಸಲು ಚುನಾವಣಾ ಆಯೋಗ ತೀರ್ಮಾನಿಸಿದ್ದು, ಮತದಾನದ ದಿನಾಂಕವನ್ನು ಆನಂತರ ನಿರ್ಧರಿಸಲಿದೆ.

ಪಟ್ನಾ ಲೋಕಸಭಾ ಕ್ಷೇತ್ರದಲ್ಲಿ ವ್ಯಾಪಕ ಅಕ್ರಮಗಳು ನಡೆದಿವೆ ಎಂಬ ದೂರಿನ ಹಿನ್ನೆಲೆಯಲ್ಲಿ ಆಯೋಗ ಈ ನಿರ್ಧಾರ ಕೈಗೊಂಡಿದೆ. ಬಿಹಾರದ ಮತ್ತೊಂದು ಕ್ಷೇತ್ರವಾದ ಮಾಧೇಪುರ ಹಾಗೂ ಉತ್ತರ ಪ್ರದೇಶದ ಬಾಗ್‌ಪತ್ ಕ್ಷೇತ್ರದ ಚುನಾವಣೆ ಅಕ್ರಮಗಳನ್ನು ಕುರಿತ ವಿಚಾರಣೆ ಮೇಲಿನ ನಿರ್ಧಾರವನ್ನು ಆನಂತರ ಕೈಗೊಳ್ಳಲಾಗುವುದು ಎಂದು ಆಯೋಗ ಪ್ರಕಟಿಸಿದೆ.

- **ಇರಾಕ್‌ನತ್ತ ಯುದ್ಧ ವಿಮಾನ: ನೆಲೆ ನೀಡಲು ಭಾರತ ನಕಾರ**

ಕಲಬುರಗಿ, ಫೆ. 20–ಇರಾಕ್ ಮೇಲೆ ದಾಳಿ ಮಾಡುವ ಸಲುವಾಗಿ ಭಾರತದ ವಾಯುಪ್ರದೇಶ ಬಳಸಿಕೊಳ್ಳಲು ಪ್ರಬಲ ರಾಷ್ಟ್ರವೊಂದಕ್ಕೆ ತಾವು ಅನುಮತಿ ನಿರಾಕರಿಸಿದುದಾಗಿ ಪ್ರಧಾನಿ ಐ.ಕೆ.ಗುಜ್ರಾಲ್ ಇಂದು ಇಲ್ಲಿ ಪ್ರಕಟಿಸಿದರು.

'ಆ ರಾಷ್ಟ್ರ ನಿನ್ನೆ ನನ್ನನ್ನು ಸಂಪರ್ಕಿಸಿ, ಯುದ್ಧ ವಿಮಾನಗಳು ನಮ್ಮ ದೇಶದ ಮೇಲೆ ಹಾರಿಹೋಗಲು ಅನುಮತಿ ಕೇಳಿದ್ದನ್ನು ನಾನು ನಿರಾಕರಿಸಿದ್ದೇನೆ. ಏಕೆಂದರೆ ನಾವು ಇಡೀ ವಿಶ್ವದಲ್ಲಿ ಶಾಂತಿ, ಪ್ರೇಮ ಹಾಗೂ ನೆಮ್ಮದಿಯನ್ನು ಬಯಸುತ್ತೇವೆ' ಎಂದರು.

50 ವರ್ಷಗಳ ಹಿಂದೆ

ಬುಧವಾರ, 21-2-1973

- **ಭಾರತ ರಾಯಭಾರ ಕಚೇರಿ ಮೇಲೆ ಹಲ್ಲೆ ಮಾಡಿದ ಇಬ್ಬರು ಗುಂಡಿಗೆ ಬಲಿ**

ಲಂಡನ್, ಫೆ. 20– ಪಿಸ್ತೂಲು, ಕತ್ತಿ, ಚೂರಿಗಳನ್ನು ಹೊಂದಿದ್ದ, ಮುಖವಾಡ ಧರಿಸಿದ್ದ ಮೂವರು ಲಂಡನ್ನಿನಲ್ಲಿರುವ ಭಾರತೀಯ ಹೈಕಮೀಷನರ್ ಕಚೇರಿಗೆ ನುಗ್ಗಿ ದಾಂದಲೆ ಮಾಡಿದರು. ಅವರಲ್ಲಿ ಇಬ್ಬರು ಪೊಲೀಸರ ಗುಂಡಿಗೆ ಬಲಿಯಾದರು. ಇನ್ನೊಬ್ಬ ಸಿಕ್ಕಿಬಿದ್ದ.

'ನಮ್ಮ ಸೈನಿಕರನ್ನು ಬಿಡುಗಡೆ ಮಾಡಿ' ಎಂದು ಕೂಗುತ್ತಾ ರಾಯಭಾರ ಕಚೇರಿಗೆ ನುಗ್ಗಿದ ಗಲಭೆಕೋರರು, ಸಿಬ್ಬಂದಿ ವರ್ಗದವರನ್ನು ಒತ್ತೆಯಾಳುಗಳನ್ನಾಗಿ ಹತೋಟಿಗೆ ತೆಗೆದುಕೊಳ್ಳಲು ಯತ್ನಿಸಿದರು. ಅವರು ಏಷ್ಯನ್ನರೆಂದು ಗೊತ್ತಾಗಿದೆ. ಯಾವ ದೇಶದವರೆಂಬುದು ಪತ್ತೆಯಾಗಿಲ್ಲ.

- **ದಕ್ಷಿಣ ಮೈಸೂರಿನಲ್ಲೂ ಅಲ್ಲಲ್ಲಿ ಬರಗಾಲದ ಛಾಯೆ, ಕುಡಿಯುವ ನೀರಿಗೂ ಕಷ್ಟ**


ಬೆಂಗಳೂರು, ಫೆ. 20– ಉತ್ತರದ ಜಿಲ್ಲೆಗಳನ್ನು ಕಾಡುತ್ತಿರುವ ಬರಗಾಲದ ಛಾಯೆ ದಕ್ಷಿಣ ಮೈಸೂರಿನಲ್ಲೂ ಅಲ್ಲಲ್ಲಿ ಕಂಡುಬಂದು ಕುಡಿಯುವ ನೀರಿಗೂ ಕಷ್ಟವಾಗುತ್ತಿದೆಯೆಂದು ಇಂದು ವಿಧಾನಸಭೆಯಲ್ಲಿ ಅನೇಕ ಸದಸ್ಯರು ಕಳವಳ ವ್ಯಕ್ತಪಡಿಸಿದರು.

ರಾಜ್ಯಪಾಲರಿಗೆ ವಂದನೆ ಅರ್ಪಿಸುವ ನಿರ್ಣಯದ ಮೇಲೆ ಮಾತನಾಡಿದ ಸದಸ್ಯರು, ಕೋಲಾರ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಹಲವು ಭಾಗಗಳು ಕ್ಷಾಮ ಎದುರಿಸುತ್ತಿದ್ದು, ಪರಿಹಾರ ಕಾರ್ಯ ಪ್ರಾರಂಭಿಸಬೇಕೆಂದು ಸರ್ಕಾರವನ್ನು ಕೋರಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹನ್ನೆರಡು ವರ್ಷಗಳಲ್ಲಿ ಒಟ್ಟು 16.63 ಲಕ್ಷ ಭಾರತೀಯರು ಭಾರತದ ಪೌರತ್ವ ತೊರೆದಿದ್ದಾರೆ. 2022ರಲ್ಲೇ 2.25 ಲಕ್ಷ ಭಾರತೀಯರು ದೇಶದ ಪೌರತ್ವ ತೊರೆದು, ಬೇರೆ ದೇಶದ ಪೌರತ್ವ ಪಡೆದಿದ್ದಾರೆ. ಹೀಗೆ ಪ್ರತಿ ವರ್ಷ ಭಾರತದ ಪೌರತ್ವ ತೊರೆಯುವವರ ಸಂಖ್ಯೆ ಏರಿಕೆಯಾಗುತ್ತಲೇ ಇದೆ ಎಂದು ಕೇಂದ್ರ ಸರ್ಕಾರದ ದತ್ತಾಂಶಗಳು ಹೇಳುತ್ತಿವೆ. ಈ ಹನ್ನೆರಡು ವರ್ಷಗಳಲ್ಲಿ ಪ್ರತಿ ವರ್ಷ 1.2 ಲಕ್ಷದಿಂದ 1.4 ಲಕ್ಷದಷ್ಟು ಜನರು ದೇಶದ ಪೌರತ್ವ ತೊರೆದಿದ್ದರು. ಆದರೆ, 2022ರಲ್ಲಿ ಈ ಸಂಖ್ಯೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ

ಏರುಗತಿಯಲ್ಲಿ ಪೌರತ್ವ ತೊರೆಯುವಿಕೆ



ಪ್ರಜಾವಾಣಿ ವಾರ್ತೆ

ವಿದೇಶಗಳಲ್ಲಿ ಕೆಲಸಕ್ಕೆ ಹೋದ ಭಾರತೀಯರು, ಅಲ್ಲಿನ ನೌಕರಿ ಗಟ್ಟಿಯಾದ ನಂತರ ಆಯಾ ದೇಶದ ಪೌರತ್ವ ಪಡೆಯುತ್ತಾರೆ. ಅಂತಹವರೊಂದಿಗೆ ಅವರ ಕುಟುಂಬದವರೂ ಬೇರೆ ದೇಶಗಳ ಪೌರತ್ವ ಪಡೆಯುವುದು ವಾಡಿಕೆ. ಹೀಗೆ ಬೇರೆ ದೇಶಗಳ ಪೌರತ್ವ ಪಡೆಯುವವರು ಭಾರತದ ಪೌರತ್ವ ತೊರೆಯಲೇಬೇಕಾಗುತ್ತದೆ. ಏಕೆಂದರೆ ಭಾರತದಲ್ಲಿ ದ್ವಿಪೌರತ್ವಕ್ಕೆ ಅವಕಾಶವಿಲ್ಲ. ಭಾರತೀಯರು ಬೇರೆ ದೇಶಗಳ ಪೌರತ್ವ ಪಡೆದ ತಕ್ಷಣ, ಭಾರತದ ಪಾಸ್‌ಪೋರ್ಟ್ ಅನ್ನು ಹಿಂದಿರುಗಿಸಬೇಕು. ಹೀಗಾಗಿ ಕೆಲಸ ಮತ್ತು ಉದ್ದಿಮೆಯ ಕಾರಣಕ್ಕೆ ವಿದೇಶಗಳಲ್ಲಿ ನೆಲೆಸಿದ ಭಾರತೀಯರು ಅನಿವಾರ್ಯವಾಗಿ ಭಾರತದ ಪೌರತ್ವ ತೊರೆಯುತ್ತಿದ್ದಾರೆ.

2011ರಲ್ಲಿ ಒಟ್ಟು 1.22 ಲಕ್ಷ ಭಾರತೀಯರು ಭಾರತದ ಪೌರತ್ವ ತೊರೆದಿದ್ದರು. ನಂತರದ ವರ್ಷಗಳಲ್ಲಿ ಈ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಏರಿಕೆಯಾಗಿದೆ. ಪ್ರತಿ ವರ್ಷ ಏರಿಕೆಯ ಸಂಖ್ಯೆ 8,000ದಿಂದ 12 ಸಾವಿರದಷ್ಟು ಇತ್ತು. 2021ರವರೆಗೂ ಏರಿಕೆ ಪ್ರಮಾಣ ಇದೇ ರೀತಿ ಇತ್ತು. 2021ರಲ್ಲಿ 1.63 ಲಕ್ಷ ಜನರು ಪೌರತ್ವ ತೊರೆದಿದ್ದರು. ಆದರೆ, 2022ರಲ್ಲಿ ಪೌರತ್ವ ತೊರೆದವರ ಸಂಖ್ಯೆ 2.25 ಲಕ್ಷಕ್ಕೆ ಏರಿಕೆಯಾಗಿದೆ. ಈ ಹನ್ನೆರಡು ವರ್ಷಗಳ ಪೈಕಿ 2022ರಲ್ಲೇ ಅತಿಹೆಚ್ಚು ಜನರು ಭಾರತದ ಪೌರತ್ವ ತೊರೆದಿದ್ದಾರೆ.



ಹೀಗೆ ಪೌರತ್ವ ತೊರೆದವರ ಸಂಖ್ಯೆಯಲ್ಲಿ ದಿಢೀರ್ ಆಗಿರುವ ಭಾರಿ ಏರಿಕೆಯ ಕಾರಣ ಏನು ಎಂಬುದನ್ನು ಸರ್ಕಾರ ಹೇಳಿಲ್ಲ. ಈ ಬಗ್ಗೆ ಯಾವುದೇ ಅಧ್ಯಯನ ಸಂಸ್ಥೆಯೂ ಅಧ್ಯಯನ ನಡೆಸಿಲ್ಲ. ಹೀಗಾಗಿ ಭಾರತೀಯರು ಹೆಚ್ಚಿನ ಸಂಖ್ಯೆಯಲ್ಲಿ ಪೌರತ್ವ ತೊರೆದದ್ದು ಏಕೆ ಎಂಬುದರ ಮಾಹಿತಿ ಲಭ್ಯವಿಲ್ಲ. ನೌಕರಿ ಒಂದೇ ಕಾರಣವಲ್ಲದೆ, ಹೂಡಿಕೆ ಕಾರಣಕ್ಕೆ ಸಿರಿವಂತರೂ ದೇಶ ತೊರೆಯುತ್ತಿದ್ದಾರೆ ಎಂದು ದತ್ತಾಂಶಗಳು ಹೇಳುತ್ತವೆ.

ಭಾರತೀಯರು ಹೀಗೆ ಪೌರತ್ವ ತೊರೆಯುವುದು, ಅವರಿಂದ ಭಾರತಕ್ಕೆ ಬರುತ್ತಿರುವ ಆದಾಯ ಖೋತಾ ಆಗುವುದನ್ನು ಸೂಚಿಸುತ್ತದೆ. ಇಂತಹ ವಲಸೆಯು ಆರ್ಥಿಕ ಕಾರಣಗಳಿಗೇ ಆಗುವ ಕಾರಣಕ್ಕೆ ದೇಶದ ಆರ್ಥಿಕ ಸ್ಥಿತಿಯನ್ನು ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ, ಸ್ವಲ್ಪ ಮಟ್ಟಿಗಾದರೂ ಇದು ಬಾಧಿಸುತ್ತದೆ. ಇದು ದೇಶದ ವಿದೇಶಿ ವಿನಿಮಯದ ಮೊತ್ತ ಕುಸಿತಕ್ಕೆ ಕಾರಣವಾಗುತ್ತದೆ. ಭಾರತದಲ್ಲಿನ ಸಂಪತ್ತಿನ ತೆರಿಗೆ ಮತ್ತು ಆದಾಯ ತೆರಿಗೆಯಿಂದ ತಪ್ಪಿಸಿಕೊಳ್ಳಲು ಸಿರಿವಂತರು, ಇಲ್ಲಿನ ಪೌರತ್ವ ತೊರೆಯುವುದು ದೇಶದ ತೆರಿಗೆ ಆದಾಯವನ್ನು ನೇರವಾಗಿ ಬಾಧಿಸುತ್ತದೆ. ಈ ಜನರಿಂದ ಬರುತ್ತಿದ್ದ ಸಂಪತ್ತಿನ ತೆರಿಗೆ, ಹೂಡಿಕೆ ಮೇಲಿನ ತೆರಿಗೆ ಮತ್ತು ಆದಾಯ ತೆರಿಗೆ ಖೋತಾ ಆಗುತ್ತದೆ. ಒಟ್ಟಾರೆಯಾಗಿ ದೇಶದ ಆರ್ಥಿಕ ಬೆಳವಣಿಗೆಯನ್ನು ಇದು ತುಸು ನಿಧಾನಗೊಳಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ.

2021: ಪೌರತ್ವ ತ್ಯಜಿಸಿ ಎಲ್ಲಿಗೆ ಹೋದರು?

ಭಾರತದ ಪೌರತ್ವವನ್ನು ತೊರೆದು ವಿದೇಶಗಳಲ್ಲಿ ನೆಲೆಸುವವರ ಸಂಖ್ಯೆ ಹಾಗೂ ಅವರು ವಾಸಿಸಲು ಇಚ್ಛಿಸುವ ದೇಶಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ವಿದೇಶಾಂಗ ಇಲಾಖೆಯ ದತ್ತಾಂಶಗಳು ತಿಳಿಸುತ್ತವೆ. ಕೋವಿಡ್ ಬಾಧಿಸಿದ್ದ 2020ರ ಒಂದು ವರ್ಷದಲ್ಲಿ ಈ ಪ್ರಮಾಣ ಇಳಿಕೆಯಾಗಿದ್ದನ್ನು ಹೊರತುಪಡಿಸಿದರೆ, ಹೆಚ್ಚಳ ಪ್ರವೃತ್ತಿ ಮುಂದುವರಿದಿದೆ.


ಪೌರತ್ವ ತೊರೆದು ಹೋಗುವ ಭಾರತೀಯರ ನೆಚ್ಚಿನ ದೇಶ ಅಮೆರಿಕ. 2021ರಲ್ಲಿ ದಾಖಲೆಯ 55,559 ಭಾರತೀಯರು ಅಮೆರಿಕಕ್ಕೆ ಕಾಯಂ ಆಗಿ ಸ್ಥಳಾಂತರಗೊಂಡಿದ್ದಾರೆ.

ಅಮೆರಿಕ ಹೊರತುಪಡಿಸಿದರೆ, ಕೆನಡಾ ಹಾಗೂ ಆಸ್ಟ್ರೇಲಿಯಾ ದೇಶಗಳೂ ಭಾರತೀಯರ ನೆಚ್ಚಿನ ತಾಣಗಳಾಗಿ ಮುಂಚೂಣಿಯಲ್ಲಿ ಗುರುತಿಸಿಕೊಂಡಿವೆ. 2021ರಲ್ಲಿ 14,416 ಭಾರತೀಯರು ಪೌರತ್ವವನ್ನು ತ್ಯಜಿಸಿ ಆಸ್ಟ್ರೇಲಿಯಾ ವಾಸಿಗಳಾಗಿದ್ದಾರೆ. 11,869 ಭಾರತೀಯರು ಕೆನಡಾದಲ್ಲಿ ನೆಲೆಯೂರಿದ್ದಾರೆ. ಇನ್ನುಳಿದಂತೆ ಭಾರತೀಯರ ನೆಚ್ಚಿನ ಆಯ್ಕೆ ಐರೋಪ್ಯ ದೇಶಗಳು. ಬ್ರಿಟನ್ ಮತ್ತು ಇಟಲಿಯ ಪೌರತ್ವ ಪಡೆದ ಭಾರತೀಯರ ಸಂಖ್ಯೆ ಕ್ರಮವಾಗಿ 9,299 ಮತ್ತು 4,871.

2021ರವರೆಗೆ 106 ದೇಶಗಳಿಗೆ ಭಾರತೀಯರು ವಲಸೆ ಹೋಗಿದ್ದರು. ಆದರೆ 2021ರಲ್ಲಿ, ಭವಿಷ್ಯದ ಕಾಯಂ ನೆಲೆಯನ್ನಾಗಿ ಆಯ್ಕೆ ಮಾಡಿಕೊಂಡ ದೇಶಗಳ ಸಂಖ್ಯೆ 135ಕ್ಕೆ ವಿಸ್ತರಿಸಿದೆ. ಸಾಂಪ್ರದಾಯಿಕವಾಗಿ ವಲಸೆ ಹೋಗುತ್ತಿದ್ದ ದೇಶಗಳ ಜೊತೆಗೆ ಇನ್ನಷ್ಟು ದೇಶಗಳು ಪ್ರತೀ ವರ್ಷ ಸೇರ್ಪಡೆಯಾಗುತ್ತಿವೆ.

ಈ ಕಾರಣಕ್ಕೆ, ಅಮೆರಿಕ ಒಳಗೊಂಡಂತೆ ವಾಡಿಕೆಯ ಹಲವು ದೇಶಗಳಿಗೆ ಹೋಗುವ ಭಾರತೀಯರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಉದಾಹರಣೆಗೆ, 2017ರಲ್ಲಿ 19,335 ಜನ ಭಾರತದ ಪೌರತ್ವ ತ್ಯಜಿಸಿ ಬ್ರಿಟನ್‌ಗೆ ಹೋಗಿದ್ದರು. ಇವರ ಸಂಖ್ಯೆ 2021ರಲ್ಲಿ 10 ಸಾವಿರದಷ್ಟು ಕಡಿಮೆಯಾಗಿದೆ. ಕೆನಡಾ, ಇಟಲಿ ಮೊದಲಾದ ದೇಶಗಳ ವಿಚಾರದಲ್ಲೂ ಇದೇ ಪ್ರವೃತ್ತಿ ಕಂಡುಬಂದಿದೆ.

ಆಧಾರ: ರಾಜ್ಯಸಭೆಯಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವಾಲಯ ನೀಡಿದ ಉತ್ತರ, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆಗಳು, ಹೆನ್ಲಿ ಅಂಡ್ ಪಾರ್ಟ್‌ನರ್‌ನ 'ಗ್ಲೋಬಲ್ ಇನ್ವೆಸ್ಟ್‌ಮೆಂಟ್ ಮೈಗ್ರೇಷನ್–2022' ವರದಿ



ಸಿರಿವಂತರ ವಲಸೆ

ಭಾರತದ ಪೌರತ್ವ ತೊರೆಯುತ್ತಿರುವವರಲ್ಲಿ ಸಿರಿವಂತರ ಸಂಖ್ಯೆಯೂ ದೊಡ್ಡದಿದೆ ಎನ್ನುತ್ತದೆ ಹೆನ್ಲಿ ಅಂಡ್ ಪಾರ್ಟ್‌ನರ್‌ನ ಗ್ಲೋಬಲ್ ಇನ್ವೆಸ್ಟ್‌ಮೆಂಟ್ ಮೈಗ್ರೇಷನ್ ವರದಿ. ಜಾಗತಿಕ ಮಾನದಂಡಗಳ ಪ್ರಕಾರ ಕನಿಷ್ಠ 10 ಲಕ್ಷ ಅಮೆರಿಕ ಡಾಲರ್ (ಅಂದಾಜು ₹8.20 ಕೋಟಿ) ಮೌಲ್ಯದ ಆಸ್ತಿ ಹೊಂದಿರುವವರನ್ನು ಸಿರಿವಂತರು ಎಂದು ಕರೆಯಲಾಗುತ್ತದೆ. ಇವರನ್ನು ಹೈವೆಲ್ತ್ ಇಂಡಿವಿಜುಯಲ್ಸ್ ಎಂದು ಗುರುತಿಸಲಾಗುತ್ತದೆ. ಈ ವರದಿಯ ಪ್ರಕಾರ 2022ರಲ್ಲಿ ಅಂದಾಜು 8,000 ಸಿರಿವಂತರು ಭಾರತದ ಪೌರತ್ವ ತೊರೆದಿದ್ದಾರೆ. ಈ ಸಿರಿವಂತರು ವಿದೇಶಗಳಲ್ಲಿ ಹೂಡಿಕೆ ಮಾಡುವ ಮೂಲಕ ಉದ್ದಿಮೆ ವಿಸ್ತರಿಸಲು ಮತ್ತು ತೆರಿಗೆ ವಿನಾಯಿತಿ ಪಡೆಯಲು ಭಾರತದ ಪೌರತ್ವ ತೊರೆದಿದ್ದಾರೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

2021ರಲ್ಲಿ ಚೀನಾದ ಹತ್ತು ಸಾವಿರಕ್ಕೂ ಹೆಚ್ಚು ಜನರು ಅಲ್ಲಿನ ಪೌರತ್ವ ತೊರೆದು, ವಿದೇಶಗಳ ಪೌರತ್ವ ಪಡೆದಿದ್ದರು. ಆ ವರ್ಷದಲ್ಲಿ ಭಾರತದ ಏಳು ಸಾವಿರಕ್ಕೂ ಹೆಚ್ಚು ಮಂದಿ ಸಿರಿವಂತರು ಭಾರತದ ಪೌರತ್ವ ತೊರೆದಿದ್ದರು. 2021ರಲ್ಲಿ ಅತಿ ಹೆಚ್ಚು ಸಿರಿವಂತರು ಹೊರಹೋದ ದೇಶಗಳಲ್ಲಿ ಚೀನಾ ಮೊದಲ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿತ್ತು. ರಷ್ಯಾ (5,800) ಮೂರನೇ ಸ್ಥಾನದಲ್ಲಿತ್ತು. ಆದರೆ, ಹೆನ್ಲಿ ಅಂಡ್ ಪಾರ್ಟ್‌ನರ್ ವರದಿಯ ಪ್ರಕಾರ ಅತಿಹೆಚ್ಚು ಸಿರಿವಂತರು ಹೊರಹೋದ ದೇಶಗಳಲ್ಲಿ ರಷ್ಯಾ (15,000 +) ಮೊದಲ ಸ್ಥಾನದಲ್ಲಿದೆ. ಚೀನಾ (10,000 +) ಎರಡನೇ ಸ್ಥಾನ ಮತ್ತು ಭಾರತವು (8,000 +) ಮೂರನೇ ಸ್ಥಾನಕ್ಕೆ ಬಂದಿವೆ.

ಭಾರತದ ಸಿರಿವಂತರು ಭಾರತದ ಪೌರತ್ವವನ್ನು ಏಕೆ ತೊರೆಯುತ್ತಿದ್ದಾರೆ ಎಂಬುದನ್ನು ವರದಿಯಲ್ಲಿ ವಿಶ್ಲೇಷಿಸಲಾಗಿದೆ. ವಿಶ್ವದ ಹಲವಾರು ದೇಶಗಳು ವಿದೇಶಿ ವೈಯಕ್ತಿಕ ಹೂಡಿಕೆಗೆ ಅವಕಾಶ ನೀಡುತ್ತಿವೆ. ಚೀನಾ ಮತ್ತು ಭಾರತದಲ್ಲಿ ಆರ್ಥಿಕ ಬೆಳವಣಿಗೆಯ ದರ ಇಳಿಕೆಯಾಗಿದೆ. ಹೀಗಾಗಿ ಸಿರಿವಂತರು ಹೂಡಿಕೆ ಮತ್ತು ಗಳಿಕೆಗಾಗಿ ವಿದೇಶಗಳತ್ತ ನೋಡುತ್ತಿದ್ದಾರೆ. ಭಾರತದಲ್ಲಿ ಪ್ರತಿ ವರ್ಷ ಏಳು ಸಾವಿರದಷ್ಟು ಸಿರಿವಂತರು ಪೌರತ್ವ ತೊರೆಯುತ್ತಿದ್ದರೂ, ಭಾರತಕ್ಕೆ ಇದರಿಂದ ದೊಡ್ಡ ನಷ್ಟವೇನೂ ಇಲ್ಲ. ಏಕೆಂದರೆ ಇದಕ್ಕಿಂತಲೂ ದುಪ್ಪಟ್ಟು ಸಂಖ್ಯೆಯ ಸಿರಿವಂತರು ಪ್ರತಿ ವರ್ಷ ಭಾರತದಲ್ಲಿ ಹುಟ್ಟಿಕೊಳ್ಳುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ದೇಶದಲ್ಲಿನ ಔದ್ಯಮಿಕ ವಾತಾವರಣ, ಕಾನೂನುಗಳು, ಹೂಡಿಕೆ ನಿಯಮಗಳು, ಪರಿಸರ ಸ್ಥಿತಿಗತಿಯಲ್ಲಿನ ಏರುಪೇರುಗಳು ಸಿರಿವಂತರ ವಲಸೆಯ ಚಾಲಕಶಕ್ತಿಗಳಾಗಿವೆ. ಈ ಹಿಂದಿನ ವರ್ಷಗಳಲ್ಲಿ ಸಿರಿವಂತರು ಹೂಡಿಕೆ ಕಾರಣಕ್ಕೆ ತಮ್ಮ ದೇಶಗಳ ಪೌರತ್ವ ತೊರೆಯುತ್ತಿದ್ದರು. ಆದರೆ, ಈಚಿನ ವರ್ಷಗಳಲ್ಲಿ ಅಂತಹ ಸಿರಿವಂತರು ತಮ್ಮ ಕುಟುಂಬದವರನ್ನೂ ವಿದೇಶಗಳಿಗೆ ಕರೆದೊಯ್ಯುತ್ತಿದ್ದಾರೆ. ವಿಶ್ವದ ಹಲವಾರು ದೇಶಗಳು ಹೂಡಿಕೆಗೆ ಬದಲಾಗಿ ಪೌರತ್ವ ಮತ್ತು ತೆರಿಗೆ ವಿನಾಯಿತಿಯನ್ನು ನೀಡುತ್ತಿವೆ. ತೆರಿಗೆ ವಿನಾಯಿತಿ ದೊರೆಯುವ ಒಂದೇ ಕಾರಣದಿಂದಲೂ ಸಿರಿವಂತರು, ತಮ್ಮ ದೇಶದ ಪೌರತ್ವ ತೊರೆದು ಬೇರೆ ದೇಶಗಳ ಪೌರತ್ವ ಪಡೆಯುತ್ತಿದ್ದಾರೆ. ಭಾರತದಲ್ಲಿ ಸಂಪತ್ತಿನ ಮೇಲಿನ ತೆರಿಗೆ ಮತ್ತು ಆದಾಯ ತೆರಿಗೆ ಹೆಚ್ಚಿನ ಪ್ರಮಾಣದಲ್ಲಿದೆ. ಸಿರಿವಂತರು ವಲಸೆ ಹೋಗುತ್ತಿರುವ ದೇಶಗಳಲ್ಲಿ ಈ ಎರಡೂ ರೀತಿಯ ತೆರಿಗೆ ದರ ಭಾರಿ ಕಡಿಮೆ ಇದೆ. ಹೀಗಾಗಿಯೇ ಸಿರಿವಂತರನ್ನು ಈ ದೇಶಗಳು ಆಕರ್ಷಿಸುತ್ತಿವೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಸಿನಿ ಬಿಟ್ಸ್

ಸಂಘರ್ಷದ ಕಥೆ ಹೊತ್ತ 19.20.21



ಸದ್ಯ ಚಂದನವನದಲ್ಲಿ ಮಂಸೋರೆ ನಿರ್ದೇಶನದ '19.20.21' ಸಿನಿಮಾದ ಚರ್ಚೆಯ ಬಿಸಿ ಇದೆ. ಇತ್ತೀಚೆಗೆ ಬಿಡುಗಡೆಯಾದ ಈ ಚಿತ್ರದ ಟ್ರೈಲರ್‌ಗೆ ನಟರಾದ ರಕ್ಷಿತ್ ಶೆಟ್ಟಿ, ಧನಂಜಯ ಸೇರಿದಂತೆ ಹಲವು ಕಲಾವಿದರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಮಾರ್ಚ್ 3ರಂದು ಬಿಡುಗಡೆಯಾಗಲಿರುವ ಈ ಸಿನಿಮಾ, ರಿಲೀಸ್‌ಗೆ ಮೊದಲೇ ಸದ್ದು ಮಾಡುತ್ತಿದೆ.

ವ್ಯವಸ್ಥೆಯೊಂದಿಗಿನ ಸಂಘರ್ಷಕ್ಕೆ ತುತ್ತಾದ ಹುಡುಗನ ಹೋರಾಟದ ನೈಜ ಕಥೆ ಇದಾಗಿದೆ.

ಏನಿದು ಕಥೆ?: 'ಕರಾವಳಿಯಲ್ಲಿ ಎರಡು ದಶಕಗಳ ಕಾಲ ಒಂದು ಸಮುದಾಯ ಅನುಭವಿಸಿದ ನೋವು, ಆ ನೋವಿನ ವಿರುದ್ಧ ನಡೆಸಿದ ಹೋರಾಟ ಈ ಸಿನಿಮಾಕ್ಕೆ ಸ್ಫೂರ್ತಿ. ಈ ಘಟನೆಗೆ ಸಂಬಂಧಿಸಿದಂತೆ 9 ವರ್ಷಗಳಿಂದ ಅಧ್ಯಯನ ಮಾಡಿದ್ದೇನೆ. 2021ರಲ್ಲಿ ಘಟನೆಗೆ ಸಂಬಂಧಿಸಿದ ತೀರ್ಪು ಬಂದ ಮೇಲೆ ಸಿನಿಮಾ ಮಾಡಲು ನಿರ್ಧರಿಸಿದೆವು. ನಾನು, ವೀರೇಂದ್ರ ಮಲ್ಲಣ್ಣ ಮತ್ತು ಸಂತೋಷ್ ಮೂರು ಜನ ಈ ಘಟನೆಗೆ ಸಂಬಂಧಿಸಿದ ಮಾಹಿತಿ ಕಲೆ ಹಾಕಿ ಸ್ಕ್ರಿಪ್ಟ್ ಮಾಡಿದ್ದೇವೆ' ಎಂದಿದ್ದಾರೆ ಮಂಸೋರೆ. ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಹಾಗೂ ಸಂಗೀತ ನಿರ್ದೇಶಕ ಹಂಸಲೇಖ ಇತ್ತೀಚೆಗೆ ಚಿತ್ರದ ಟ್ರೈಲರ್ ಬಿಡುಗಡೆ ಮಾಡಿದ್ದರು.

'ಸಿನಿಮಾ ಎಂಬ ಪ್ರಚಂಡ ಮಾಧ್ಯಮದ ಮೂಲಕ ಮಂಸೋರೆ ಪ್ರಜಾಪ್ರಭುತ್ವದ ರಕ್ಷಣೆಗೆ ನಿಂತಿದ್ದಾರೆ' ಎಂದರು ಹಂಸಲೇಖ.

'ಮಂಸೋರೆ ಅವರ ಬರವಣಿಗೆ, ಮಾಡುವ ಸಿನಿಮಾಗಳು ಸಮಾಜದಲ್ಲಿ ಬದಲಾವಣೆಗೆ ಸಾಕ್ಷಿಯಾಗಿವೆ. ಸಮಾಜದಲ್ಲಿ ಘಾತುಕ ಶಕ್ತಿಗಳಾಗಿ ಕೆಲಸ ಮಾಡಲು ಹೊರಟವರು ಈ ಸಿನಿಮಾ ನೋಡಿದ ಮೇಲೆ ವಾಪಾಸ್ ಸಾಮಾಜಿಕ ನ್ಯಾಯದ ಪರವಾಗಿ ಬರುದ ಸಾಧ್ಯತೆ ತುಂಬಾ ಇದೆ' ಎಂದರು ಅಕ್ಕೈ.

ದೇವರಾಜ್ ಈ ಚಿತ್ರದ ನಿರ್ಮಾಪಕರು. ಸತ್ಯ ಹೆಗಡೆ ಸಹ ನಿರ್ಮಾಪಕರು. ಚಿತ್ರದಲ್ಲಿ ರಂಗಭೂಮಿ ಕಲಾವಿದ ಶೃಂಗ ಬಿ. ಮುಖ್ಯ ಭೂಮಿಕೆಯಲ್ಲಿದ್ದಾರೆ. ಬಾಲಾಜಿ ಮನೋಹರ್, ಸಂಪತ್, ಎಂ.ಡಿ.ಪಲ್ಲವಿ, ವಿಶ್ವಕರ್ಣ, ಮಹದೇವ್ ಹಡಪದ್, ಉಗ್ರಂ ಸಂದೀಪ್ ತಾರಾಗಣದಲ್ಲಿದ್ದಾರೆ. ಶಿವು ಬಿ.ಕೆ. ಕುಮಾರ್ ಛಾಯಾಗ್ರಹಣ, ರೋಣದ ಬಕ್ಕೇಶ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ಮಂಸೋರೆ ಮತ್ತು ವೀರೇಂದ್ರ ಮಲ್ಲಣ್ಣ ಚಿತ್ರಕಥೆ, ಕಿರಣ್ ಕಾವೇರಪ್ಪ ಸಾಹಿತ್ಯ ಚಿತ್ರಕ್ಕಿದೆ.

'ಮಡಚಿಟ್ಟ ಅಧ್ಯಾಯದ ಪುನರಾರಂಭ'



2017ರಲ್ಲಿ ತೆರೆಕಂಡ 'ಮಫ್ತಿ' ಚಿತ್ರ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಅವರಿಗೆ ಹೊಸದೊಂದು ಗುರುತು ತಂದುಕೊಟ್ಟಿತ್ತು. ನರ್ತನ್ ಆ್ಯಕ್ಷನ್ ಕಟ್ ಹೇಳಿದ್ದ ಈ ಚಿತ್ರದಲ್ಲಿನ ಅವರ 'ಭೈರತಿ ರಣಗಲ್' ಪಾತ್ರ ಸಂಚಲನ ಸೃಷ್ಟಿಸಿತ್ತು. ಇದೀಗ ಈ ಪಾತ್ರದ ಹೆಸರೇ ಸಿನಿಮಾವಾಗಿ ತೆರೆಗೆ ಬರುತ್ತಿದೆ.

ಶಿವರಾಜ್‌ಕುಮಾರ್–ನರ್ತನ್ ಕಾಂಬಿನೇಷನ್‌ನಲ್ಲಿ ಶೀಘ್ರದಲ್ಲೇ 'ಭೈರತಿ ರಣಗಲ್' ಸಿನಿಮಾ ಚಿತ್ರೀಕರಣ ಆರಂಭವಾಗಲಿದೆ. ಎಲ್ಲವೂ ಅಂದುಕೊಂಡಿದ್ದಂತೆ ಆಗಿದ್ದಲ್ಲಿ ಶಿವರಾಜ್‌ಕುಮಾರ್ ಅವರ 125ನೇ ಸಿನಿಮಾ ಇದಾಗಬೇಕಿತ್ತು. ಆದರೆ ಕಾರಣಾಂತರಗಳಿಂದ ಪ್ರಾಜೆಕ್ಟ್ ಆರಂಭಗೊಂಡಿರಲಿಲ್ಲ. ಶಿವರಾತ್ರಿಯಂದು ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. 'ವೇದ' ಸಿನಿಮಾ ಮೂಲಕ ಚಿತ್ರ ನಿರ್ಮಾಣ ಕ್ಷೇತ್ರಕ್ಕೆ ಇಳಿದಿದ್ದ ಗೀತಾ ಶಿವರಾಜ್‌ಕುಮಾರ್ ತಮ್ಮ ಗೀತಾ ಪಿಕ್ಚರ್ಸ್ ಲಾಂಛನದಡಿ 'ಭೈರತಿ ರಣಗಲ್' ಸಿನಿಮಾ ನಿರ್ಮಾಣ ಮಾಡಲಿದ್ದಾರೆ. ಈ ಸಿನಿಮಾ 'ಮಫ್ತಿ' ಚಿತ್ರದ ಪ್ರೀಕ್ವೆಲ್(ಹಿಂದಿನ ಕಥೆ) ಎನ್ನುವ ಮಾಹಿತಿ ಇದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿ ಪ್ರಕಟವಾದ ಬಳಿಕ, ಉದ್ಯಮಿ ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಭಾರಿ ನಷ್ಟ ಅನುಭವಿಸಿತು. ವರದಿಯ ಕುರಿತು ದೇಶದಾದ್ಯಂತ ಪರ–ವಿರೋಧದ ಚರ್ಚೆಗಳು ನಡೆಯುತ್ತಿವೆ. ಹಿಂಡನ್‌ಬರ್ಗ್ ಸಂಸ್ಥೆಯ ವರದಿಯ ಹಿಂದೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರ ಕೈವಾಡವಿದೆ ಎಂಬ ಆರೋಪ ಇರುವ ಟ್ವೀಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಸಂಸ್ಥೆಯ ಅಧ್ಯಕ್ಷ ನಾಥನ್ ಆ್ಯಂಡರ್ಸನ್ ಅವರ ಜೊತೆ ರಾಹುಲ್ ಗಾಂಧಿ ಇರುವ ಚಿತ್ರವೊಂದು ಹರಿದಾಡುತ್ತಿದೆ. ರಾಹುಲ್ ಅವರು ಅದಾನಿ ವಿರುದ್ಧ ಷಡ್ಯಂತ್ರ ಹೂಡಿದ್ದಾರೆ ಎಂದು ಕೆಲವು ಜಾಲತಾಣ ಬಳಕೆದಾರರು ಆರೋಪಿಸಿದ್ದಾರೆ. ಆದರೆ ಇದು ಸುಳ್ಳು.



ಚಿತ್ರದಲ್ಲಿ ರಾಹುಲ್ ಗಾಂಧಿ ಅವರ ಜೊತೆ ಕಾಣಿಸಿಕೊಂಡಿರುವ ವ್ಯಕ್ತಿ ಹಿಂಡನ್‌ಬರ್ಗ್ ಸಂಸ್ಥೆಯ ಮುಖ್ಯಸ್ಥ ಅಲ್ಲ. 2018ರಲ್ಲಿ ರಾಹುಲ್ ಅವರು ಜರ್ಮನಿ ಪ್ರವಾಸದಲ್ಲಿದ್ದಾಗ ಅಲ್ಲಿನ ಸಚಿವ ನೀಲ್ಸ್ ಆನೆನ್ ಅವರನ್ನು ಭೇಟಿಯಾಗಿದ್ದರು. ಅವರ ಜತೆಗಿನ ಚಿತ್ರವನ್ನೇ ಹಿಂಡನ್‌ಬರ್ಗ್ ಮುಖ್ಯಸ್ಥರ ಜೊತೆಗಿನ ಚಿತ್ರ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಹಾಗೂ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. ರಾಹುಲ್–ಆನೆನ್ ಅವರ ಭೇಟಿಯ ಚಿತ್ರಗಳನ್ನು ಕಾಂಗ್ರೆಸ್ ಐದು ವರ್ಷಗಳ ಹಿಂದೆಯೇ ಟ್ವೀಟ್ ಮಾಡಿತ್ತು. ಅನೆನ್ ಅವರೂ ಟ್ವಿಟರ್‌ನಲ್ಲಿ ಈ ಚಿತ್ರ ಹಂಚಿಕೊಂಡಿದ್ದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ಕಲೆಗಳ ಅನುನಯ

ಸಂಗೀತ ಕಲೆಯೊಂದು, ಸಾಹಿತ್ಯ ಕಲೆಯೊಂದು |
ಅಂಗಾಂಗ ಭಾವ ರೂಪಣದ ಕಲೆಯೊಂದು ||
ಸಂಗಳಿಸಲೀ ಕಲೆಗಳನುನಯವು ಚರ್ಯೆಯಲಿ |
ಮಂಗಳೋನ್ನತ ಕಲೆಯೊ – ಮಂಕುತಿಮ್ಮ || 826 ||

ಪದ-ಅರ್ಥ: ಅಂಗಾಂಗ ಭಾವರೂಪಣದ ಕಲೆ = ನೃತ್ಯ ಕಲೆ, ಸಂಗಳಿಸಲೀ = ಸೇರಿಕೊಳ್ಳಲಿ, ಕಲೆಗಳನನುನಯವು = ಕಲೆಗಳ + ಅನುನಯವು, ಚರ್ಯೆಯಲಿ = ನಡತೆಯಲಿ, ಮಂಗಳೋನ್ನತ = - ಮಂಗಳ + ಉನ್ನತ.

ವಾಚ್ಯಾರ್ಥ: ಕಲೆಗಳಲಿ ಸಂಗೀತ, ಸಾಹಿತ್ಯ, ನೃತ್ಯ ಪ್ರಕಾರಗಳಿವೆ. ಅವು ಎಲ್ಲ ಕಲೆಗಳ ಅನುನಯವು ಸರಿಯಾಗಿ ಹೊಂದಿಕೊಂಡು ನಮ್ಮ ಚರ್ಯೆಯಲ್ಲಿ ಸೇರಿಕೊಳ್ಳುವುದೇ ಮಂಗಳವಾದ, ಉನ್ನತವಾದ ಕಲೆ.

ವಿವರಣೆ: ಮನುಷ್ಯ ಜೀವನವು ಸಮೃದ್ಧವಾಗಬೇಕಾದರೆ, ಮಂಗಳಕರವಾಗಬೇಕಾದರೆ ಕೇವಲ ಒಂದೆರಡು ಗುಣಗಳಿದ್ದರೆ ಸಾಲದು. ನೂರಾರು ಗುಣಗಳು ಬೇಕಾಗುತ್ತವೆ. ಆದರೆ, ಅವೆಲ್ಲ ಅನ್ಯೋನ್ಯವಾಗಿ ಸೇರಿಕೊಳ್ಳಬೇಕು. ನಮಗೆ ಜೀವನದಲ್ಲಿ ಅನೇಕ ಆಸಕ್ತಿಗಳು, ನಿಷ್ಠೆಗಳು ಮತ್ತು ಧ್ಯೇಯಗಳು. ಅವು ದಿಕ್ಕುದಿಕ್ಕಿಗೆ ಚಾಚಿಕೊಂಡಿವೆ. ನಾವು ಯಾವುದನ್ನೂ ಬಿಡಲಾರೆವು. ಆದ್ದರಿಂದ ಯಾವುದನ್ನು ಮಿತಿ ಮೀರಿ ಬೆಳೆಯಲೂ ಬಿಡಲಾರೆವು. ಒಂದು ಮತ್ತೊಂದರ ಮಿತಿಗೆ ಕಾರಣವಾಗುತ್ತದೆ. ಹೀಗೆ ಪರಸ್ಪರ ನಿಷ್ಠೆಗಳನ್ನು ಸಮನ್ವಯಗೊಳಿಸುವುದೇ ಸಂಸ್ಕೃತಿ. ಈ ಸಮನ್ವಯತೆಯೇ ಜೀವನದ ಕ್ಷೇತ್ರಗಳನ್ನೆಲ್ಲ ಒಂದು ಮಾಡಿ ಒಂದು ಅಖಂಡವಸ್ತುವನ್ನಾಗಿ ಮಾಡುತ್ತದೆ. ಇದೊಂದು ಮಹಾನ್ ಕಲೆ. ಈ ಸಂಸ್ಕೃತಿಯ ಮೂಲನೆಲೆಗಳು ನೂರಾರು. ಅದರಲ್ಲಿ ಕಗ್ಗ ಮೂರನ್ನು ಕುರಿತು ಹೇಳುತ್ತದೆ. ಸಂಗೀತ, ಸಾಹಿತ್ಯ ಮತ್ತು ನೃತ್ಯ. ಇವು ಮೂರೂ ನಮ್ಮ ಮನಸ್ಸನ್ನು ಪ್ರಭಾವಿಸುತ್ತವೆ, ಪ್ರಚೋದಿಸುತ್ತವೆ. ಈ ಮೂರೂ ಕಲೆಗಳ ಪರಿಣಾಮವಾಗುವುದು ಬುದ್ಧಿಯ ಸಂಸ್ಕಾರದಲ್ಲಿ. ಇದರೊಂದಿಗೆ ಹೃದಯ ಸಂಸ್ಕಾರವೂ ನಡೆಯುತ್ತದೆ. ಇವೆರಡರ ಸಂಸ್ಕಾರದಿಂದ ಪರಿಪಕ್ವವಾಗುವುದು ಜೀವನದ ಅಂತರಂಗ. ಈಕಗ್ಗದ ಮಾತು ವಿಶೇಷವಾದದ್ದು. ಸಾಹಿತ್ಯ, ಸಂಗೀತ ಮತ್ತು ನೃತ್ಯಗಳು ವಿಭಿನ್ನ ಕಲೆಗಳು. ಅವುಗಳ ಅನುನಯ ನಮ್ಮ ಚರ್ಯೆಯಲ್ಲಿ ಸೇರಿಕೊಳ್ಳಬೇಕು. ಪ್ರತಿಯೊಂದು ವಿಷಯಕ್ಕೂ ಒಂದು ಭಿನ್ನಾಭಿಪ್ರಾಯವಿದ್ದೇ ಇರುತ್ತದೆ. ಆ ಅಭಿಪ್ರಾಯಗಳನ್ನು ಸೇರಿಸಿ, ಒಂದು ಹದದಲ್ಲಿ ಅವುಗಳನ್ನು ಹೊಂದಿಸಬೇಕು. ಈ ಹದದ ಹೊಂದಿಕೆಯೇ ಸಮನ್ವಯ. ಸಾಹಿತ್ಯ, ಸಂಗೀತ, ನೃತ್ಯಗಳು ಒಂದೊಂದಕ್ಕೂ ಪೂರಕವಾಗಿರಬೇಕು. ಇದೊಂದು ರೀತಿಯ ನೃತ್ಯ ಪ್ರಯೋಗ ಇದ್ದಂತೆ. ಹಿನ್ನೆಲೆಯಲ್ಲಿ ಹಾಡುವವರ ಸ್ವರ ಶುದ್ಧಿಯಿರಬೇಕು, ಧ್ವನಿ ಮಧುರವಾಗಿರಬೇಕು ಆದರೆ ಸಾಹಿತ್ಯವನ್ನು ಕೆಡಿಸಬಾರದು. ಅತಿಯಾದ ಒತ್ತನ್ನು ಸಾಹಿತ್ಯಕ್ಕೆ ನೀಡಿ ಸಂಗೀತ ಹಾಳಾಗಬಾರದು. ಇವೆರಡೂ ಪೈಪೋಟಿಗೆ ಬಿದ್ದು ನೃತ್ಯಕ್ಕೆ ಅಭಾಸವುಂಟಾಗಬಾರದು. ಈ ಮೂರೂ ಸುಮಧುರವಾಗಿ ಹೊಂದಿಕೊಂಡಾಗ ಕಾರ್ಯಕ್ರಮಕ್ಕೆ ಮೆರಗು. ಹೀಗೆ ನಮಗೆ ದೊರೆತ ಕಲೆಗಳ ಸಮನ್ವಯತೆಯನ್ನು ಬಾಳಿನಲ್ಲಿ ಮಾಡಿಕೊಳ್ಳುವುದೇ ಒಂದು ಉನ್ನತ ಕಲೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಫೆಬ್ರುವರಿ 21, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪ್ರತಿಪದ್ ಗಂ. 09-05, ದ್ವಿತೀಯ ಗಂ. 29-58, ನಕ್ಷತ್ರ: ಶತಭಿಷ ಗಂ. 09-00 ಯೋಗ: ಶಿವ ಗಂ. 06-56, ಸಿದ್ಧ ಗಂ. 27-08 ಕರಣ: ಬವ ಗಂ. 09-05, ಕುಂಭ ಮಾಸದ 08 ನೇ ದಿನ.
ರಾಹುಕಾಲ: ಮಧ್ಯಾಹ್ನ 03-00 -04-30
ಸೂರ್ಯೋದಯ: 06-54 **ಸೂರ್ಯಾಸ್ತ:** 06-34
ಮುಸ್ಲಿಂ ದಿನಾಂಕ: 29 ರಜಬ್
ಅದೃಷ್ಟ ಸಂಖ್ಯೆ: 1, 9

ಮೇಷ: ಸಂಘಟನಾ ಶಕ್ತಿಯನ್ನು ಹೊಂದಿರುವ ನಿಮಗೆ ಪಾಲುದಾರರಲ್ಲಿ ವ್ಯವಹರಿಸುವುದು ಸುಲಭವಾಗುವುದು. ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರುವುದು. ಸಾಧುಸಂತರ ದರ್ಶನದಿಂದ ಶುಭವಾಗುವುದು.

ವೃಷಭ: ಮೇಲಧಿಕಾರಿಗಳಲ್ಲಿ ವೇತನದ ಬಗ್ಗೆ ನಿಮ್ಮ ಮನೋಭಿಲಾಷೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬೇಡಿ. ನಿಯಮಿತ ಆಹಾರದಿಂದ ವಾತದ ಬಾಧೆ ಕಡಿಮೆಯಾಗಲಿದೆ. ಕೋರ್ಟು ಕಚೇರಿ ಕೆಲಸಗಳಿಗಾಗಿ ಅಲೆದಾಟ ಇರುವುದು.

ಮಿಥುನ: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಸರ್ಕಾರಿ ನೌಕರರಿಗೆ ವೈಯಕ್ತಿಕ ವಿಚಾರಕ್ಕೆ ನಾನಾ ರೀತಿಯಲ್ಲಿ ಅಡ್ಡಿ-ಆತಂಕಗಳು ಕಾಡಬಹುದು.

ಕರ್ಕಾಟಕ: ಉದ್ಯೋಗದಲ್ಲಿ ಯಾವುದೇ ಮುಜುಗರ ಅಥವಾ ಹೆದರಿಕೆ ಇಲ್ಲದೆ ಸಮಯವನ್ನು ಬಳಸಿಕೊಳ್ಳಲು ಪ್ರಯತ್ನ ಮಾಡಿ. ಈ ದಿನದಲ್ಲಿ ಗೃಹಿಣಿಯರು ಉತ್ತಮ ಹೊಗಳಿಕೆಯ ಮಾತುಗಳನ್ನು ಎದುರು ನೋಡಬಹುದು.

ಸಿಂಹ: ಅವಿವಾಹಿತರಿಗೆ ಮಾತೃವರ್ಗದ ಕಡೆಯಿಂದ ಅಪೇಕ್ಷಿಸಿದ ರೀತಿಯಲ್ಲಿ ಸಂಬಂಧ ಅರಸಿ ಬರುವುದು. ಈ ದಿನ ಹಣಕಾಸಿಗೆ ಸಂಬಂಧಿಸಿದಂತೆ ಹೊಸದಾದ ತೀರ್ಮಾನವನ್ನು ಕೈಗೊಳ್ಳುವುದು ಸರಿಯಲ್ಲ.

ಕನ್ಯಾ: ಎಂಜಿನಿಯರಿಂಗ್ ಕ್ಷೇತ್ರದಲ್ಲಿಯವರಿಗೆ ಹೆಚ್ಚಿನ ಅವಕಾಶಗಳೊಂದಿಗೆ ಬಯಸಿದ ಜಾಗ ಹಾಗೂ ಹೆಸರಾಂತ ಕಂಪನಿಯಲ್ಲಿ ಕೆಲಸ ಸಿಗುವ ಸಾಧ್ಯತೆಗಳು ಇವೆ. ನ್ಯಾಯವಾದಿಗಳು ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು ಕಾಣುವಿರಿ.

ತುಲಾ: ಮಾನಸಿಕ ಚಿಂತೆಗಳು ಮತ್ತು ಬಾಹ್ಯ ತೊಂದರೆಗಳು ದೂರಾಗಿ ಹಿಂದಿನ ಸಂತೋಷವನ್ನು ಪುನಃ ಪಡೆಯುವಿರಿ. ಮನೆಯವರ ಆರೋಗ್ಯದಲ್ಲಿ ಹಂತ ಹಂತದ ಸುಧಾರಣೆ ಕಂಡು ಮನಸ್ಸಿಗೆ ನೆಮ್ಮದಿ ಇರುವುದು.

ವೃಶ್ಚಿಕ: ಕರ್ತವ್ಯ ಕೊರತೆಯಿಂದಾಗಿ ಜೀವನದಲ್ಲಿ ಉಲ್ಲಾಸ ಕಳೆದುಕೊಳ್ಳುವ ಸಮಯ ಎದುರಾಗಲಿದೆ. ತಂದೆಯಾಗುವ ಸುದ್ದಿ ಕೇಳಿ ಸಂತೋಷವಾಗುವುದು. ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಆಲಸ್ಯ ತೋರಿ ಬರುವುದು.

ಧನು: ವ್ಯವಹಾರದಲ್ಲಿ ತೆಗೆದುಕೊಂಡಿದ್ದ ನಿರ್ಧಾರಗಳು ಸರಿಯಾಗಿದೆಯೇ ಎಂದು ಇನ್ನೊಮ್ಮೆ ಪರಾಮರ್ಶಿಸಿಕೊಳ್ಳಿ. ಭೂಮಿಗೆ ಸಂಬಂಧಿಸಿದಂತೆ ಹಲವು ದಿನಗಳಿಂದ ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ.

ಮಕರ: ಅಂತರಾಜ್ಯದ ಅತಿ ಮುಖ್ಯವಾದ ವ್ಯಕ್ತಿಯೊಬ್ಬರ ಪರಿಚಯ ವ್ಯಾಪಾರ ಅಭಿವೃದ್ಧಿಯ ದಾರಿ ಹಿಡಿಯಲು ಕಾರಣವಾಗುವುದು. ರಾಜಕಾರಣಿಗಳೊಂದಿಗೆ ಅಧಿಕವಾಗಿ ಬೆಳೆಸಿಕೊಂಡ ಒಡನಾಟವು ಅಪಾಯವನ್ನು ತಂದೊಡ್ಡಲಿದೆ.

ಕುಂಭ: ಅಪರಿಚಿತರ ಸಹಕಾರ ದಿಂದ ಕಾರ್ಯ ವ್ಯವಸ್ಥಿತವಾಗಿ ನಡೆಯಲಿದೆ. ಷೇರು ಮಾರಾಟಗಳಿಂದ ಲಾಭ ಹೊಂದುವಿರಿ. ಅನವಶ್ಯಕ ಚಿಂತೆಯಿಂದ ಆರೋಗ್ಯದಲ್ಲಿ ಏರುಪೇರು ಕಂಡುಬರಲಿದೆ.


ಮೀನ: ವ್ಯಾಪಾರದ ಬಂಡವಾಳ ಹೆಚ್ಚಿಸಿಕೊಳ್ಳುವ ಬಗ್ಗೆ ಯೋಚಿಸಬಹುದು. ಅಧಿಕ ಜವಾಬ್ದಾರಿ ಅಥವಾ ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ. ವಾಹನ ಚಾಲನೆಯಲ್ಲಿ ಜಾಗರೂಕತೆ ಮಾಡಿ.

ಪದಬಂಧ 5237

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಹಿಗ್ಗಿನಿಂದ ಹೇಳಿದ ಅಂಕಗಣಿತದ ಕೋಷ್ಟಕ (2)
4.ವಿಷ್ಣುವಿನ ದಶಾವತಾರದಲ್ಲಿ ಐದನೆಯದು (3)
5.ಹೆದರುವುದೇ ಸ್ವಭಾವವಾಗಿರುವ ವ್ಯಕ್ತಿ (4)
6.ಕಾಡುಪ್ರಾಣಿ ಇಲ್ಲಿ ಕಾಣುತ್ತಿದೆ (4)
7.ಕೆಸರಲ್ಲಿ ಸಿಕ್ಕಿಕೊಂಡಿರುವ ಮೆಟ್ಟು (2)
9.ಗುಹೆಯನ್ನು ಹೀಗೂ ಹೇಳುವರು (2)
13.ಹೊಸಯುಗ ಈ ತರ ಬಂದಿದೆ (4)
14.ಅವಶ್ಯವಿಲ್ಲದ ಖರ್ಚು (4)
15.ಕಪಟಕ್ಕೊಂದು ಪರ್ಯಾಯ ಪದ (3)
16.ಹರಸುತಲಿದ್ದಾಗ ಕಾಣಿಸಿದ ಮಗ (2)

ಮೇಲಿಂದ ಕೆಳಕ್ಕೆ
1.ರತ್ನ ಖಚಿತವಾದ ಒಡವೆ (4)
2.ಮನದಿಂದ ಬಂದಿರುವ ದೃಢವಾದ ನಂಬಿಕೆ (5)
3.ಕಿರೀಟ ಇಲ್ಲಿದೆ (3)
5.ಅಂಗದಲ್ಲಿರುವ ಸುಗಂಧಲೇಪನ ದ್ರವ್ಯ (4)
8.ದ್ರವದಿಂದ ತುಂಬಿರುವುದು (4)
10.ಈತ ವಿವೇಕಶಾಲಿ (5)
11.ಸಮರ್ಪಕವಲ್ಲದ ಕಾರಣ (4)
12.ಅತಿಯಾದ ಬಯಕೆ (3)



5236ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸಂಸ್ಥಾನ 4.ದೀನಭಾವ 6.ನಮಸ್ಕಾರ 7.ರಜತ 10.ಮಡದಿ 12.ಹಸುಗೂಸು 15.ಮಲಯಜ 16.ಯಕೃತ್ತು

ಮೇಲಿಂದ ಕೆಳಕ್ಕೆ:
1.ಸಂಹಿತೆ 2.ನದೀತೀರ 3.ಭವನ 5.ಪುರಸೊತ್ತು 8.ತತ್ಸಮ 9.ಮನೋಹರ 11.ದಿಗ್ವಿಜಯ 13.ಸುಮತಿ 14.ನಿಯತ್ತು

ಸುಡೊಕು 5623

	6			7		2	9	3
	8		5	2		1	6	
1		5					8	
4			2		5			1
	9						2	
		9	3		2			
7			9		8	5		2
	5			4			3	


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5622 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,745
ಇಂದಿನ ಅಂತ್ಯ	17,844
▼	99
ದಿನದ ಕನಿಷ್ಠ	17,818

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710 (1710)
ಸೋಯಾ (ರಿಫೈನ್ಡ್)	₹1160 (1155)
ಸೂರ್ಯಕಾಂತಿ (ರಿಫೈನ್ಡ್)	₹1160 (1160)
ಪಾಮೋಲಿನ್	₹970 (968)

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹399-659
ದ್ವಿತಳಿ (ಬಿ.ವಿ)	₹289-761

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹15500
ಎಸಿ	₹7560
ಆರ್‌ಪಿ	₹11000
ಆರ್‌ಸಿ	₹5225

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)

ದಪ್ಪ	₹1000-1400
ಮಧ್ಯಮ	₹600-800
ಸಣ್ಣ	₹200-500

ನೀತಿ ಆಯೋಗಕ್ಕೆ ಸುಬ್ರಹ್ಮಣ್ಯಂ ಸಿಇಒ

ನವದೆಹಲಿ (ಪಿಟಿಐ): ಮಾಜಿ ಐಎಎಸ್ ಅಧಿಕಾರಿ ಬಿ.ವಿ.ಆರ್. ಸುಬ್ರಹ್ಮಣ್ಯಂ ಅವರನ್ನು ಕೇಂದ್ರ ಸರ್ಕಾರವು ನೀತಿ ಆಯೋಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನಾಗಿ (ಸಿಇಒ) ಸೋಮವಾರ ನೇಮಕ ಮಾಡಿದೆ.



ಬಿ.ವಿ.ಆರ್. ಸುಬ್ರಹ್ಮಣ್ಯಂ

ನೀತಿ ಆಯೋಗದ ಸಿಇಒ ಆಗಿದ್ದ ಪರಮೇಶ್ವರನ್ ಅಯ್ಯರ್ ಅವರು ವಿಶ್ವ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಆಗಲಿದ್ದಾರೆ. ಅಲ್ಲಿ ಅವರು ಮೂರು ವರ್ಷಗಳ ಅಧಿಕಾರ ಅವಧಿ ಹೊಂದಿದ್ದಾರೆ.

ಕೇಂದ್ರ ಸಚಿವ ಸಂಪುಟದ ನೇಮಕಾತಿಗಳ ಸಮಿತಿಯು ಸುಬ್ರಹ್ಮಣ್ಯಂ ಅವರ ನೇಮಕವನ್ನು, ಅಧಿಕಾರ ವಹಿಸಿಕೊಂಡ ದಿನದಿಂದ ಎರಡು ವರ್ಷಗಳ ಅವಧಿಗೆ ಅನ್ವಯವಾಗುವಂತೆ ಮಾಡಿದೆ ಎಂದು ಸಿಬ್ಬಂದಿ ಸಚಿವಾಲಯದ ಆದೇಶದಲ್ಲಿ ಹೇಳಲಾಗಿದೆ.

‘ಬ್ಯಾಂಕಿಂಗ್ ಭದ್ರತೆಗೆ ಅಗತ್ಯ ಸಂಪನ್ಮೂಲ ಒದಗಿಸಿ’

ಬೆಂಗಳೂರು (ಪಿಟಿಐ): ಬ್ಯಾಂಕಿಂಗ್ ಸುರಕ್ಷತಾ ವ್ಯವಸ್ಥೆಗೆ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವಂತೆ ಬ್ಯಾಂಕ್‌ಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಕಾರ್ಯನಿರ್ವಾಹಕ ನಿರ್ದೇಶಕ ರೋಹಿತ್ ಜೈನ್ ಸಲಹೆ ನೀಡಿದ್ದಾರೆ. ಬ್ಯಾಂಕಿಂಗ್ ವಲಯದ ಸೈಬರ್ ಭದ್ರತೆಗೆ ಇರುವ ಅಪಾಯವನ್ನು ಗಮನದಲ್ಲಿ ಇಟ್ಟುಕೊಂಡು ಈ ಸಲಹೆ ನೀಡಿದ್ದಾರೆ.

ಕ್ಲೌಡ್ ಕಂಪ್ಯೂಟಿಂಗ್ ಮತ್ತು ಇಂಟರ್‌ನೆಟ್ ಆಫ್ ಥಿಂಗ್ಸ್ (ಐಒಟಿ) ತಂತ್ರಜ್ಞಾನಗಳಿಂದ ಸೈಬರ್ ಭದ್ರತೆಗೆ ಎದುರಾಗಬಹುದಾದ ಪರಿಣಾಮಗಳನ್ನು ಎದುರಿಸಲು ಸಜ್ಜಾಗಿರುವ ಅಗತ್ಯವೂ ಬ್ಯಾಂಕ್‌ಗಳಿಗೆ ಇದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಬೆಂಗಳೂರಿನಲ್ಲಿ ಇದೇ 22 ರಿಂದ 25ರವರೆಗೆ ಜಿ20 ಹಣಕಾಸು ಸಚಿವರು ಮತ್ತು ಕೇಂದ್ರೀಯ ಬ್ಯಾಂಕ್‌ಗಳ ಗವರ್ನರ್ ಸಭೆಗಳು ನಡೆಯಲಿವೆ. ಈ ಹಿನ್ನಲೆಯಲ್ಲಿ ಸೋಮವಾರ ಆಯೋಜಿಸಿದ್ದ ‘ಸೈಬರ್ ಭದ್ರತೆ’ ವಿಷಯದ ಕುರಿತ ಸಂವಾದದಲ್ಲಿ ಅವರು ಮಾತನಾಡಿದರು.

ಮುಂಬೈ ಧಾರಣೆ

ಶೇಂಗಾ

20–2–2023

ಜಾವಾ 70/80(ಹೊಸ)	12350-12400
ಜಾವಾ 80/90(ಹೊಸ)	11350-11400
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1720)
ಒಂದು ವಾರದ ಡೆಲಿವರಿ	1715 (1715)
ಸೋಯಾ ಕಚ್ಚಾ	1060 (1055)
ಪಾಮ್ ವಾರದ ಡೆಲಿವರಿ	968 (966)
ಸೂರ್ಯಕಾಂತಿ ಎಣ್ಣೆ ಕಚ್ಚಾ	1050 (1050)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
56,400 (56,300)
ಬೆಳ್ಳಿ ಕೆ.ಜಿ 65,800 (65,700)

ಆವರಣದಲ್ಲಿ ಶನಿವಾರದ ಧಾರಣೆ

ಎನ್‌ಪಿಎಸ್ ಹಣ ರಾಜ್ಯಗಳಿಗೆ ಮರಳಿಸಲಾಗದು: ಕೇಂದ್ರ

ಜೈಪುರ (ಪಿಟಿಐ): ರಾಷ್ಟ್ರೀಯ ಪಿಂಚಣಿ ಯೋಜನೆಯ (ಎನ್‌ಪಿಎಸ್) ಅಡಿಯಲ್ಲಿ ಹೂಡಿಕೆ ಮಾಡಲಾದ ಹಣವನ್ನು ರಾಜ್ಯ ಸರ್ಕಾರಗಳಿಗೆ ಮರಳಿಸಲು ಈಗಿರುವ ನಿಯಮಗಳ ಅಡಿಯಲ್ಲಿ ಅವಕಾಶ ಇಲ್ಲ ಎಂದು ಕೇಂದ್ರ ಸರ್ಕಾರವು ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಹಣಕಾಸು ಕಾರ್ಯದರ್ಶಿ ವಿವೇಕ್ ಜೋಷಿ ಅವರು ಈ ಮಾತನ್ನು ಹೇಳಿದ್ದಾರೆ.

ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದಲ್ಲಿ ಈಚೆಗೆ ಕಂಡುಬಂದ ಕುಸಿತವನ್ನು ಉಲ್ಲೇಖಿಸಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು, ರಾಜ್ಯ ಸರ್ಕಾರದ ನೌಕರರನ್ನು ಷೇರು ಮಾರುಕಟ್ಟೆಯ ಏರಿಳಿತಗಳಿಗೆ ಒಡ್ಡಲು ಆಗದು ಎಂದು ಹೇಳಿದ್ದರು. ಎನ್‌ಪಿಎಸ್ ಅಡಿ ಹಣವನ್ನು ಷೇರುಗಳಲ್ಲಿಯೂ ತೊಡಗಿಸಲಾಗುತ್ತದೆ.

ಎನ್‌ಪಿಎಸ್ ಯೋಜನೆಯಲ್ಲಿ ತೊಡಗಿಸಲಾಗಿರುವ ರಾಜ್ಯ ಸರ್ಕಾರಿ ನೌಕರರ ಹಣವನ್ನು ವಾಪಸ್ ಕೊಡಬೇಕು ಎಂದು ಅವರು ಕೇಂದ್ರವನ್ನು ಆಗ್ರಹಿಸಿದ್ದರು. ಅಲ್ಲದೆ, ಹಣವನ್ನು ಹಳೆ ಪಿಂಚಣಿ ಯೋಜನೆಗೆ (ಒಪಿಎಸ್) ವರ್ಗಾವಣೆ ಮಾಡದೆ ಇದ್ದರೆ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಅವರು ಹೇಳಿದ್ದರು.

‘ಹಣದ ಮೇಲೆ ನೌಕರರಿಗೆ ಹಕ್ಕಿದೆ. ಹೂಡಿಕೆಯಾದ ಹಣವು ಬಡ್ಡಿಯನ್ನು ಪಡೆಯುತ್ತಿರುತ್ತದೆ. ನಿವೃತ್ತಿಯ ನಂತರದಲ್ಲಿ ಹಣವು ನೌಕರರಿಗೆ ಸಿಗುತ್ತದೆ. ಆದರೆ ಹಣವು ಸರ್ಕಾರದ ಕೈಗೆ ವಾಪಸ್ ಸಿಗುವುದಿಲ್ಲ’ ಎಂದು ನಿರ್ಮಲಾ ಅವರು ವರದಿಗಾರರಿಗೆ ತಿಳಿಸಿದ್ದಾರೆ. ನಿರ್ಮಲಾ ಅವರು ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಇಲ್ಲಿಗೆ ಬಂದಿದ್ದರು. ಎನ್‌ಪಿಎಸ್ ಅಡಿಯಲ್ಲಿ ಹೂಡಿಕೆ ಆಗಿರುವ ಹಣವು ನೌಕರನಿಗೆ ಸಂಬಂಧಿಸಿದ್ದು. ಇಲ್ಲಿ ಎನ್‌ಪಿಎಸ್ ಟ್ರಸ್ಟ್ ಹಾಗೂ ನೌಕರನ ನಡುವೆ ಒಂದು ಒಪ್ಪಂದ ಏರ್ಪಟ್ಟಿರುತ್ತದೆ. ಎನ್‌ಪಿಎಸ್ ಅಡಿಯಲ್ಲಿ ಹೂಡಿಕೆ ಆಗಿರುವ ಹಣವು ವಾಪಸ್ ಸಿಗುತ್ತದೆ ಎಂದು ರಾಜ್ಯ ಸರ್ಕಾರಗಳು ಭಾವಿಸಿದ್ದರೆ, ಅದು ಈಗಿನ ಕಾನೂನುಗಳ ಅಡಿಯಲ್ಲಿ ಸಾಧ್ಯವಿಲ್ಲ ಎಂದು ಜೋಷಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಗೊರಬಲು	20109-33599	ಚಾಲಿ	30219-40400
ಕೋಕ	12500-25000	ರಾಶಿ	38000-45599	ಕೆಂಪುಗೋಟು	23119-34850
ಹೊಸತು	22500-40000	ಸರಕು	57669-81610	ರಾಶಿ	38479-44709
ಹಳತು	48000-54500	**ಸಿದ್ದಾಪುರ**		**ಯಲ್ಲಾಪುರ**	
ಸಾಗರ		ಬಿಳಿಗೋಟು	26899-32699	ಬಿಳಿಗೋಟು	24899-33291
ಬಿಳಿಗೋಟು	19899-29599	ಚಾಲಿ	35199-38099	ಹಳೆಚಾಲಿ	36890-40699
ಚಾಲಿ	25890-36719	ಕೋಕ	25699-30669	ಹೊಸಚಾಲಿ	33612-36312
ಕೋಕ	19819-31599	ಕೆಂಪುಗೋಟು	27799-37509	ಕೋಕ	16899-29812
ಕೆಂಪುಗೋಟು	22349-35699	ರಾಶಿ	42289-45499	ಕೆಂಪುಗೋಟು	24899-34089
ರಾಶಿ	35129-45889	ತಟ್ಟಿಬೆಟ್ಟೆ	36109-44899	ರಾಶಿ	43119-49028
ಶಿವಮೊಗ್ಗ		**ಶಿರಸಿ**		ತಟ್ಟಿಬೆಟ್ಟೆ	37860-44060
ಬೆಟ್ಟೆ	47069-53399	ಬೆಟ್ಟೆ	35399-42861		
		ಬಿಳಿಗೋಟು	22610-33309		

ಇಪಿಎಸ್: ‘ಜಂಟಿ ಆಯ್ಕೆ ನಮೂನೆ’ಯ ಮಾಹಿತಿ

ಹೆಚ್ಚಿನ ಪಿಂಚಣಿಗೆ ಕ್ರಮ ವಿವರಿಸಿದ ಇಪಿಎಫ್‌ಒ

ನವದೆಹಲಿ (ಪಿಟಿಐ): ಉದ್ಯೋಗಿಗಳ ಪಿಂಚಣಿ ಯೋಜನೆಯ (ಇಪಿಎಸ್) ಅಡಿಯಲ್ಲಿ ಹೆಚ್ಚಿನ ಪಿಂಚಣಿಗೆ ನೌಕರರು ಹಾಗೂ ಉದ್ಯೋಗದಾತರು ಜಂಟಿಯಾಗಿ ಅರ್ಜಿ ಸಲ್ಲಿಸಲು ಅನುವು ಮಾಡಿಕೊಡುವ ಪ್ರಕ್ರಿಯೆಯ ವಿವರವನ್ನು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಸೋಮವಾರ ಪ್ರಕಟಿಸಿದೆ.

ನೌಕರರ ಪಿಂಚಣಿ (ತಿದ್ದುಪಡಿ) ಯೋಜನೆ – 2014ರ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ 2022ರ ನವೆಂಬರ್‌ನಲ್ಲಿ ಎತ್ತಿ ಹಿಡಿದಿದೆ. 2014ರ ಆಗಸ್ಟ್ 22ರಂದು ತಂದ ತಿದ್ದುಪಡಿಯು, ಪಿಂಚಣಿಗೆ ಅರ್ಹವಾದ ವೇತನ ತಿಂಗಳಿಗೆ ₹ 6,500 ಇದ್ದಿದ್ದನ್ನು ₹ 15 ಸಾವಿರಕ್ಕೆ ಹೆಚ್ಚು ಮಾಡಿತ್ತು. ಅಲ್ಲದೆ, ಉದ್ಯೋಗಿಗಳು ಹಾಗೂ ಉದ್ಯೋಗದಾತರು ತಮ್ಮ ವಾಸ್ತವ ವೇತನದ (ವೇತನವು ಪಿಂಚಣಿಗೆ ಅರ್ಹವಾದ ಮಿತಿಗಿಂತಲೂ ಹೆಚ್ಚಿದ್ದರೆ) ಶೇಕಡ 8.33ರಷ್ಟನ್ನು ಇಪಿಎಸ್‌ಗೆ ವಂತಿಗೆಯಾಗಿ ನೀಡಲು ಅವಕಾಶ ಕಲ್ಪಿಸಿತ್ತು.

ಇಪಿಎಫ್‌ಒ ಕ್ಷೇತ್ರ ಅಧಿಕಾರಿಗಳು ‘ಜಂಟಿ ಆಯ್ಕೆ ನಮೂನೆ’ಯನ್ನು ಹೇಗೆ ನಿರ್ವಹಣೆ ಮಾಡಬೇಕು ಎಂಬುದರ ವಿವರವನ್ನು ಸಂಘಟನೆಯು ಸೋಮವಾರ ಹೊರಡಿಸಿದ ಆದೇಶದಲ್ಲಿ ತಿಳಿಸಿದೆ.

‘ಜಂಟಿ ಆಯ್ಕೆ ನಮೂನೆಗೆ ಅವಕಾಶ ಕಲ್ಪಿಸಿ ಶೀಘ್ರದಲ್ಲಿಯೇ ಯುಆರ್‌ಎಲ್ ನೀಡಲಾಗುತ್ತದೆ. ಅದು ಸಿಕ್ಕ ನಂತರದಲ್ಲಿ ಪ್ರಾದೇಶಿಕ ಪಿಎಫ್ ಆಯುಕ್ತರು ಅದರ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಬೇಕು’ ಎಂದು ಇಪಿಎಫ್‌ಒ ಹೇಳಿದೆ.

ಅರ್ಜಿಗಳನ್ನು ನೋಂದಾಯಿಸಿಕೊಳ್ಳಲಾಗುತ್ತದೆ, ಅವುಗಳನ್ನು ಡಿಜಿಟಲ್ ರೂಪದಲ್ಲಿ ದಾಖಲಿಸಿಟ್ಟುಕೊಳ್ಳಲಾಗುತ್ತದೆ ಹಾಗೂ ಅರ್ಜಿ ಸಲ್ಲಿಸಿದವರಿಗೆ ಸ್ವೀಕೃತಿ ಸಂಖ್ಯೆಯನ್ನು ನೀಡಲಾಗುತ್ತದೆ.

ಪ್ರಾದೇಶಿಕ ಪಿಎಫ್ ಕಚೇರಿಯ ಉಸ್ತುವಾರಿ ಹೊತ್ತಿರುವವರು ಪ್ರತಿ ಅರ್ಜಿಯನ್ನು ಪರಿಶೀಲಿಸಿ, ತಮ್ಮ ತೀರ್ಮಾನವನ್ನು ಅರ್ಜಿದಾರರಿಗೆ ಇ-ಮೇಲ್ ಅಥವಾ ಅಂಚೆ ಮೂಲಕ ಹಾಗೂ ನಂತರದಲ್ಲಿ ಎಸ್‌ಎಂಎಸ್ ಮೂಲಕ ತಿಳಿಸಬೇಕು ಎಂದು ಸೂಚಿಸಲಾಗಿದೆ. ಜಂಟಿ ಆಯ್ಕೆ ನಮೂನೆ ಸಲ್ಲಿಸಿದ ನಂತರದಲ್ಲಿ, ಬಾಕಿ ವಂತಿಗೆ ಇದ್ದಲ್ಲಿ ಅದನ್ನು ಪಾವತಿಸಿ, ಅರ್ಜಿದಾರರು ತಮ್ಮ ದೂರುಗಳನ್ನು ಇಪಿಎಫ್‌ಐಜಿಎಂಎಸ್ ಪೋರ್ಟಲ್ ಮೂಲಕ ಹೇಳಿಕೊಳ್ಳಬಹುದು.

ಎಲ್ಲ ಅರ್ಹ ಚಂದಾದಾರರಿಗೆ ಹೆಚ್ಚಿನ ಪಿಂಚಣಿ ಆಯ್ಕೆ ಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ತೀರ್ಪಿಗೆ ಅನುಗುಣವಾಗಿ ಅವಕಾಶ ಕಲ್ಪಿಸುವಂತೆ ಇಪಿಎಫ್‌ಒ ತನ್ನ ಕ್ಷೇತ್ರ ಅಧಿಕಾರಿಗಳಿಗೆ ಸೂಚನೆ ನೀಡಿದೆ.

‘ಇದು ಅಂತೂ ಎಲ್ಲರಿಗೂ ಸಂತಸ ತಂದುಕೊಡುವಂತಹ ಅಂತ್ಯ. ಇಪಿಎಫ್‌ಒ ಅಧಿಕಾರಿಗಳಿಗೆ ಹಾಗೂ ಕಾರ್ಮಿಕ ಸಚಿವಾಲಯಕ್ಕೆ ನಾನು ಅಭಿನಂದನೆ ಸಲ್ಲಿಸುತ್ತೇನೆ’ ಎಂದು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿ ಸದಸ್ಯ ಕೆ.ಇ. ರಘುನಾಥನ್ ಹೇಳಿದ್ದಾರೆ.

ಇಪಿಎಫ್: ಪಾವತಿಯಾಗದ ಬಡ್ಡಿ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಠೇವಣಿಗಳಿಗೆ 2021–22ನೇ ಸಾಲಿನ ಬಡ್ಡಿ ಮೊತ್ತ ಪಾವತಿ ಆಗದೇ ಇರುವ ಬಗ್ಗೆ ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಕೇಂದ್ರೀಯ ಧರ್ಮದರ್ಶಿಗಳ ಮಂಡಳಿಯ ಸದಸ್ಯರು ಪ್ರಸ್ತಾಪಿಸಿದ್ದಾರೆ.

ಕೇಂದ್ರ ಕಾರ್ಮಿಕ ಸಚಿವ ಭೂಪೇಂದ್ರ ಯಾದವ್ ಅವರ ನೇತೃತ್ವದಲ್ಲಿ 2022ರ ಮಾರ್ಚ್‌ನಲ್ಲಿ ನಡೆದ ಇಪಿಎಫ್‌ಒ ಕೇಂದ್ರೀಯ ಧರ್ಮದರ್ಶಿ ಮಂಡಳಿ ಸಭೆಯಲ್ಲಿ ಶೇ 8.1ರಷ್ಟು ಬಡ್ಡಿ ದರ ಪಾವತಿಸಲು ಒಪ್ಪಿಗೆ ನೀಡಲಾಗಿತ್ತು. ನಾಲ್ಕು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಇದು ಅತಿ ಕಡಿಮೆ ಬಡ್ಡಿ ದರ.

ಬಡ್ಡಿ ಪಾವತಿ ಆಗದಿರುವ ವಿಷಯವನ್ನು ಮಂಡಳಿಯ ಕೆಲವು ಸದಸ್ಯರು ಇಪಿಎಫ್‌ಒ ಅಧಿಕಾರಿಗಳ ಬಳಿ ಪ್ರಸ್ತಾಪಿಸಿದ್ದಾರೆ.

‘ಪಾವತಿ ಆಗಲಿದೆ’: ಈ ನಡುವೆ, ಬಡ್ಡಿ ಪಾವತಿ ಆಗದಿರುವ ವಿಷಯವನ್ನು ಕೆಲವರು ಟ್ವಿಟರ್ ಮೂಲಕವೂ ಹಂಚಿಕೊಂಡಿದ್ದರು. ಇದಕ್ಕೆ ಪ್ರತಿಕ್ರಿಯೆ ನೀಡಿರುವ ಇಪಿಎಫ್‌ಒ, ‘2021–22ನೆಯ ಸಾಲಿನ ಬಡ್ಡಿಯನ್ನು ಪಾವತಿಸುವ ಕೆಲಸ ನಡೆಯುತ್ತಿದೆ. ಬಡ್ಡಿಯು ಖಾತೆಗೆ ಶೀಘ್ರದಲ್ಲಿಯೇ ಜಮಾ ಆಗಲಿದೆ’ ಎಂದು ಹೇಳಿದೆ.

ಬಡ್ಡಿ ಪಾವತಿಸುವಾಗ, ಮೊತ್ತವನ್ನು ಪೂರ್ತಿಯಾಗಿ ಪಾವತಿ ಮಾಡಲಾಗುತ್ತದೆ. ಬಡ್ಡಿ ಮೊತ್ತದಲ್ಲಿ ನಷ್ಟ ಆಗುವುದಿಲ್ಲ ಎಂದು ಇಪಿಎಫ್‌ಒ ತನ್ನ @socialepfo ಟ್ವಿಟರ್ ಹ್ಯಾಂಡಲ್ ಮೂಲಕ ತಿಳಿಸಿದೆ.

ಸುದ್ದಿ 2 ನಿಮಿಷ

ಹಣದುಬ್ಬರ ನಿಯಂತ್ರಿಸಲು ಹಲವು ಕ್ರಮ: ಸಚಿವೆ ನಿರ್ಮಲಾ

ಜೈಪುರ (ಪಿಟಿಐ): ಹಣದುಬ್ಬರವನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಆ ಬಗ್ಗೆ ಗಮನ ಹರಿಸುವುದನ್ನು ಮುಂದುವರಿಸಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಹೇಳಿದ್ದಾರೆ.



2023–24ನೇ ಸಾಲಿನ ಬಜೆಟ್, ಹಣದುಬ್ಬರದ ಪ್ರಮಾಣವನ್ನು ಕಡಿಮೆ ಮಾಡಲಿದೆಯೇ ಎನ್ನುವ ಪ್ರಶ್ನೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ಬೇಳೆಕಾಳು ವಿಷಯದಲ್ಲಿ, ದೇಶಿ ಉತ್ಪಾದನೆ ಹೆಚ್ಚಿಸಲು ಸರ್ಕಾರವು ರೈತರಿಗೆ ಉತ್ತೇಜನ ನೀಡುತ್ತಿದೆ. ಸ್ಥಳೀಯವಾಗಿ ಬೇಳೆಕಾಳುಗಳ ಲಭ್ಯತೆ ಸುಧಾರಿಸುವ ನಿಟ್ಟಿನಲ್ಲಿ ಆಮದು ಸುಂಕವನ್ನೂ ಕಡಿಮೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಜನವರಿಯಲ್ಲಿ ಸಗಟು ಹಣದುಬ್ಬರವು ಎರಡು ವರ್ಷಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಕಂಡಿದೆ. ಆದರೆ ಚಿಲ್ಲರೆ ಹಣದುಬ್ಬರವು ಜನವರಿಯಲ್ಲಿ ಶೇ 6.52ಕ್ಕೆ ಏರಿಕೆ ಆಗಿದೆ.

ಉಬರ್ ಸೇವೆಗಳಿಗೆ 25 ಸಾವಿರ ಟಾಟಾ ಇ.ವಿ. ಕಾರು

ನವದೆಹಲಿ (ಪಿಟಿಐ): ಉಬರ್ ಕಂಪನಿಗೆ 25 ಸಾವಿರ ಎಕ್ಸ್‌ಪ್ರೆಸ್–ಟಿ ವಿದ್ಯುತ್ ಚಾಲಿತ ವಾಹನ (ಇ.ವಿ.) ಮಾರಾಟ ಮಾಡುತ್ತಿರುವುದಾಗಿ ಟಾಟಾ ಮೋಟರ್ ಕಂಪನಿಯು ಸೋಮವಾರ ಹೇಳಿದೆ.

ಎರಡೂ ಕಂಪನಿಗಳ ಮಧ್ಯೆ ನಡೆದಿರುವ ಒಪ್ಪಂದದ ಪ್ರಕಾರ, ಉಬರ್ ಕಂಪನಿಯು ತನ್ನ ಪ್ರೀಮಿಯಂ ಸೇವೆಗಳಲ್ಲಿ ಈ ಎಲೆಕ್ಟ್ರಿಕ್ ಸೆಡಾನ್ ಬಳಸಲಿದೆ ಎಂದು ಕಂಪನಿಗಳು ಜಂಟಿ ಹೇಳಿಕೆಯಲ್ಲಿ ತಿಳಿಸಿವೆ. ಆದರೆ, ಎಷ್ಟು ಮೊತ್ತಕ್ಕೆ ಒಪ್ಪಂದ ನಡೆದಿದೆ ಎನ್ನುವ ಬಗ್ಗೆ ಕಂಪನಿಗಳು ಮಾಹಿತಿ ನೀಡಿಲ್ಲ.

ಒಂದು ಬಾರಿ ಚಾರ್ಜ್ ಮಾಡಿದರೆ 315 ಕಿಲೋ ಮೀಟರ್ ದೂರ ಕ್ರಮಿಸುವ ಸಾಮರ್ಥ್ಯವಿರುವ ಒಂದು ಸೆಡಾನ್‌ನ ಎಕ್ಸ್ ಷೋರೂಂ ಬೆಲೆ ₹ 14.98 ಲಕ್ಷ ಆಗುತ್ತದೆ. ಫೇಮ್ ಸಬ್ಸಿಡಿ ₹2.6 ಲಕ್ಷ ಸಿಗಲಿದೆ.

ಬೆಂಗಳೂರು, ದೆಹಲಿ ಎನ್‌ಸಿಆರ್, ಮುಂಬೈ, ಕೋಲ್ಕತ್ತ, ಚೆನ್ನೈ, ಹೈದರಾಬಾದ್ ಮತ್ತು ಅಹಮದಾಬಾದ್ ನಗರಗಳಲ್ಲಿ ಎಕ್ಸ್‌ಪ್ರೆಸ್–ಟಿ ಸೇವೆಗೆ ಲಭ್ಯವಾಗಲಿದೆ ಎಂದು ಹೇಳಿವೆ.

ಟಾಟಾ ಮೋಟರ್ಸ್ ಕಂಪನಿಯು ಈ ತಿಂಗಳಿನಿಂದ ಆರಂಭಿಸಿ ಹಂತ ಹಂತವಾಗಿ ಉಬರ್‌ಗೆ ಕಾರನ್ನು ನೀಡಲಿದೆ.

‘ಈ ಒಪ್ಪಂದದಿಂದಾಗಿ ಬಾಡಿಗೆ ವಾಹನಗಳ ವಿಭಾಗದಲ್ಲಿ ನಮ್ಮ ಮಾರುಕಟ್ಟೆ ಸ್ಥಾನವು ಇನ್ನಷ್ಟು ಬಲಗೊಳ್ಳಲಿದೆ’ ಎಂದು ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿಯ ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಹೇಳಿದ್ದಾರೆ.

ಬ್ರೆಜಿಲ್: ಪ್ರವಾಹ, ಭೂಕುಸಿತಕ್ಕೆ 36 ಮಂದಿ ಸಾವು

ಸಾವೊ ಪೌಲೊ, ಬ್ರೆಜಿಲ್ (ಎಪಿ): ಬ್ರೆಜಿಲ್‌ನ ಸಾವೊ ಪೌಲೊ ರಾಜ್ಯದಲ್ಲಿ ಸುರಿದ ಭಾರೀ ಮಳೆಯಿಂದಾಗಿ ಭೂಕುಸಿತ ಮತ್ತು ಪ್ರವಾಹ ಪರಿಸ್ಥಿತಿ ಎದುರಾಗಿದ್ದು, ಈಗಾಗಲೇ 36 ಮಂದಿ ಸಾವನ್ನಪ್ಪಿದ್ದಾರೆ. ಹಲವರು ನಾಪತ್ತೆಯಾಗಿದ್ದು, 50ಕ್ಕೂ ಹೆಚ್ಚು ಮನೆಗಳು ನೆಲಸಮವಾಗಿವೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಾವೊ ಸಬಾಸ್ಟಿಯೊ, ಉಬಾಟುಬಾ, ಇಲ್ಹಬೆಲಾ ಮತ್ತು ಬರ್ಟಿಯೊಗಾ ನಗರಗಳಲ್ಲಿ ಭಾರಿ ಪ್ರವಾಹದಿಂದ ಹಾನಿ ಉಂಟಾಗಿದೆ. ಇಲ್ಲಿ ಉತ್ಸವಗಳನ್ನು ರದ್ದುಪಡಿಸಲಾಗಿದೆ.

ರಕ್ಷಣಾ ತಂಡಗಳು ಕಾಣೆಯಾದ, ಗಾಯಗೊಂಡ ಮತ್ತು ಅವಶೇಷಗಳಡಿಯಲ್ಲಿ ಸಿಲುಕಿದ ಜನರನ್ನು ಕಾಪಾಡುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಒಂದೇ ದಿನ 60 ಸೆಂಟೀಮೀಟರ್‌ಗೂ ಅಧಿಕ ಮಳೆ ಸುರಿದಿದ್ದು, ಬ್ರೆಜಿಲ್‌ನಲ್ಲಿ ಇದು ದಾಖಲೆಯ ಮಳೆ ಪ್ರಮಾಣವಾಗಿದೆ.

ಉಕ್ರೇನ್‌ಗೆ ₹413 ಕೋಟಿ ಹೆಚ್ಚುವರಿ ನೆರವಿನ ಘೋಷಣೆ

ಕೀವ್‌ಗೆ ಬೈಡನ್ ದಿಢೀರ್ ಭೇಟಿ

ಕೀವ್ (ರಾಯಿಟರ್ಸ್): ಅಮೆರಿಕ ಅಧ್ಯಕ್ಷ ಜೋ ಬೈಡನ್ ಸೋಮವಾರ ಉಕ್ರೇನ್ ರಾಜಧಾನಿ ಕೀವ್‌ಗೆ ಅಘೋಷಿತ ಭೇಟಿ ನೀಡಿದರು. ರಷ್ಯಾವು ಉಕ್ರೇನ್ ಮೇಲೆ ಸೇನಾ ಕಾರ್ಯಾಚರಣೆ ಆರಂಭಿಸಿ ಒಂದು ವರ್ಷ ಪೂರ್ಣಗೊಳ್ಳಲು ಮೂರು ದಿನ ಬಾಕಿ ಇರುವಾಗಲೇ ಈ ಭೇಟಿ ಮಾಡಿ ದೇಶದ ಜನತೆಗೆ ಧೈರ್ಯ ತುಂಬಲಾಯಿತು.

ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ ಬೈಡನ್, ಹೆಚ್ಚುವರಿ 50 ಕೋಟಿ ಡಾಲರ್ (₹413 ಕೋಟಿ) ನೆರವು ನೀಡುವುದಾಗಿ ಘೋಷಿಸಿದರು.

‘ಉಕ್ರೇನ್ ಮತ್ತು ಪ್ರಜಾಪ್ರಭುತ್ವ ಗಟ್ಟಿಯಾಗಿ ನಿಂತಿವೆ. ಅಮೆರಿಕ ಹಾಗೂ ಇಡೀ ಜಗತ್ತು ಉಕ್ರೇನ್ ಪರವಾಗಿದೆ’ ಎಂದು ಬೈಡನ್ ಹೇಳಿದರು.

ಉಭಯ ದೇಶಗಳ ನಡುವೆ ಯುದ್ಧವು ತೀವ್ರಗೊಳ್ಳುತ್ತಿದ್ದು, ಪಾಶ್ಚಿಮಾತ್ಯ ದೇಶಗಳು ವೇಗವಾಗಿ ಶಸ್ತ್ರಾಸ್ತ್ರ ಮತ್ತು ಯುದ್ಧ ವಿಮಾನಗಳನ್ನು ಒದಗಿಸಬೇಕೆಂದು ಝೆಲೆನ್ ಸ್ಕಿ ಮನವಿ ಮಾಡಿದರು.

ಬೈಡನ್ ಭೇಟಿ ಬೆನ್ನಲ್ಲೇ ಕೀವ್‌ನಾದ್ಯಂತ ವೈಮಾನಿಕ ದಾಳಿಯ ಸೈರನ್ ಮೊಳಗಿಸಲಾಗುತ್ತಿದೆ. ಆದರೆ ರಷ್ಯಾ, ಈವರೆಗೆ ಕ್ಷಿಪಣಿ ಅಥವಾ ವೈಮಾನಿಕ ದಾಳಿ ನಡೆಸಿದ ಬಗ್ಗೆ ಯಾವುದೇ ವರದಿ ಇಲ್ಲ.



ಉಕ್ರೇನ್‌ನ ರಾಜಧಾನಿ ಕೀವ್‌ಗೆ ಸೋಮವಾರ ಆಗಮಿಸಿದ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರನ್ನು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಆಲಂಗಿಸಿ ಸ್ವಾಗತಿಸಿದರು –ಎಎಫ್‌ಪಿ ಚಿತ್ರ

ಉಕ್ರೇನ್‌ಗೆ ಜಪಾನ್ ನೆರವು

ಟೋಕಿಯೊ (ಎಎಫ್‌ಪಿ): ಉಕ್ರೇನ್‌ಗೆ ಹೊಸದಾಗಿ 5.5 ಬಿಲಿಯನ್ ಡಾಲರ್ (₹45,493 ಕೋಟಿ) ನೆರವು ನೀಡುವುದಾಗಿ ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಸೋಮವಾರ ಘೋಷಿಸಿದರು.

‘ಯುದ್ಧದಿಂದ ನಲುಗಿರುವ ಜನರಿಗಾಗಿ ಮತ್ತು ಮೂಲಸೌಕರ್ಯಗಳ ಪುನರ್‌ಸ್ಥಾಪನೆಗಾಗಿ ಈ ನೆರವು ನೀಡುತ್ತಿದ್ದೇವೆ’ ಎಂದು ಹೇಳಿದರು.

ಶುಕ್ರವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಜಿ–7 ನಾಯಕರು ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸುತ್ತೇವೆ ಎಂದು ಹೇಳಿದರು.

ಇಸ್ರೇಲ್ ಪ್ರವಾಸಕ್ಕೆ ತೆರಳಿದ್ದ ಕೇರಳದ ರೈತ ನಾಪತ್ತೆ

ಜೆರುಸಲೆಂ (ಪಿಟಿಐ): ಆಧುನಿಕ ಕೃಷಿ ತಂತ್ರಗಳನ್ನು ಅಧ್ಯಯನ ಮಾಡಲು ಕೇರಳದಿಂದ ಇಸ್ರೇಲ್‌ಗೆ ತೆರಳಿದ್ದ 48 ವರ್ಷದ ರೈತ ನಾಪತ್ತೆಯಾಗಿದ್ದು, ಇಸ್ರೇಲ್ ಅಧಿಕಾರಿಗಳು ದೂರು ದಾಖಲಿಸಿಕೊಂಡಿದ್ದಾರೆ.

ಹೈಡ್ರೋಪೋನಿಕ್ಸ್ ಮತ್ತು ನಿಖರ ಕೃಷಿಯ ಬಗ್ಗೆ ಮಾಹಿತಿ ಪಡೆಯಲು ಕೇರಳ ಸರ್ಕಾರ 28 ಜನರನ್ನು ಇಸ್ರೇಲ್‌ಗೆ ಕಳುಹಿಸಿತ್ತು. ಈ ಪೈಕಿ ಕಣ್ಣೂರು ಜಿಲ್ಲೆಯ ಉಲಿಕ್ಕಲ ಪಂಚಾಯತ್‌ನ ರೈತ ಬಿಜು ಕುರಿಯನ್ ಫೆ.17ರಂದು ನಾಪತ್ತೆಯಾಗಿದ್ದಾರೆ.


ಇಸ್ರೇಲ್‌ನ ಕಾನೂನು ಜಾರಿ ಸಂಸ್ಥೆ ಅವರನ್ನು ಪತ್ತೆಹಚ್ಚಲು ಪ್ರಯತ್ನಿಸಿದರೂ ಅವರು ಎಲ್ಲಿದ್ದಾರೆ ಎಂಬುದು ತಿಳಿದು ಬಂದಿಲ್ಲ. ಕುರಿಯನ್ ವಿರುದ್ಧ ದೂರು ದಾಖಲು ಮಾಡಿದ್ದು, ಅವರು ಸಿಕ್ಕಿದ ನಂತರ ಗಡಿಪಾರು ಮಾಡಲಾಗುವುದು ಎಂದು ಅಲ್ಲಿಯ ಅಧಿಕಾರಿಗಳು ತಿಳಿಸಿದ್ದಾರೆ.

ಕೃಷಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಬಿ. ಅಶೋಕ್ ನೇತೃತ್ವದ ನಿಯೋಗ ಇದೇ 11ರಂದು ಇಸ್ರೇಲ್‌ಗೆ ತೆರಳಿತ್ತು. ಕುರಿಯನ್ ಬಿಟ್ಟು ಉಳಿದವರ ತಂಡ ಭಾನುವಾರ ಇಸ್ರೇಲ್‌ನಿಂದ ನಿರ್ಗಮಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಣ್ಣೂರಿನಲ್ಲಿರುವ ಕುರಿಯನ್ ಕುಟುಂಬಕ್ಕೂ ಕೂಡ ಅವರ ನಿಗೂಢ ನಾಪತ್ತೆಯ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ ಎಂದು ತಿಳಿದು ಬಂದಿದೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ವೈಯಕ್ತಿಕ ವಿಚಾರಗಳಿಗೆ ಸಂಬಂಧಿಸಿದಂತೆ ಐಪಿಎಸ್, ಐಎಎಸ್ ಮಹಿಳಾ ಅಧಿಕಾರಿಗಳಿಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ಆರೋಪಕ್ಕೆ ಇಳಿದಿದ್ದಾರೆ. ಇದು, ರಾಜ್ಯ ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ನಿಯಂತ್ರಣವಿಲ್ಲ ಎಂಬುದಕ್ಕೆ ಸ್ಪಷ್ಟ ನಿದರ್ಶನ ಎಂದು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

24ರಂದು ಘಟಿಕೋತ್ಸವ: ಮೂವರಿಗೆ ವಿಟಿಯು ಗೌರವ ಡಾಕ್ಟರೇಟ್

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ 22ನೇ ಘಟಿಕೋತ್ಸವ ಫೆ. 24ರಂದು ಬೆಳಿಗ್ಗೆ 10.30ಕ್ಕೆ ಜ್ಞಾನಸಂಗಮ ಆವರಣದಲ್ಲಿರುವ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿ ನಡೆಯಲಿದೆ ಎಂದು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿದ್ಯಾಶಂಕರ ತಿಳಿಸಿದರು.

‘ಔದ್ಯೋಗಿಕ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮೂವರಿಗೆ ಗೌರವ ಡಾಕ್ಟರೇಟ್ ನೀಡಲಾಗುತ್ತಿದೆ. ಟೊಯೊಟಾ ಕಿರ್ಲೋಸ್ಕರ್ ಮೋಟಾರ್ಸ್‌ನ ಉಪಾಧ್ಯಕ್ಷ ವಿಕ್ರಮ್ ಕಿರ್ಲೋಸ್ಕರ್ (ಮರಣೋತ್ತರ), ವೆಬ್ಕೊ ಇಂಡಿಯಾ ಲಿಮಿಟೆಡ್ ಹಾಗೂ ಟಿವಿಎಸ್ ಆಟೊಮೆಟಿವ್ ಸಲ್ಯೂಷನ್ಸ್‌ನ ಪ್ರೈವೇಟ್ ಲಿಮಿಟೆಡ್ ಅಧ್ಯಕ್ಷ ಎಂ.ಲಕ್ಷ್ಮೀನಾರಾಯಣ್, ಬೆಲಗಮ್ ಫೆರೊಕಾಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಸಚಿನ್ ಸಬ್ನಿಸ್ ಡಾಕ್ಟರೇಟ್ ಪಡೆಯಲಿದ್ದಾರೆ’ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ‘ಒಟ್ಟು 62,228 ವಿದ್ಯಾರ್ಥಿಗಳಿಗೆ ವಿವಿಧ ಪದವಿ ಹಾಗೂ 701 ಮಂದಿಗೆ ಪಿಎಚ್.ಡಿ ಪ್ರದಾನ ಮಾಡಲಾಗುವುದು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸುವರು. ಅಖಿಲ ಭಾರತೀಯ ತಾಂತ್ರಿಕ ಶಿಕ್ಷಣ ಪರಿಷತ್ತಿನ ಅಧ್ಯಕ್ಷ ಪ್ರೊ.ಟಿ.ಜಿ. ಸೀತಾರಾಮ್ ಘಟಿಕೋತ್ಸವ ಭಾಷಣ ಮಾಡುವರು’ ಎಂದರು.

‘ವಿಶ್ವದ ಬೇರೆಬೇರೆ ಕಡೆಯ ಅವಕಾಶಗಳು ನಮ್ಮ ಪದವೀಧರರ ಕೈ ತಪ್ಪಬಾರದು ಎಂಬ ಕಾರಣಕ್ಕೆ, ವಿಟಿಯು ಶೈಕ್ಷಣಿಕ ಕ್ಯಾಲೆಂಡರ್ ಹೊಂದಾಣಿಕೆ ಮಾಡಲು ನಿರ್ಧರಿಸಲಾಗಿದೆ. ವಿಶ್ವದ ಪ್ರಮುಖ ವಿಶ್ವವಿದ್ಯಾಲಯಗಳು ಹಾಗೂ ಎಐಸಿಟಿಇ ಜತೆಗೆ ಚರ್ಚಿಸಿ ‘ಅಕಾಡೆಮಿಕ್ ಕ್ಯಾಲೆಂಡರ್’ ಬದಲಾವಣೆ ಮಾಡಲಿದ್ದೇವೆ’ ಎಂದರು.



ವಿಕ್ರಮ್ ಕಿರ್ಲೋಸ್ಕರ್



ಲಕ್ಷ್ಮೀನಾರಾಯಣ್



ಸಚಿನ್ ಸಬ್ನಿಸ್

ಮುರಳಿಗೆ 18 ಚಿನ್ನದ ಪದಕ!

ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿ ಎಸ್.ಮುರಳಿ ಒಟ್ಟು 18 ಚಿನ್ನದ ಪದಕ ಪಡೆದಿದ್ದಾರೆ. ಒಬ್ಬನೇ ವಿದ್ಯಾರ್ಥಿ ಇಷ್ಟು ಪದಕ ಪಡೆದಿದ್ದು ವಿಟಿಯು 25 ವರ್ಷಗಳ ಇತಿಹಾಸದಲ್ಲೇ ದಾಖಲೆ ಎಂದು ಪ್ರೊ. ವಿದ್ಯಾಶಂಕರ ತಿಳಿಸಿದರು.



ಎಸ್.ಮುರಳಿ

‘ಅನುತ್ತೀರ್ಣರಿಗೆ ಸುವರ್ಣಾವಕಾಶ’

‘ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಈ ಬಾರಿ ಬೆಳ್ಳಿಹಬ್ಬ ಆಚರಿಸಿಕೊಳ್ಳುತ್ತಿದೆ. ಇದರ ಅಂಗವಾಗಿ ಪದವಿ ಅಪೂರ್ಣವಾದವರಿಗೆ ‘ಸುವರ್ಣ ಅವಕಾಶ’ ನೀಡಲಾಗುತ್ತಿದೆ. ಎಷ್ಟೇ ವರ್ಷಗಳ ಹಿಂದೆ, ಎಷ್ಟೇ ವಿಷಯಗಳು ಅಪೂರ್ಣ ಆಗಿದ್ದರೂ ಈಗ ಮತ್ತೆ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತಿದೆ’ ಎಂದು ಪ್ರೊ.ವಿದ್ಯಾಶಂಕರ ಎಂದರು.

‘ಫೆಬ್ರುವರಿ ಅಂತ್ಯದಲ್ಲೇ ಇದರ ಎಲ್ಲ ವಿವರಗಳನ್ನು ಜಾಲತಾಣದಲ್ಲಿ ನೀಡಲಾಗುವುದು. 9,159 ಬಿಇ ವಿದ್ಯಾರ್ಥಿಗಳು, 1,247 ಎಂ.ಟೆಕ್ ವಿದ್ಯಾರ್ಥಿಗಳು ಸೇರಿದಂತೆ ವಿವಿಧ ಪದವಿಗಳ ಒಟ್ಟು 13,329 ಮಂದಿ ತಮ್ಮ ಪದವಿ ಅಪೂರ್ಣ ಮಾಡಿದ್ದಾರೆ. ಇವರಿಗಾಗಿ ವಿಶೇಷ ಪರೀಕ್ಷೆ ನಡೆಸಲಾಗುವುದು’ ಎಂದು ಹೇಳಿದರು.

ರೆಂಜಿಲಾಡಿ: ಆನೆಗಳ ದಾಳಿಗೆ ಯುವತಿ ಸೇರಿ ಇಬ್ಬರು ಸಾವು


ಮಂಗಳೂರು/ ಉಪ್ಪಿನಂಗಡಿ: ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ರೆಂಜಿಲಾಡಿ ಗ್ರಾಮದಲ್ಲಿ ಆನೆಗಳ ದಾಳಿಯಿಂದ ಯುವತಿ ಸೇರಿ ಇಬ್ಬರು ಸೋಮವಾರ ಮುಂಜಾನೆ ಮೃತಪಟ್ಟಿದ್ದಾರೆ.

ರೆಂಜಿಲಾಡಿ ಗ್ರಾಮದ ನೈಲಾ ನಿವಾಸಿಗಳಾದ ರಂಜಿತಾ (22) ಹಾಗೂ ರಮೇಶ್ ರೈ (55) ಮೃತಪಟ್ಟವರು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

‘ಪೇರಡ್ಕ ಹಾಲು ಸೊಸೈಟಿಯಲ್ಲಿ ಉದ್ಯೋಗಿಯಾಗಿದ್ದ ರಂಜಿತಾ, ಸೊಸೈಟಿಗೆ ಕಾಡು ದಾರಿಯಲ್ಲಿ ಮುಂಜಾನೆ ಹೋಗುತ್ತಿದ್ದಾಗ ನೈಲಾದಲ್ಲಿ ಆನೆಗಳ ಹಿಂಡು ದಾಳಿ ನಡೆಸಿತ್ತು. ಅವರನ್ನು ರಕ್ಷಿಸಲು ಧಾವಿಸಿದ ರಮೇಶ್ ಮೇಲೂ ಆನೆಗಳು ದಾಳಿ ನಡೆಸಿದ್ದವು. ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಂಜಿತಾ ಅವರು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಕೊನೆಯುಸಿರೆಳೆದಿದ್ದಾರೆ’ ಎಂದು ಸ್ಥಳೀಯರು ತಿಳಿಸಿದ್ದಾರೆ. ರಮೇಶ್, ಸಿಪಿಐನ ಕಡಬ ತಾಲ್ಲೂಕು ಘಟಕದ ಉಪ ಕಾರ್ಯದರ್ಶಿ ಹಾಗೂ ಪುತ್ತೂರು ತಾಲ್ಲೂಕು ಬೀಡಿ ಕಾರ್ಮಿಕರ ಸಂಘಟನೆಯ (ಎಐಟಿಯುಸಿ) ಜೊತೆ ಕಾರ್ಯದರ್ಶಿಯಾಗಿದ್ದರು.

ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ರವಿಕುಮಾರ್ ಎಂ.ಆರ್. ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸಂತ್ರಸ್ತ ಕುಟುಂಬಕ್ಕೆ ಸಾಂತ್ವನ ಹೇಳಿದರು.

ಮೂರು ಆನೆಗಳ ಹಿಂಡು: ‘ಕೊಣಾಜೆ ಮೀಸಲು ಅರಣ್ಯ ಹಾಗೂ ಆಸುಪಾಸಿನ ಗ್ರಾಮಗಳಲ್ಲಿ ಎರಡು ಹೆಣ್ಣಾನೆ ಹಾಗೂ ಒಂದು ಮರಿ ಇರುವ 3 ಆನೆಗಳ ಹಿಂಡು ಓಡಾಡುತ್ತಿದ್ದು, ಈ ಹಿಂಡೇ ದಾಳಿ ನಡೆಸಿರುವ ಸಾಧ್ಯತೆ ಇದೆ. ಈ ಆನೆಗಳನ್ನು ಹಿಡಿದು ದುಬಾರೆ ಶಿಬಿರಕ್ಕೆ ಕಳುಹಿಸಲಾಗುವುದು. ಮಂಗಳವಾರದಿಂದಲೇ ಕಾರ್ಯಾಚರಣೆ ಆರಂಭವಾಗಲಿದೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಅರಣ್ಯ ಉಪಸಂರಕ್ಷಣಾಧಿಕಾರಿ ವೈ.ಕೆ. ದಿನೇಶ್ ಕುಮಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು. ‘ರಂಜಿತಾ ತಾಯಿಗೆ ₹5 ಲಕ್ಷ ಪರಿಹಾರ ನೀಡಲಾಗಿದೆ. ರಮೇಶ್ ಅವರ ವಾರಸುದಾರರ ಬಗ್ಗೆ ಮಾಹಿತಿ ಖಚಿತಪಡಿಸಿಕೊಂಡು ಪರಿಹಾರ ನೀಡಲಾಗುವುದು’ ಎಂದರು.



ರಮೇಶ ರೈ



ರಂಜಿತಾ

ಹೆಸರು, ಚಿಹ್ನೆಯ ವಿವಾದ: ಬಿಜೆಪಿ ಮತ್ತು ಆಯೋಗದ ಮೇಲೆ ಹರಿಹಾಯ್ದ ಉದ್ಧವ್ ಠಾಕ್ರೆ

‘ಚುನಾವಣಾ ಆಯೋಗವನ್ನು ವಿಸರ್ಜಿಸಿ’

ಮುಂಬೈ (ಪಿಟಿಐ): ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಬಣವೇ ನಿಜವಾದ ಶಿವಸೇನಾ ಎಂದು ತೀರ್ಪು ಕೊಟ್ಟಿರುವ ಚುನಾವಣಾ ಆಯೋಗವನ್ನು ವಿಸರ್ಜಿಸಬೇಕು ಎಂದು ಶಿವಸೇನಾ (ಉದ್ಧವ್ ಬಾಳಾ ಠಾಕ್ರೆ) ಬಣದ ನಾಯಕ ಉದ್ಧವ್ ಠಾಕ್ರೆ ಸೋಮವಾರ ಹೇಳಿದ್ದಾರೆ.

‘ನಮ್ಮ ಹೆಸರು ಮತ್ತು ಚಿಹ್ನೆಯನ್ನು ಕದಿಯಲಾಗಿದೆ. ಆದರೆ, ಠಾಕ್ರೆ ಎಂಬ ಹೆಸರನ್ನು ಯಾರೂ ಕದಿಯಲಾಗದು’ ಎಂದಿದ್ದಾರೆ.

‘ಚುನಾವಣಾ ಆಯೋಗದ ತೀರ್ಪು ತಪ್ಪು. ಈಗ, ಸುಪ್ರೀಂ ಕೋರ್ಟ್ ನಮ್ಮ ಮುಂದಿರುವ ಏಕೈಕ ಆಶಾಕಿರಣ. ಹೆಸರು ಮತ್ತು ಚಿಹ್ನೆಯನ್ನು ಒಂದು ಬಣಕ್ಕೆ ನೇರವಾಗಿ ನೀಡಿದ ಒಂದೇ ಒಂದು ನಿದರ್ಶನ ಇಲ್ಲ. ಇಷ್ಟೊಂದು ತರಾತುರಿಯಲ್ಲಿ ಈ ನಿರ್ಧಾರ ಕೈಗೊಳ್ಳುವ ಅಗತ್ಯ ಏನಿತ್ತು’ ಎಂದು ಉದ್ಧವ್ ಪ್ರಶ್ನಿಸಿದ್ದಾರೆ.

‘ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಬಳಸಿಕೊಂಡು ದೇಶದ ಪ್ರಜಾಪ್ರಭುತ್ವವನ್ನು ಬಿಜೆಪಿ ಧ್ವಂಸ ಮಾಡುತ್ತಿದೆ. ಬಿಜೆಪಿ ನಮಗೆ ಇಂದು ಮಾಡಿದ್ದನ್ನು ನಾಳೆ ಯಾರಿಗೆ ಬೇಕಿದ್ದರೂ ಮಾಡಬಹುದು. 2024ರ ಬಳಿಕವೂ ಇದುವೇ ಮುಂದುವರಿದರೆ ಈ ದೇಶದಲ್ಲಿ ಪ್ರಜಾಪ್ರಭುತ್ವ ಅಥವಾ ಚುನಾವಣೆ ಇರುವುದಿಲ್ಲ’ ಎಂದು ಅವರು ಹೇಳಿದ್ದಾರೆ.

ಅಂಧೇರಿ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಚುನಾವಣಾ ಆಯೋಗವು ನೀಡಿದ ಚಿಹ್ನೆಯ ಅಡಿಯಲ್ಲಿ ಸ್ಪರ್ಧಿಸಿದ್ದೇವೆ. ಆದರೆ, ಇನ್ನೊಂದು ಬಣಕ್ಕೆ ಸ್ಪರ್ಧಿಸುವ ಧೈರ್ಯ ಕೂಡ ಇರಲಿಲ್ಲ ಎಂದರು.

ಶಿವಸೇನಾದ ಅಧಿಕೃತ ಬ್ಯಾಂಕ್ ಖಾತೆಗಳಿಂದ ಹಣವನ್ನು ವರ್ಗಾಯಿಸ ಲಾಗುತ್ತಿದೆಯೇ ಎಂಬ ಪ್ರಶ್ನೆಗೆ, ‘ಪಕ್ಷದ ನಿಧಿಗೆ ಏನಾಯಿತು ಎಂಬುದರ ಕುರಿತು ಮಾತನಾಡುವ ಹಕ್ಕು ಚುನಾವಣಾ ಆಯೋಗಕ್ಕೆ ಇಲ್ಲ. ಆಯೋಗವು ಸುಲ್ತಾನನ ರೀತಿ ವರ್ತಿಸಬಾರದು. ನ್ಯಾಯಯುತವಾಗಿ ಚುನಾವಣೆ ನಡೆಸುವುದು ಮತ್ತು ರಾಜಕೀಯ ಪಕ್ಷದೊಳಗೆ ಪ್ರಜಾಪ್ರಭುತ್ವ ಇರುವಂತೆನೋಡಿಕೊಳ್ಳುವುದು ಮಾತ್ರ ಆಯೋಗದ ಕೆಲಸ’ ಎಂದು ಉತ್ತರಿಸಿದ್ದಾರೆ.

ಶಿಂದೆ ಬಣವು ಶಿವಸೇನಾದ ಸ್ವತ್ತುಗಳನ್ನು ವಶಕ್ಕೆ ಪಡೆಯುತ್ತಿದೆಯಲ್ಲವೇ ಎಂಬ ಪ್ರಶ್ನೆಗೆ, ‘ನನ್ನ ತಂದೆಯ (ಬಾಳಾ ಸಾಹೇಬ್ ಠಾಕ್ರೆ) ಹೆಸರನ್ನು ಬಳಸುವುದನ್ನು ನಿಲ್ಲಿಸುವಂತೆ ಅವರಿಗೆ ಸವಾಲು ಹಾಕುತ್ತಿದ್ದೇನೆ. ಅವರು (ಶಿಂದೆ) ಅವರ ತಂದೆಯ ಹೆಸರನ್ನು ಬಳಸಿ, ಮತ ಕೇಳಲಿ’ ಎಂದು ಹೇಳಿದರು.



ಉದ್ಧವ್ ಠಾಕ್ರೆ ಅವರು ಮುಂಬೈನಲ್ಲಿ ಸೋಮವಾರ ಮಾಧ್ಯಮಗೋಷ್ಠಿ ನಡೆಸಿದರು. ರಾಜ್ಯಸಭಾ ಸದಸ್ಯ ಸಂಜಯ ರಾವುತ್ ಜೊತೆಗಿದ್ದರು –ಪಿಟಿಐ ಚಿತ್ರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತಕ್ಕೆ ಮಹತ್ವ ಇದೆ. ಯಾವುದು ನಿಜವಾದ ಶಿವಸೇನಾ ಎಂಬ ವಿಚಾರದಲ್ಲಿ ಸತ್ಯಕ್ಕೆ ಜಯವಾಗಿದೆ

ಏಕನಾಥ ಶಿಂದೆ
ಮಹಾರಾಷ್ಟ್ರ ಮುಖ್ಯಮಂತ್ರಿ

ಬಾಳಾ ಠಾಕ್ರೆ ಅವರ ಪರಂಪರೆಯನ್ನು ಶಿಂದೆ ಅವರು ಮುಂದಕ್ಕೆ ಒಯ್ಯುತ್ತಿದ್ದಾರೆ. ಮಹಾರಾಷ್ಟ್ರದ ಜನರು ಮತ್ತು ಬಿಜೆಪಿ–ಶಿವಸೇನಾ ಸರ್ಕಾರ ಅವರೊಂದಿಗೆ ಇದೆ

ಜ್ಯೋತಿರಾದಿತ್ಯ ಸಿಂಧಿಯಾ
ಕೇಂದ್ರ ಸಚಿವ

ಸ್ವತ್ತು ವ್ಯಾಜ್ಯ ಬಗೆಹರಿಸಿದಂತೆ: ಸಾಮ್ನಾ ವ್ಯಂಗ್ಯ

ಶಿವಸೇನಾದ ಹೆಸರು ಮತ್ತು ಚಿಹ್ನೆಯನ್ನು ಶಿಂದೆ ಬಣಕ್ಕೆ ನೀಡಿದ ಚುನಾವಣಾ ಆಯೋಗದ ಕ್ರಮವು ‘ಸ್ವತ್ತು ವ್ಯಾಜ್ಯ ಬಗೆಹರಿಸಿದಂತೆ ಇದೆ’ ಎಂದು ಶಿವಸೇನಾದ ಮುಖವಾಣಿ ‘ಸಾಮ್ನಾ’ದಲ್ಲಿ ವಿವರಿಸಲಾಗಿದೆ.

‘ಅಂಗಡಿಯಿಂದ ಶೇಂಗಾ ಖರೀದಿ ಮಾಡಿದ ರೀತಿಯಲ್ಲಿಯೇ ಚಿಹ್ನೆ ಮತ್ತು ಹೆಸರನ್ನು ಖರೀದಿ ಮಾಡಲಾಗಿದೆ ಎಂಬುದು ಈಗ ರಹಸ್ಯವೇನೂ ಅಲ್ಲ. ಠಾಕ್ರೆ ಅವರು ಪೋಷಿಸಿಕೊಂಡು ಬಂದ ಶಿವಸೇನಾವನ್ನು ದೆಹಲಿಯಲ್ಲಿರುವವರ ಬೂಟು ನೆಕ್ಕುವ ಜನರ ಕೈಗೆ ಆಯೋಗವು ಕೊಟ್ಟಿದೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕೃಪೆಗಾಗಿ ಶಿವಸೇನಾದ ಚಿಹ್ನೆಯಾದ ಬಿಲ್ಲು ಬಾಣವನ್ನು ಕೊಡಲಾಗಿದೆ ಎಂಬುದು ಬಯಲಾಗಿದೆ. ಈ ವ್ಯಕ್ತಿಯು ಮಹಾರಾಷ್ಟ್ರ ಮತ್ತು ಮರಾಠಿ ಜನರ ಮೊದಲ ಶತ್ರು. ಶಾ ಅವರೊಂದಿಗೆ ಗುರುತಿಸಿಕೊಳ್ಳುವ ಎಲ್ಲರನ್ನೂ ಮಹಾರಾಷ್ಟ್ರದ ಶತ್ರುಗಳು ಎಂದೇ ನೋಡಬೇಕು’ ಎಂದು ಸಂಪಾದಕೀಯವು ಹೇಳಿದೆ.

ಅಧಿಕಾರವನ್ನು ಈಗಿನಂತೆ ಹಿಂದೆಂದೂ ದುರುಪಯೋಗ ಪಡಿಸಿಕೊಂಡದ್ದು ಇತಿಹಾಸದಲ್ಲಿಯೇ ಇಲ್ಲ. ಶಿಂದೆ ಬಣದ ಸಿಂಧುತ್ವದ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿರುವ ವಿಚಾರಣೆ ಮುಗಿಯುವ ತನಕ ಆಯೋಗವು ಕಾಯಬಹುದಿತ್ತು. ಅದಾನಿ, ಅಂಬಾನಿ ಅಥವಾ ನೀರವ್ ಮೋದಿಯಂತಹ ಉದ್ಯಮಿಗಳು ಯಾವುದೇ ಪಕ್ಷದ ಎಲ್ಲ ಶಾಸಕರು ಮತ್ತು ಸಂಸದರನ್ನು ಖರೀದಿ ಮಾಡಿ ಆ ಪಕ್ಷದ ಮಾಲೀಕತ್ವವು ತಮ್ಮದು ಎಂದು ಸಾಧಿಸಬಹುದಾದ ಸಾಧ್ಯತೆ ಇದೆ ಎಂದೂ ‘ಸಾಮ್ನಾ’ ಹೇಳಿದೆ.


ವಿವಾದ ಸುಪ್ರೀಂ ಕೋರ್ಟ್‌ಗೆ

ಶಿಂದೆ ಬಣವೇ ನಿಜವಾದ ಶಿವಸೇನಾ ಎಂದು ಚುನಾವಣಾ ಆಯೋಗವು ಕೊಟ್ಟ ತೀರ್ಪಿನ ವಿರುದ್ಧ ಉದ್ಧವ್ ಠಾಕ್ರೆ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ. ತಮ್ಮ ಅರ್ಜಿಯನ್ನು ತುರ್ತು ವಿಚಾರಣೆಗೆ ಎತ್ತಿಕೊಳ್ಳಬೇಕು ಎಂದು ಉದ್ಧವ್ ಪರ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ನೇತೃತ್ವದ ಪೀಠವನ್ನು ಕೋರಿದರು. ಆದರೆ, ತುರ್ತು ವಿಚಾರಣೆಗೆ ಮುಖ್ಯ ನ್ಯಾಯಮೂರ್ತಿ ನಿರಾಕರಿಸಿದರು.

‘ಎಡ, ಬಲ, ಕೇಂದ್ರ ಏನೇ ಆಗಿರಲಿ, ನಿಯಮ ಎಲ್ಲರಿಗೂ ಅನ್ವಯವಾಗುತ್ತದೆ. ಸಮರ್ಪಕ ಪ್ರಕ್ರಿಯೆಯ ಮೂಲಕ ನಾಳೆ (ಮಂಗಳವಾರ) ಬನ್ನಿ’ ಎಂದು ಅವರು ಹೇಳಿದರು.

ಗೋಧ್ರಾ ಪ್ರಕರಣ: 11 ಜನರ ಮರಣದಂಡನೆಗೆ ಒತ್ತಾಯ

ನವದೆಹಲಿ (ಪಿಟಿಐ): ಗೋಧ್ರಾ ರೈಲು ಹತ್ಯಾಕಾಂಡ ಪ್ರಕರಣದ 11 ಮಂದಿ ಅಪರಾಧಿಗಳಿಗೆ ಮರಣದಂಡನೆ ವಿಧಿಸಲು ಕೋರುವುದಾಗಿ ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸೋಮವಾರ ತಿಳಿಸಿದೆ.



ಈ ಅಪರಾಧಿಗಳ ಮರಣ ದಂಡನೆಯನ್ನು ಗುಜರಾತ್ ಹೈಕೋರ್ಟ್ ಜೀವಾವಧಿ ಶಿಕ್ಷೆಯಾಗಿ ಮಾರ್ಪಾಡು ಮಾಡಿತ್ತು.

ಗುಜರಾತ್ ಸರ್ಕಾರದ ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ಪ್ರಕರಣದ ಕೆಲವು ಅಪರಾಧಿಗಳು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಗೆ ವಿರೋಧ ವ್ಯಕ್ತಪಡಿಸಿದ್ದು, ‘ಇದು ಅಪರೂಪದಲ್ಲಿ ಅಪರೂಪದ ಪ್ರಕರಣವಾಗಿದ್ದು, ಮಹಿಳೆಯರು ಮಕ್ಕಳು ಸೇರಿದಂತೆ 59 ಮಂದಿ ಜೀವಂತ ದಹನಗೊಂಡಿದ್ದರು’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

‘ಅಪರಾಧಿಗಳ ಜಾಮೀನು ಅರ್ಜಿಗಳನ್ನು ನ್ಯಾಯಪೀಠವು ಮೂರು ವಾರಗಳ ನಂತರ ವಿಚಾರಣೆಗೆ ನಿಗದಿಪಡಿಸಿದೆ.

ಅಪರಾಧಿಗಳ ಶಿಕ್ಷೆ ಮತ್ತು ಅವರು ಇದುವರೆಗೆ ಜೈಲಿನಲ್ಲಿ ಕಳೆದ ಅವಧಿಯ ವಿವರಗಳನ್ನೊಳಗೊಂಡ ಕ್ರೋಡೀಕೃತ ಪಟ್ಟಿಯನ್ನು ಸಲ್ಲಿಸುವಂತೆ ನ್ಯಾಯಪೀಠವು ಎರಡೂ ಕಡೆಯ ವಕೀಲರನ್ನು ಕೇಳಿದೆ.

ಈ ಪ್ರಕರಣದ ಇಬ್ಬರು ಅಪರಾಧಿಗಳಿಗೆ ಸುಪ್ರೀಂ ಕೋರ್ಟ್ ಈಗಾಗಲೇ ಜಾಮೀನು ಮಂಜೂರು ಮಾಡಿದ್ದು, ಏಳು ಮಂದಿ ಅಪರಾಧಿಗಳು ಜಾಮೀನಿಗಾಗಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ಬಾಕಿ ಉಳಿದಿದೆ.

ವಿಚಾರಣಾ ನ್ಯಾಯಾಲಯವು ಪ್ರಕರಣದ 11 ಅಪರಾಧಿಗಳಿಗೆ ಮರಣದಂಡನೆ ಹಾಗೂ 20 ಮಂದಿಗೆ ಜೀವಾವಧಿ ಶಿಕ್ಷೆಯನ್ನು ಘೋಷಿಸಿತ್ತು. ಮರಣದಂಡನೆಯನ್ನು ಹೈಕೋರ್ಟ್ ಜೀವಾವಧಿ ಶಿಕ್ಷೆಯನ್ನಾಗಿ ಮಾರ್ಪಾಡು ಮಾಡಿರುವುದನ್ನು ಪ್ರಶ್ನಿಸಿ ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

2002 ಫೆಬ್ರುವರಿ 27ರಂದು ಗುಜರಾತ್‌ನ ಗೋಧ್ರಾದಲ್ಲಿ ರೈಲು ಬೋಗಿಗಳಿಗೆ ಬೆಂಕಿ ಹಚ್ಚಿದ ಪರಿಣಾಮ 59 ಮಂದಿ ಮೃತಪಟ್ಟಿದ್ದರು. ಬಳಿಕ ರಾಜ್ಯದಾದ್ಯಂತ ಗಲಭೆ ನಡೆದಿತ್ತು.

ಮೂರು ಅಭಿವೃದ್ಧಿ ನಿಗಮ ಸ್ಥಾಪನೆಗೆ ಆದೇಶ

ಪ್ರಜಾವಾಣಿ ವಾರ್ತೆ

- ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ
- ಗಾಣಿಗ ಅಭಿವೃದ್ಧಿ ನಿಗಮ
- ಹಡಪದ ಅಭಿವೃದ್ಧಿ ನಿಗಮ

ಬೆಂಗಳೂರು: ಶ್ರೀ ನಾರಾಯಣ ಗುರು, ಗಾಣಿಗ ಮತ್ತು ಹಡಪದ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸೋಮವಾರ ಆದೇಶ ಹೊರಡಿಸಿದೆ.

ಈಡಿಗ ಸಮುದಾಯದ 26 ಉಪ ಜಾತಿಗಳ ಸಮಗ್ರ ಅಭಿವೃದ್ಧಿಗಾಗಿ ಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ ಸ್ಥಾಪಿಸಲಾಗಿದೆ. ಗಾಣಿಗ, ತೇಲಿ, ಗಾಂಡ್ಲ,ವನಿಯನ್ ಹಾಗೂ ಜ್ಯೋತಿನಗರ ವೈಶ್ಯ ಸಮುದಾಯಗಳ ಅಭಿವೃದ್ಧಿಗೆ ಗಾಣಿಗ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಲಾಗಿದೆ. ಹಡಪದ ಸಮುದಾಯದ ಅಭಿವೃದ್ಧಿಗೆ ಹಡಪದ ನಿಗಮ ಸ್ಥಾಪಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

2022–23ನೇ ಆರ್ಥಿಕ ವರ್ಷದ ಬಜೆಟ್‌ನಲ್ಲಿ ನಾರಾಯಣ ಗುರು ಅಭಿವೃದ್ಧಿಕೋಶ ಸ್ಥಾಪಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದರು. ಈಡಿಗರಿಗೆ ಪ್ರತ್ಯೇಕ ಅಭಿವೃದ್ಧಿ ನಿಗಮವನ್ನೇ ಸ್ಥಾಪಿಸುವಂತೆ ಸಮುದಾಯದ ಚುನಾಯಿತ ಪ್ರತಿನಿಧಿಗಳು, ಮಠಾಧೀಶರು ಹಾಗೂ ಸಂಘ– ಸಂಸ್ಥೆಗಳ ಪ್ರಮುಖರು ಒತ್ತಾಯಿಸಿದ್ದರು. ಶುಕ್ರವಾರ ಮಂಡಿಸಿದ್ದ ಬಜೆಟ್‌ನಲ್ಲೂ ನಿಗಮಗಳ ಸ್ಥಾಪನೆ ಕುರಿತು ಘೋಷಿಸಿರಲಿಲ್ಲ. ವಿವಿಧ ಸಮುದಾಯಗಳ ಮುಖಂಡರು ನಿಗಮಗಳ ಸ್ಥಾಪನೆಗೆ ಒತ್ತಡ ಹೇರಿದ್ದರು.

ಏಕರೂಪದ ಕಾಯ್ದೆ: ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ವಿವಾಹ, ವಿಚ್ಛೇದನ, ಉತ್ತರಾಧಿಕಾರ, ಜೀವನಾಂಶ ನಿಗದಿ ವಿಷಯಗಳಲ್ಲಿ ಧರ್ಮಾತೀತವಾಗಿ ಮತ್ತು ಲಿಂಗತ್ವವನ್ನು ಪರಿಗಣಿಸದೆ ಏಕರೂಪದ ಕಾಯ್ದೆ ರಚಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡ ಬಹುದೇ ಎಂದು ಸುಪ್ರೀಂ ಕೋರ್ಟ್ ಕೇಳಿದೆ.

‘ಈ ಎಲ್ಲ ವಿಷಯಗಳು ಶಾಸಕಾಂಗದ ಪರಿಮಿತಿಗೆ ಒಳಪಡುತ್ತವೆ. ಕಾಯ್ದೆಯನ್ನು ರೂಪಿಸಬೇಕು ಎಂದು ನಿರ್ದೇಶಿಸಲು ನ್ಯಾಯಾಂಗಕ್ಕೆ ಇರುವ ಅಧಿಕಾರದ ವ್ಯಾಪ್ತಿ ಎಷ್ಟಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿತು.

ಏಕರೂಪದ ಕಾಯ್ದೆಯನ್ನು ರಚಿಸುವಂತೆ ಕೇಂದ್ರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿದ್ದ ಹಲವು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಸೇರಿದಂತೆ ವಿವಿಧ 17 ಅರ್ಜಿಗಳನ್ನು ವಿಚಾರಣೆಗೆ ಪರಿಗಣಿಸುವ ಕುರಿತು ಪೀಠವು ಈ ಪ್ರಶ್ನೆಗಳನ್ನು ಎತ್ತಿತು.

ಶಾಸಕಾಂಗದ ಪರಿಮಿತಿಗೆ ಒಳಪಡುವ ಈ ಎಲ್ಲ ವಿಷಯಗಳಲ್ಲಿ ಕೋರ್ಟ್ ಎಷ್ಟರವರೆಗೆ ಮಧ್ಯ ಪ್ರವೇಶಿಸಬಹುದು ಎಂಬುದೇ ಈಗಿನ ಪ್ರಶ್ನೆಯಾಗಿದೆ ಎಂದು ಅಭಿಪ್ರಾಯ ಪಟ್ಟ ಪೀಠವು, ವಿಚಾರಣೆಯನ್ನು ನಾಲ್ಕು ವಾರ ಕಾಲ ಮುಂದೂಡಿತು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ.ಪಾರ್ದಿವಾಲಾ ಅವರು ಈ ಪೀಠದ ಇತರೆ ಸದಸ್ಯರು. ಈ ವೇಳೆ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ‘ತಾತ್ವಿಕವಾಗಿ ಎಲ್ಲರನ್ನು ಸಮಾನವಾಗಿ ಕಾಣುವ ಧರ್ಮ ಮತ್ತು ಲಿಂಗತ್ವವನ್ನು ತಟಸ್ಥವಾಗಿ ಪರಿಗಣಿಸುವ ಏಕರೂಪದ ಕಾಯ್ದೆ ರೂಪಿಸಲು ಯಾವುದೇ ತಕರಾರು ಇರಲಾರದು’ ಎಂದು ಹೇಳಿದರು.

‘ಆದರೆ, ಈ ವಿಷಯದಲ್ಲಿ ನ್ಯಾಯಾಂಗ ಏನು ಮಾಡಬಹುದು ಎಂಬುದನ್ನು ನ್ಯಾಯಮೂರ್ತಿಗಳೇ ತೀರ್ಮಾನಿಸಬೇಕಾಗಿದೆ’ ಎಂದರು.

ಅರ್ಜಿದಾರರೊಬ್ಬರನ್ನು ಪ್ರತಿನಿಧಿಸಿದ್ದ ವಕೀಲ ಕಪಿಲ್ ಸಿಬಲ್ ಅವರು, ‘ವಕೀಲರಾದ ಅಶ್ವಿನಿ ಉಪಾಧ್ಯಾಯ್ ಅವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ನನ್ನ ತಕರಾರಿದೆ. ಕೋರ್ಟ್‌ಗೆ ಇಂತಹ ಅರ್ಜಿಯನ್ನು ಸಲ್ಲಿಸಬಹುದೇ’ ಎಂದು ಪ್ರಶ್ನಿಸಿದರು.

‘ಲಿಂಗತ್ವ, ಧರ್ಮವನ್ನು ತಟಸ್ಥವಾಗಿ ಪರಿಗಣಿಸುವ ಏಕರೂಪದ ಕಾಯ್ದೆ ರಚಿಸುವುದು ಸರ್ಕಾರದ ವಿವೇಚನೆಗೆ ಬಿಟ್ಟಿದ್ದು. ಈ ಅರ್ಜಿಗಳ ವಿಚಾರಣೆ ನಡೆಸ ಬಹುದು ಎಂಬ ತೀರ್ಮಾನಕ್ಕೆ ಸರ್ಕಾ ರವೇ ಬಂದಲ್ಲಿ ನನ್ನ ತಕರಾರಿಲ್ಲ. ಆದರೆ, ಈ ವಿಷಯವು ಶಾಸಕಾಂಗದ ವ್ಯಾಪ್ತಿಗೆ ಬರುವ ಕಾರಣ ಪೀಠವು ಮೇಲ್ನೋಟದ ಆದೇಶ’ವನ್ನೂ ನೀಡಬಾರದು‘ ಎಂದರು.

ಅಂತಿಮವಾಗಿ, ಅರ್ಜಿದಾರರ ಕೋರಿಕೆಗಳನ್ನು ಪಟ್ಟಿ ಮಾಡಿಕೊಡಿ ಎಂದು ವಕೀಲರಿಗೆ ಪೀಠ ಸೂಚಿಸಿತು.

‘ಕೈ’ ಹಿಡಿದ ಬಿಜೆಪಿ, ಜೆಡಿಎಸ್ ಮಾಜಿ ಶಾಸಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಬಿಜೆಪಿ ಮುಖಂಡ ಕೆ.ಎಸ್. ಕಿರಣ್ ಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ, ಜೆಡಿಎಸ್ ತ್ಯಜಿಸಿ ಬಿಜೆಪಿ ಸೇರಿದ್ದ ಸಂದೇಶ್ ನಾಗರಾಜ್ ಮತ್ತು ತುಮಕೂರು ಗ್ರಾಮೀಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಜೆಡಿಎಸ್‌ನ ಎಚ್. ನಿಂಗಪ್ಪ ಅವರು ಸೋಮವಾರ ಕಾಂಗ್ರೆಸ್ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಸಮ್ಮುಖದಲ್ಲಿ ಈ ಮೂವರೂ ತಮ್ಮ ಬೆಂಬಲಿಗರ ಜೊತೆ ‘ಕೈ’ ಹಿಡಿದರು. ಶಾಸಕ ಜಿ. ಪರಮೇಶ್ವರ, ಮಾಜಿ ಸಂಸದ ಕೆ.ಎಚ್. ಮುನಿಯಪ್ಪ, ಮುಖಂಡರಾದ ಕೆ.ಎನ್. ರಾಜಣ್ಣ ಇದ್ದರು.

ಸಿದ್ದರಾಮಯ್ಯ ಮಾತನಾಡಿ, ‘ರಾಜ್ಯದಲ್ಲಿ ಕಾಂಗ್ರೆಸ್‌ಗೆ ಒಳ್ಳೆಯ ವಾತಾವರಣ ಇದೆ. ಹೀಗಾಗಿ ಹಲವರು ಕಾಂಗ್ರೆಸ್ ಕಡೆ ಮುಖ ಮಾಡುತ್ತಿದ್ದಾರೆ. ಬೇರೆ ಪಕ್ಷಗಳ ಬಹಳ ಜನ ಶಾಸಕರು ಕಾಂಗ್ರೆಸ್ ಸೇರಲಿದ್ದಾರೆ. ಮಂತ್ರಿಯಾಗಿದ್ದ ಕೆಲವರು ಪಕ್ಷ ಸೇರುವ ಸಂಭವ ಇದೆ’ ಎಂದು ಹೇಳಿದರು.

‘ನಾವು ಬಿಜೆಪಿಯವರಂತೆ ಒಳಗೊಂದು ಹೊರಗೊಂದು ಹೇಳುವುದಿಲ್ಲ. ಅವರು ಧರ್ಮ, ಧರ್ಮಗಳ ನಡುವೆ ಬೆಂಕಿ ಹಚ್ಚುವ, ದ್ವೇಷದ ರಾಜಕಾರಣ ಮಾಡುತ್ತಿದ್ದಾರೆ’ ಎಂದರು.

‘ಮೊದಲಿನಿಂದಲೂ ಬಿಜೆಪಿ ಧರ್ಮಗಳ ನಡುವೆ ಒಡಕು ಮೂಡಿಸಿ, ಸಮಾಜದಲ್ಲಿ ಶಾಂತಿ ಕದಡುತ್ತಿದೆ. ಇದರಿಂದ ಬೇಳೆ ಬೇಯಿಸಿಕೊಳ್ಳುತ್ತಿದೆ. ಬಿಜೆಪಿಯವರು ಎಲ್ಲಾ ವರ್ಗಗಳ ವಿರೋಧಿಗಳು’ ಎಂದು ಜಿ. ಪರಮೇಶ್ವರ ಹೇಳಿದರು.

‘ಬಿಜೆಪಿ ಮನಸ್ಸು ಮಾಡಿದರೆ ಕಾಂಗ್ರೆಸ್ ಅರ್ಧ ಖಾಲಿ’

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಬೆಂಗಳೂರು: ಸಚಿವರು, ಬಿಜೆಪಿ ಶಾಸಕರು ಕಾಂಗ್ರೆಸ್ ಸೇರುತ್ತಾರೆ ಎಂಬ ಕಾಂಗ್ರೆಸ್ ನಾಯಕರ ಆಶಯ ಈಡೇರದು. ಬಿಜೆಪಿ ಮನಸ್ಸು ಮಾಡಿದರೆ ಆ ಪಕ್ಷದ ಅರ್ಧದಷ್ಟೂ ಶಾಸಕರು ಉಳಿಯುವುದಿಲ್ಲ. ರಾಜ್ಯದಲ್ಲಿ ಶಾಶ್ವತವಾಗಿ ಬಾಗಿಲು ಮುಚ್ಚುವ ಪರಿಸ್ಥಿತಿ ಕಾಂಗ್ರೆಸ್‌ಗೆ ಬರುತ್ತದೆ ಎಂದು ತೋಟಗಾರಿಕಾ ಸಚಿವ ಮುನಿರತ್ನ ಹೇಳಿದರು.

ಶಾಸಕರ ಅಭಿಪ್ರಾಯಗಳಿಗೆ ಮನ್ನಣೆ ನೀಡದಿದ್ದರೆ ಏನಾಗುತ್ತದೆ ಎನ್ನುವುದು ಈಗಾಗಲೇ ಕಾಂಗ್ರೆಸ್‌ಗೆ ಮನವರಿಕೆಯಾಗಿದೆ. ಆದರೂ, ಪಕ್ಷ ಬಿಟ್ಟು ಹೋದವರು ಮರಳಿ ಬರುತ್ತಾರೆ ಎಂಬ ನಿರೀಕ್ಷೆಯಲ್ಲೇ ಬಾಗಿಲು ತೆರೆದುಕೊಂಡು ಕುಳಿತಿದ್ದಾರೆ. 140 ಕ್ಷೇತ್ರಗಳನ್ನು ಗೆಲ್ಲುವುದಾಗಿ ಘೋಷಣೆ ಮಾಡಿದವರು ಇತರೆ ಪಕ್ಷಗಳ ಶಾಸಕರು, ಮುಖಂಡರನ್ನು ಏಕೆ ನೆಚ್ಚಿಕೊಂಡಿದ್ದಾರೆ. ಶಾಸಕರಲ್ಲ, ಕನಿಷ್ಠ ಬಿಜೆಪಿಯ ಕಾರ್ಯಕರ್ತರನ್ನೂ ಸೆಳೆಯುವ ಶಕ್ತಿ ಅವರಿಗಿಲ್ಲ. ಸುಮ್ಮನೆ ಬುರುಡೆ ಬಿಡುತ್ತಿದ್ದಾರೆ ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

ಸರ್ಕಾರಕ್ಕೆ ಆಡಳಿತ ವಿರೋಧಿ ಅಲೆ ಇಲ್ಲ. ಅದೆಲ್ಲ ವಿರೋಧ ಪಕ್ಷಗಳ ಆರೋಪ. ಸಿದ್ದರಾಮಯ್ಯ ಮತ್ತೆ ಮುಖ್ಯಮಂತ್ರಿ ಆಗಬಾರದು ಎಂದು ಡಿ.ಕೆ.ಶಿವಕುಮಾರ್ ಕಿವಿಗೆ ಹೂವು ಇಟ್ಟುಕೊಂಡು ಪರೋಕ್ಷವಾಗಿ ಬಿಜೆಪಿ ಪರ ಪ್ರಚಾರ ಮಾಡುತ್ತಿದ್ದಾರೆ. ಪಕ್ಷ ವಿರೋಧಿ ಚಟುವಟಿಕೆ ಗೊತ್ತಾಗಬಾರದು ಎಂದೇ ಕಿವಿಗೆ ಕಮಲದ ಬದಲು, ಚೆಂಡು ಹೂವು ಮುಡಿದಿದ್ದಾರೆ ಎಂದು ಅವರು ಹೇಳಿದರು.



ಸಿರಿಯಾ ಮತ್ತು ಟರ್ಕಿಯಲ್ಲಿ ‘ಆಪರೇಷನ್ ದೋಸ್ತ್’ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ ಎನ್‌ಡಿಆರ್‌ಎಫ್ ಸಿಬ್ಬಂದಿ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ನವದೆಹಲಿಯಲ್ಲಿ ಸೋಮವಾರ ಸಂವಾದ ನಡೆಸಿದರು –ಪಿಟಿಐ ಚಿತ್ರ

ಮೇಘಾಲಯ ಕ್ರೀಡಾಂಗಣದಲ್ಲಿ ಮೋದಿ ರ‍್ಯಾಲಿಗಿಲ್ಲ ಅನುಮತಿ

ತುರಾ (ಪಿಟಿಐ): ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಕೆ. ಸಾಂಗ್ಮಾ ಅವರ ಸ್ವಕ್ಷೇತ್ರ ದಕ್ಷಿಣ ತುರಾದಲ್ಲಿನ ಪಿ.ಎ. ಸಂಗ್ಮಾ ಕ್ರೀಡಾಂಗಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಚುನಾವಣಾ ರ‍್ಯಾಲಿ ಆಯೋಜಿಸಲು ಬಿಜೆಪಿಗೆ ಕ್ರೀಡಾ ಇಲಾಖೆಯು ಅನುಮತಿ ನಿರಾಕರಿಸಿದೆ.

ನಿರ್ಮಾಣ ಕಾಮಗಾರಿ ನೆಪವಾಗಿಸಿ ಅನುಮತಿ ನಿರಾಕರಿಸಿರುವುದಕ್ಕೆ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಕಿಡಿಕಾರಿದೆ.

ಉದ್ಘಾಟನೆಯಾದ ಕೇವಲ ಎರಡು ತಿಂಗಳಲ್ಲೇ ಪ್ರಧಾನಿಯವರ ರ‍್ಯಾಲಿಗೆ ಕ್ರೀಡಾಂಗಣ ‘ಅಪೂರ್ಣ ಮತ್ತು ಲಭ್ಯವಿಲ್ಲ’ವೆಂದು ಹೇಗೆ ಘೋಷಿಸಬಹುದು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಿತುರಾಜ್ ಸಿನ್ಹಾ ಅವರು ಪ್ರಶ್ನಿಸಿದ್ದಾರೆ.

₹127 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಕ್ರೀಡಾಂಗಣವನ್ನು ಕಳೆದ ವರ್ಷ ಡಿಸೆಂಬರ್ 16ರಂದು ಮುಖ್ಯಮಂತ್ರಿ ಉದ್ಘಾಟಿಸಿದ್ದರು.

‘ಕ್ರೀಡಾಂಗಣದಲ್ಲಿ ನಿರ್ಮಾಣ ಕೆಲಸಗಳು ಇನ್ನೂ ನಡೆಯುತ್ತಿದ್ದು, ನಿರ್ಮಾಣ ಸಾಮಗ್ರಿಗಳೂ ಸ್ಥಳದಲ್ಲೇ ಇವೆ. ಸುರಕ್ಷತೆಯ ದೃಷ್ಟಿಯಲ್ಲಿ ಕ್ರೀಡಾಂಗಣವು ಅಷ್ಟೊಂದು ದೊಡ್ಡ ರ‍್ಯಾಲಿಗೆ ಸೂಕ್ತವಾಗಿಲ್ಲವೆಂದು ಕ್ರೀಡಾ ಇಲಾಖೆ ಮಾಹಿತಿ ನೀಡಿದೆ. ಪರ್ಯಾಯ ಸ್ಥಳವಾಗಿ ಅಲೋಟ್ರೆ ಕ್ರಿಕೆಟ್ ಕ್ರೀಡಾಂಗಣವನ್ನು ಪರಿಗಣಿಸಲಾಗುತ್ತಿದೆ’ ಎಂದು ಜಿಲ್ಲಾ ಚುನಾವಣಾ ಅಧಿಕಾರಿ ಸ್ವಪ್ನಿಲ್ ತೆಂಬೆ ತಿಳಿಸಿದರು.

ಇದೇ 24 ರಂದು ಶಿಲ್ಲಾಂಗ್ ಮತ್ತು ತುರಾದಲ್ಲಿ ಪ್ರಧಾನಿ ಮೋದಿ ಅವರು ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲು ವೇಳಾಪಟ್ಟಿ ನಿಗದಿಯಾಗಿತ್ತು. ಅಂದು ಪಿಂಥೋರುಮ್ ಕ್ರಾಹ್ ಕ್ಷೇತ್ರದಲ್ಲಿ ಮೋದಿ ರೋಡ್ ಶೋ ನಡೆಸಲಿದ್ದಾರೆ ಎಂದು ಬಿಜೆಪಿ ಹಿರಿಯ ನಾಯಕ ಎ.ಎಲ್. ಹೆಕ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ದಾಭೋಲ್ಕರ್ ಹತ್ಯೆ: ಅಂತಿಮ ವರದಿ ನಿರ್ಧಾರಕ್ಕೆ ಗಡುವು

ಮುಂಬೈ (ಪಿಟಿಐ): ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ (2013) ಪ್ರಕರಣದ ತನಿಖೆಯ ಅಂತಿಮ ವರದಿಯನ್ನು ನಿರ್ಧರಿಸಲು ಬಾಂಬೆ ಹೈಕೋರ್ಟ್ ಸಿಬಿಐಗೆ ನಾಲ್ಕು ವಾರಗಳ ಕಾಲಾವಕಾಶ ನೀಡಿದೆ.

‘ಈ ಪ್ರಕರಣದಲ್ಲಿ ತನಿಖೆ ಪೂರ್ಣಗೊಂಡಿದೆ ಮತ್ತು ತನಿಖಾಧಿಕಾರಿಯು ಕೊನೆಯ ವರದಿಯನ್ನು ಅನುಮೋದನೆಗಾಗಿ ತನಿಖಾ ಸಂಸ್ಥೆಯ ಮುಖ್ಯ ಕಚೇರಿಗೆ ಕಳುಹಿಸಿದ್ದಾರೆ’ ಎಂದು ಸಿಬಿಐ ಜನವರಿ 30ರಂದು ಹೈಕೋರ್ಟ್‌ಗೆ ಮಾಹಿತಿ ನೀಡಿತ್ತು.

ಸಿಬಿಐ ಪರ ಸೋಮವಾರ ಹಾಜರಾಗಿದ್ದ ವಕೀಲ ಸಂದೇಶ್ ಪಾಟೀಲ್ ಅವರು, ‘ಅಂತಿಮ ವರದಿಯ ಅನುಮೋದನೆಗೆ ಸಂಬಂಧಿಸಿದ ಸ್ಪಷ್ಟ ಚಿತ್ರಣ ದೊರೆಯಲು ಇನ್ನಷ್ಟು ಕಾಲಾವಕಾಶ ಬೇಕಿದೆ’ ಎಂದು ನ್ಯಾಯಮೂರ್ತಿಗಳಾದ ಎ.ಎಸ್.ಗಡ್ಕರಿ ಮತ್ತು ಪಿ.ಡಿ. ನಾಯಕ್ ಅವರಿದ್ದ ವಿಭಾಗೀಯ ಪೀಠಕ್ಕೆ ಕೋರಿದರು.

ಜೋಶಿಮಠ ಬದರೀನಾಥ ನಡುವೆ ಬಿರುಕು

ಗೋಪೇಶ್ವರ (ಉತ್ತರಾಖಂಡ): ಚಾರ್ ಧಾಮ್ ಯಾತ್ರೆಗೆ ಸಿದ್ಧತೆ ನಡೆಯುತ್ತಿದ್ದು, ಇಲ್ಲಿನ ನರಸಿಂಗ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ಜೋಶಿಮಠ ಮತ್ತು ಬದರೀನಾಥ ನಡುವಿನ ರಸ್ತೆಯಲ್ಲಿ ಹೊಸದಾಗಿ ಬಿರುಕುಗಳು ಕಾಣಿಸಿಕೊಂಡಿವೆ ಎಂದು ಸ್ಥಳೀಯರು ಸೋಮವಾರ ಮಾಹಿತಿ ನೀಡಿದ್ದಾರೆ.

ಬದರೀನಾಥ ಹೆದ್ದಾರಿಯ ಈ ಉಪರಸ್ತೆಯನ್ನು ಯಾತ್ರೆಯ ಸಮಯದಲ್ಲಿ ಜೋಶಿಮಠದಿಂದ ಬದರೀನಾಥಕ್ಕೆ ಯಾತ್ರಾರ್ಥಿಗಳನ್ನು ಕರೆದೊಯ್ಯಲು ಬಳಸಲಾಗುತ್ತದೆ.

‘ಮೂರು ದಿನಗಳ ಹಿಂದೆ ಈ ಮಾರ್ಗದ ರಸ್ತೆಯಲ್ಲಿ ಹೊಸದಾಗಿ ಬಿರುಕುಗಳು ಕಾಣಿಸಿಕೊಂಡಿವೆ’ ಎಂದು ಜೋಶಿಮಠ ಬಚಾವೋ ಸಂಘರ್ಷ ಸಮಿತಿ (ಜೆಬಿಎಸ್‌ಎಸ್) ವಕ್ತಾರ ಕಮಲ್ ರಾತುರಿ ತಿಳಿಸಿದ್ದಾರೆ.

ಈ ರಸ್ತೆಯನ್ನು ಉತ್ತರಾಖಂಡ ಸರ್ಕಾರದ ಲೋಕೋಪಯೋಗಿ ಇಲಾಖೆಯು ನಿರ್ವಹಿಸುತ್ತಿದೆ.

26ಕ್ಕೆ ಹಾಜರಾಗಲು ಸಿಸೋಡಿಯಾಗೆ ಸಿಬಿಐ ನೋಟಿಸ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣ ಸಂಬಂಧ ದೆಹಲಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರಿಗೆ ಫೆಬ್ರುವರಿ 26ಕ್ಕೆ ತನಿಖೆಗೆ ಹಾಜರಾಗುವಂತೆ ಸಿಬಿಐ ಸೋಮವಾರ ನೋಟಿಸ್ ನೀಡಿದೆ.

ಇದಕ್ಕೂ ಮೊದಲು, ಫೆ.19 (ಭಾನುವಾರ) ತನಿಖೆಗೆ ಹಾಜರಾಗುವಂತೆ ಸಿಸೋಡಿಯಾ ಅವರಿಗೆ ಸಿಬಿಐ ಸೂಚಿಸಿತ್ತು. ಆದರೆ, ಬಜೆಟ್ ಸಿದ್ಧತೆ ಇರುವುದರಿಂದ ಬೇರೊಂದು ದಿನಾಂಕ ನೀಡುವಂತೆ ದೆಹಲಿಯ ಹಣಕಾಸು ಸಚಿವರೂ ಆಗಿರುವ ಸಿಸೋಡಿಯಾ ಅವರು ಸಿಬಿಐಗೆ ಮನವಿ ಮಾಡಿದ್ದರು. ಈ ಮನವಿಯನ್ನು ಸಿಬಿಐ ಮಾನ್ಯ ಮಾಡಿತ್ತು. ‘26ರಂದು ತನಿಖೆಗೆ ಹಾಜರಾ ಗುತ್ತೇನೆ’ ಎಂದು ಸಿಸೋಡಿಯಾ ಹೇಳಿದರು.

ಅರ್ಜಿ ತಳ್ಳಿಹಾಕಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಪುರುಷ ಹಾಗೂ ಮಹಿಳೆಯರ ಮದುವೆಯ ಕನಿಷ್ಠ ವಯಸ್ಸು ಒಂದೇ ಇರಬೇಕು ಎಂದು ಕೋರಿ ವಕೀಲ ಅಶ್ವಿನಿ ಉಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ತಳ್ಳಿಹಾಕಿದೆ. ‘ನ್ಯಾಯಾಲಯವು ಕಾನೂನು ರೂಪಿಸಲು ಸಾಧ್ಯವಿಲ್ಲ. ಈ ಕೆಲಸವನ್ನು ಸಂಸತ್ತು ಮಾಡಬೇಕು’ ಎಂದು ಅಭಿಪ್ರಾಯಪಟ್ಟಿದೆ.

‘ಕಾನೂನು ರೂಪಿಸುವಂತೆ ಸಂಸತ್ತಿಗೆ ನ್ಯಾಯಾಲಯವು ಆದೇಶ ನೀಡಲು ಸಾಧ್ಯವಿಲ್ಲ’ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಜೆ.ಬಿ. ಪಾರ್ದೀವಾಲ ಅವರಿದ್ದ ಪೀಠವು ಹೇಳಿತು.

ಜೆಡಿಯು ತೊರೆದ ಉಪೇಂದ್ರ ಕುಶ್ವಾಹ

ಪಟ್ನಾ: ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುವುದಾಗಿ ಜೆಡಿಯು ಮುಖಂಡ ಉಪೇಂದ್ರ ಕುಶ್ವಾಹ ಅವರು ಸೋಮವಾರ ಹೇಳಿದ್ದು, ನೂತನ ಪಕ್ಷ ‘ರಾಷ್ಟ್ರೀಯ ಲೋಕ ಜನತಾ ದಳ’ ರಚಿಸಿರುವುದಾಗಿ ಘೋಷಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನ ಪರಿಷತ್ ಸಭಾಪತಿಯನ್ನು ಭೇಟಿಯಾಗಿ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸುವುದಾಗಿ ಹೇಳಿದ್ದಾರೆ.

‘ನಿತೀಶ್ ಕುಮಾರ್ ಅವರು ತನ್ನ ರಾಜಕೀಯ ಬಂಡವಾಳವನ್ನು ‘ಗಿರವಿ’ ಇಟ್ಟಿದ್ದಾರೆ ಎಂದು ಆರೋಪಿಸಿದ ಕುಶ್ವಾಹ, ಉಪಮುಖ್ಯಮಂತ್ರಿ ಹಾಗೂ ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರನ್ನು ಭವಿಷ್ಯದ ನಾಯಕ ಎಂದು ಘೋಷಿಸಿರುವುದಕ್ಕೆ ಅವರ ಹೆಸರು ಉಲ್ಲೇಖಿಸದೆ ಅಸಮಾಧಾನ ವ್ಯಕ್ತಪಡಿಸಿದರು. 2021ರಲ್ಲಿ ಜೆಡಿಯುಗೆ ಮರಳಿದ್ದ ಕುಶ್ವಾಹ ಅವರು, ತಮ್ಮ ರಾಷ್ಟ್ರೀಯ ಲೋಕ ಸಮತಾ ಪಕ್ಷವನ್ನು ಅದರೊಂದಿಗೆ ವಿಲೀನಗೊಳಿಸಿದ್ದರು.

ಸಿಪಿಐ: 5 ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ತಯಾರಿ ನಡೆಸಿರುವ ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ) 7 ಕ್ಷೇತ್ರಗಳ ಪೈಕಿ 5 ಕ್ಷೇತ್ರಗಳ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ, ‘ಮೌಲಮುಲ್ಲ (ಆಳಂದ), ಮಹೇಶ್ ಕುಮಾರ್ ರಾಥೋಡ್ (ಜೇವರ್ಗಿ), ವೀರಣ್ಣ ಎಚ್. (ಕೂಡ್ಲಗಿ), ಗಿರೀಶ್ (ಶಿರಾ), ಜ್ಯೋತಿ ಬಸು (ಕೆಜಿಎಫ್) ವಿಧಾನಸಭೆಯ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಲಿದ್ದಾರೆ. ಚಿಕ್ಕಮಗಳೂರು ಮತ್ತು ಮೂಡಿಗೆರೆ ಅಭ್ಯರ್ಥಿಗಳನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು’ ಎಂದು ಮಾಹಿತಿ ನೀಡಿದರು.

ಸದ್ಯ ವಿಧಾನಸಭೆಗೆ ಬಂಡವಾಳಶಾಹಿಗಳ, ಕಾರ್ಪೊರೇಟ್ ಸಂಸ್ಥೆಗಳ ಪರವಾದ, ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರದ ವ್ಯಾಪಾರಿಗಳು ಗೆದ್ದು ಬರುತ್ತಿರುವುದು ಅಪಾಯಕಾರಿ ಬೆಳವಣಿಗೆಯಾಗಿದೆ. ಭ್ರಷ್ಟಾಚಾರ ಮುಗಿಲು ಮುಟ್ಟಿದೆ. ರಾಜ್ಯದ ಜನರ ನೆಮ್ಮದಿ–ಶಾಂತಿ ಕೆಡಿಸುವ ಮತೀಯ ಸಂಘರ್ಷ ಉಂಟು ಮಾಡಿ ಚುನಾವಣೆ ಗೆಲ್ಲುವ ಮೂಲಕ ವಿಧಾನಸಭೆಯೊಳಗೆ ಇಂದು ಮೌಲ್ಯಾಧಾರಿತ, ಜನಪರ ಹೋರಾಟಗಾರರು ಕಡಿಮೆಯಾಗುತ್ತಿದ್ದಾರೆ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ರಾಜಕೀಯವಾಗಿ ಸ್ಮಶಾನಕ್ಕೆ ಕಳಿಸಿ: ಸಿ.ಟಿ.ರವಿ

‘ಕುಂಕುಮ ಇಟ್ಟವರನ್ನು ಕಂಡರೆ ಭಯ ಪಡುವ, ಕೇಸರಿ ಬಣ್ಣ ಕಂಡರೆ ಸಿಟ್ಟಿಗೇಳುವ ವ್ಯಕ್ತಿ (ಸಿದ್ದರಾಮಯ್ಯ) ಸಾರ್ವಜನಿಕವಾಗಿ ‘ನಾನು ಹಿಂದೂ, ಆದರೆ ಹಿಂದುತ್ವವಾದಿಯಲ್ಲ’ ಎಂದು ಹೇಳಿಕೊಳ್ಳುತ್ತಾರೆ. ಹಿಂದೂ ಎಂದರೆ ದೇಹ, ಹಿಂದುತ್ವ ಎಂದರೆ ಜೀವ. ದೇಹದೊಳಗೆ ಜೀವ ಇಲ್ಲದಿದ್ದರೆ ಹೆಣಕ್ಕೆ ಸಮಾನ. ದೇಹವಿದ್ದು ಜೀವ ಇಲ್ಲದಿರುವ ಕಾಂಗ್ರೆಸ್ ಪಕ್ಷವನ್ನು ರಾಜಕೀಯವಾಗಿ ಅಂತ್ಯ ಸಂಸ್ಕಾರ ಮಾಡಿ, ಸ್ಮಶಾನಕ್ಕೆ ಕಳಿಸಬೇಕು’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಬೂತ್ ಮಟ್ಟದ ಸಮಾವೇಶದಲ್ಲಿ ಕರೆ ನೀಡಿದರು.

ಛತ್ತೀಸಗಢ: ಇ.ಡಿ ಶೋಧ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಲ್ಲಿದ್ದಲು ತೆರಿಗೆ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ಕಾಂಗ್ರೆಸ್ ಮುಖಂಡರಿಗೆ ಸೇರಿದ ಸ್ಥಳಗಳು ಒಳಗೊಂಡಂತೆ ಛತ್ತೀಸಗಢದ ವಿವಿಧೆಡೆ ಸೋಮವಾರ ಶೋಧ ಕಾರ್ಯಾಚರಣೆ ನಡೆಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಪ್ರಧಾನಿ ನರೇಂದ್ರ ಮೋದಿ ಅವರ ‘ಮೂರನೇ ದರ್ಜೆ’ಯ ರಾಜಕೀಯಕ್ಕೆ ಹೆದರುವುದಿಲ್ಲ ಎಂದಿದೆ.

ಕಾಂಗ್ರೆಸ್ ಶಾಸಕ ದೇವೇಂದ್ರ ಯಾದವ್, ಛತ್ತೀಸಗಢ ಕಾಂಗ್ರೆಸ್ ಕೋಶಾಧಿಕಾರಿ ರಾಮ್‌ಗೋಪಾಲ್ ಅಗರ್‌ವಾಲ್, ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಅಧ್ಯಕ್ಷ ಸುಶೀಲ್ ಸನ್ನಿ ಅಗರ್‌ವಾಲ್ ಮತ್ತು ರಾಜ್ಯ ಕಾಂಗ್ರೆಸ್ ವಕ್ತಾರ ಆರ್.ಪಿ. ಸಿಂಗ್ ಅವರಿಗೆ ಸೇರಿದ ರಾಯಪುರದಲ್ಲಿರುವ ಮನೆ ಮತ್ತು ಸ್ಥಳಗಳಲ್ಲಿ ಹಾಗೂ ಇತರೆಡೆಗಳಲ್ಲಿ ಶೋಧ ಕಾರ್ಯ ನಡೆಸಿದ್ದೇವೆ ಎಂದು ಇ.ಡಿ. ಅಧಿಕಾರಿಗಳು ತಿಳಿಸಿದ್ದಾರೆ. ಕಲ್ಲಿದ್ದಲು ತೆರಿಗೆ ಹಗರಣದ ‘ಫಲಾನುಭವಿಗಳ’ ಕುರಿತು ತನಿಖೆ ನಡೆಸುತ್ತಿದ್ದೇವೆ ಎಂದೂ ವಿವರಿಸಿದ್ದಾರೆ.

‘ಇ.ಡಿ. ಶೋಧದ ಮೂಲಕ ಕಾಂಗ್ರೆಸ್ ಅನ್ನು ಹೆದರಿಸಲಾಗದು’ ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹೇಳಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಇದು ಅಮೃತ ಕಾಲವಲ್ಲ ಅಘೋಷಿತ ತುರ್ತು ಪರಿಸ್ಥಿತಿ ’ ಎಂದಿದ್ದಾರೆ, ಇ.ಡಿ. ಎಂದರೆ ಪ್ರಜಾಪ್ರಭುತ್ವವನ್ನು ನಿರ್ಮೂಲನೆ ಮಾಡುವುದು ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಬಣ್ಣಿಸಿದ್ದಾರೆ.

‘ಎಲ್ಲ ಮಾತುಗಳು ದ್ವೇಷ ಭಾಷಣವಲ್ಲ’

ನವದೆಹಲಿ: ‘ಮಾತನಾಡಿದ ಎಲ್ಲವೂ ದ್ವೇಷ ಭಾಷಣ ಎಂದು ಪರಿಗಣಿಸಲಾಗದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ದ್ವೇಷ ಭಾಷಣವನ್ನು ಕುರಿತ ವಿವಿಧ ಅರ್ಜಿಗಳ ವಿಚಾರಣೆಯ ವೇಳೆ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್, ಬಿ.ವಿ.ನಾಗರತ್ನ ಅವರಿದ್ದ ಪೀಠ ಈ ಮಾತು ಹೇಳಿತು.

‘ನಮಗೆ ದ್ವೇಷ ಎಂಬುದು ಸಾಮಾನ್ಯ ವೈರಿ. ಅದಷ್ಟೇ ನಿಜ. ನಿಮ್ಮ ಮನಸ್ಸುಗಳಿಂದ ಮೊದಲು ದ್ವೇಷವನ್ನು ತೆಗೆಯಿರಿ. ಅ ನಂತರ ಬದಲಾವಣೆಯನ್ನು ಗಮನಿಸಿ’ ಎಂದು ಪೀಠ ಹೇಳಿತು.

ಮುಂಬೈನಲ್ಲಿ ನಡೆದಿದ್ದ ಸಕಾಳ್ ಹಿಂದೂ ಸಮಾಜ್ ರ‍್ಯಾಲಿಯಲ್ಲಿ ದ್ವೇಷ ಭಾಷಣ ಮಾಡಲಾಗಿದೆ ಎಂದು ಕೇರಳದ ನಿವಾಸಿ ಶಹೀನ್ ಅಬ್ದುಲ್ಲಾ ಅವರು ಸಲ್ಲಿಸಿದ್ದರು. ಆದರೆ, ಅಲ್ಲಿ ದ್ವೇಷ ಭಾಷಣ ಮಾಡಲಾಗಿಲ್ಲ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು.

ರಾಜ್ಯಸಭೆ: 12 ಸಂಸದರ ವಿರುದ್ಧ ತನಿಖೆಗೆ ಸೂಚನೆ

ನವದೆಹಲಿ (ಪಿಟಿಐ): ಪದೇ ಪದೇ ಪೀಠದ ಮುಂದೆ ಬಂದು ಘೋಷಣೆಗಳನ್ನು ಕೂಗಿ ರಾಜ್ಯಸಭೆಯ ಕಲಾಪಕ್ಕೆ ಅಡ್ಡಿಪಡಿಸಿದ್ದಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್‌ನ 9 ಮತ್ತು ಎಎಪಿಯ ಮೂವರು ಸಂಸದರ ವಿರುದ್ಧ ತನಿಖೆ ನಡೆಸುವಂತೆ ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಸಂಸತ್ತಿನ ಹಕ್ಕು ಬಾಧ್ಯತಾ ಸಮಿತಿಗೆ ಸೂಚಿಸಿದ್ದಾರೆ.

ಈ ಸಂಸದರು ರಾಜ್ಯಸಭೆಯ ಶಿಷ್ಟಾಚಾರವನ್ನು ಉಲ್ಲಂಘಿಸಿ ಕಲಾಪಕ್ಕೆ ಅಡ್ಡಿಪಡಿಸಿದ್ದರಿಂದ, ಪದೇ ಪದೇ ಕಲಾಪ ಮುಂದೂಡುವಂತಾಯಿತು. ಹೀಗಾಗಿ ತನಿಖೆ ನಡೆಸುವಂತೆ ಸಭಾಪತಿ ಸೂಚನೆ ನೀಡಿದ್ದಾರೆ ಎಂದು ರಾಜ್ಯಸಭೆಯ ಬುಲೆಟಿನ್ ಹೇಳಿದೆ. ಕಾಂಗ್ರೆಸ್‌ನ ಸಂಸದರಾದ ಎಲ್. ಹನುಮಂತಯ್ಯ, ಶಕ್ತಿ ಸಿನ್ಹ ಗೋಹಿಲ್, ನರನ್‌ಭಾಯ್ ಜೆ ರಥ್ವಾ, ಸೈಯದ್ ನಾಸಿರ್ ಹುಸೇನ್, ಕುಮಾರ್ ಕೇತ್ಕರ್, ಇಮ್ರಾನ್ ಪ್ರಾತಾಪ್‌ಗರ್ಹಿ, ಫುಲೊ ದೇವಿ ನೇತಮ್, ಜೆಬಿ ಮಾಥ್ ಹಿಶಾಮ್, ರಂಜಿತ್ ರಂಜನ್ ಹಾಗೂ ಎಎಪಿಯ ಸಂಜಯ್ ಸಿಂಗ್, ಸುಶಿಲ್ ಕುಮಾರ್ ಗುಪ್ತಾ ಮತ್ತು ಸಂದೀಪ್ ಕುಮಾರ್ ಪಾಠಕ್ ವಿರುದ್ಧ ತನಿಖೆಗೆ ಸೂಚಿಸಲಾಗಿದೆ.

ಮೊರ್ಬಿ ಸೇತುವೆ ದುರಂತ: ಎಸ್‌ಐಟಿ ವರದಿ

ತುಕ್ಕು ಹಿಡಿದ ಹಳೆ ತಂತಿ ಬೆಸುಗೆ ಕಾರಣ

ಮೊರ್ಬಿ/ಅಹಮದಾಬಾದ್ (ಪಿಟಿಐ): 136 ಜನರ ಬಲಿ ತೆಗೆದುಕೊಂಡ ಮೊರ್ಬಿ ತೂಗು ಸೇತುವೆ ದುರಂತಕ್ಕೂ ಮೊದಲೇ, ಸೇತುವೆಯ ಕೇಬಲ್‌ನಲ್ಲಿ ಅರ್ಧದಷ್ಟು ತಂತಿಗಳು ತುಕ್ಕು ಹಿಡಿದಿರುವುದು, ದುರಸ್ತಿಯಲ್ಲಿ ಹಳೆ ತಂತಿಗಳನ್ನು ಬೆಸುಗೆ ಹಾಕಿರುವುದು ಸೇರಿ ಹಲವು ದೋಷಗಳನ್ನು ವಿಶೇಷ ತನಿಖಾ ತಂಡ (ಎಸ್‌ಐಟಿ) ಪ್ರಾಥಮಿಕ ತನಿಖೆಯಲ್ಲಿ ಪತ್ತೆ ಮಾಡಿದೆ.

ಎಸ್‌ಐಟಿಯು 2022ರ ಡಿಸೆಂಬರ್‌ನಲ್ಲಿ ಸಲ್ಲಿಸಿರುವ ಪ್ರಾಥಮಿಕ ವರದಿಯನ್ನು ನಗರಾಭಿವೃದ್ಧಿ ಇಲಾಖೆ ಇತ್ತೀಚೆಗೆ ಮೊರ್ಬಿ ಪುರಸಭೆ ಜತೆ ಹಂಚಿಕೊಂಡಿದೆ.

ಸೇತುವೆ ನಿರ್ವಹಿಸುತ್ತಿದ್ದ ಅಜಂತಾ ಮ್ಯಾನ್ಯುಫ್ಯಾಕ್ಚರಿಂಗ್ ಲಿಮಿಟೆಡ್ ಈ ದುರಂತಕ್ಕೆ ಹೊಣೆ. ಮರದ ಹಲಗೆ ತೆಗೆದು ಅಲ್ಯುಮಿನಿಯಂ ಹಲಗೆ ಅಳವಡಿಸಿ ಸೇತುವೆ ಭಾರ ಹೆಚ್ಚಿಸಿರುವುದು, ಹೆಚ್ಚು ಜನರು ಸೇತುವೆಯಲ್ಲಿ ಸೇರಿದ್ದೂ ಕುಸಿತಕ್ಕೆ ಕಾರಣವಾಗಿದೆ ಎಂದು ಎಸ್‌ಐಟಿ ಹೇಳಿದೆ.

ಮಚ್ಚು ನದಿಗೆ ಬ್ರಿಟಿಷ್ ಆಡಳಿತದಲ್ಲಿ ನಿರ್ಮಿಸಿದ ಈ ಸೇತುವೆ ಎರಡು ಕೇಬಲ್‌ಗಳ ಬಲದಲ್ಲಿ ನಿಂತಿತ್ತು. 2022ರ ಅ.30ರಂದು ಸಂಜೆ ಕುಸಿದಿತ್ತು. ತನಿಖೆಗೆ ಗುಜರಾತ್ ಸರ್ಕಾರ ಎಸ್‌ಐಟಿ ರಚಿಸಿತ್ತು.

ಸೇತುವೆ ನಿರ್ವಹಣೆಗೆ ಏಕರೂಪ ನೀತಿ: ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸೇತುವೆಗಳ ನಿರ್ವಹಣೆಗೆ ಶೀಘ್ರ ಏಕರೂಪ ನೀತಿ ಜಾರಿಗೆ ತರಲಾಗುವುದು ಎಂದು ಗುಜರಾತ್ ಸರ್ಕಾರ ಸೋಮವಾರ ಹೈಕೋರ್ಟ್‌ಗೆ ತಿಳಿಸಿದೆ. ಮೊರ್ಬಿ ಸೇತುವೆ ದುರಂತದ ಬಗ್ಗೆ ಸ್ವಯಂ ಪ್ರೇರಿತ ಪಿಐಎಲ್ ವಿಚಾರಣೆ ವೇಳೆ, ಅಡ್ವೊಕೇಟ್ ಜನರಲ್ ಕಮಲ್ ತ್ರಿವೇದಿ ಸರ್ಕಾರದ ನಿರ್ಧಾರ ತಿಳಿಸಿದರು. ಮುಂದಿನ ವಿಚಾರಣೆಯನ್ನು ವಿಭಾಗೀಯ ಪೀಠವು ಮಂಗಳವಾರಕ್ಕೆ ನಿಗದಿಪಡಿಸಿತು.


ನಿಶಾಂತ್ ದೇವ್– ಟ್ವಿಟರ್ ಚಿತ್ರ

ಬಾಕ್ಸಿಂಗ್: ನಿಶಾಂತ್ ಶುಭಾರಂಭ

ಸೋಫಿಯ, ಬಲ್ಗೇರಿಯಾ (ಪಿಟಿಐ): ಭಾರತದ ನಿಶಾಂತ್ ದೇವ್ ಅವರು ಇಲ್ಲಿ ನಡೆಯುತ್ತಿರುವ ಸ್ಟ್ರಾಂಜ ಮೆಮೋರಿಯಲ್ ಅಂತರರಾಷ್ಟ್ರೀಯ ಬಾಕ್ಸಿಂಗ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಸೋಮವಾರ ನಡೆದ 71 ಕೆ.ಜಿ. ವಿಭಾಗದ ಮೊದಲ ಸುತ್ತಿನ ಹಣಾ ಹಣಿಯಲ್ಲಿ ನಿಶಾಂತ್ 5–0 ರಲ್ಲಿ ಚೀನಾದ ವಾಂಗ್ ಪೀಚೆಂಗ್ ಅವರನ್ನು ಮಣಿಸಿದರು. ಆರಂಭದಿಂದಲೇ ಮಿಂಚಿನ ಪಂಚ್‌ಗಳ ಮೂಲಕ ಎದುರಾಳಿಯನ್ನು ಕಂಗೆಡಿಸುವಲ್ಲಿ ಭಾರತದ ಬಾಕ್ಸರ್ ಯಶಸ್ವಿಯಾದರು.

ಮಂಗಳವಾರ ನಡೆಯಲಿರುವ 16ರ ಸುತ್ತಿನ ಸ್ಪರ್ಧೆಯಲ್ಲಿ ಅವರು ಐರ್ಲೆಂಡ್‌ನ ಏಡನ್ ವಾಲ್ಶ್ ವಿರುದ್ಧ ಪೈಪೋಟಿ ನಡೆಸುವರು.

ಮಹಿಳೆಯರ 54 ಕೆ.ಜಿ. ವಿಭಾಗದ ಮೊದಲ ಸುತ್ತಿನ ಸ್ಪರ್ಧೆಯಲ್ಲಿ ಸುನಿತಾ ಅವರು 0–5 ರಲ್ಲಿ ಅಮೆರಿಕದ ಪೆಟ್ರಿಸಿಯೊ ಶೆರಾ ಕೈಯಲ್ಲಿ ಪರಾಭವಗೊಂಡರು.

ಸ್ಮೃತಿ ಮಿಂಚು: ಸೆಮಿಗೆ ಭಾರತ

ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ: ಐರ್ಲೆಂಡ್ ವಿರುದ್ಧ ಗೆಲುವು

ಗೆಬೆಹಾ, ದಕ್ಷಿಣ ಆಫ್ರಿಕಾ (ಪಿಟಿಐ): ಸ್ಮೃತಿ ಮಂದಾನ ಅವರ ಬಿರುಸಿನ ಅರ್ಧಶತಕದ ನೆರವಿನಿಂದ ಭಾರತ ತಂಡ, ಐಸಿಸಿ ಮಹಿಳಾ ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿತು.

ಸೇಂಟ್ ಜಾರ್ಜ್ ಪಾರ್ಕ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ 'ಗುಂಪು 2'ರ ಕೊನೆಯ ಲೀಗ್ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗ ಡಕ್ವರ್ಥ್ ಲೂಯಿಸ್ ನಿಯಮದಂತೆ ಐರ್ಲೆಂಡ್ ತಂಡವನ್ನು ಐದು ರನ್‌ಗಳಿಂದ ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 155 ರನ್ ಪೇರಿಸಿದರೆ, ಐರ್ಲೆಂಡ್ 8.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 54 ರನ್ ಗಳಿಸಿದ್ದಾಗ ಮಳೆ ಸುರಿದು ಆಟ ನಿಲ್ಲಿಸಲಾಯಿತು. ಡಕ್ವರ್ಥ್ ಲೂಯಿಸ್ ನಿಯಮದಂತೆ ಐರ್ಲೆಂಡ್ ಈ ವೇಳೆ ಐದು ರನ್‌ಗಳಿಂದ ಹಿಂದಿತ್ತು.

ಆರಂಭಿಕ ಬ್ಯಾಟರ್ ಸ್ಮೃತಿ 56 ಎಸೆತಗಳಲ್ಲಿ 87 ರನ್ ಗಳಿಸಿ ಮಿಂಚಿದರು. ಐರ್ಲೆಂಡ್ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಅವರು 9 ಬೌಂಡರಿ ಮತ್ತು 3 ಸಿಕ್ಸರ್ ಹೊಡೆದರು.

ಸೆಮಿಫೈನಲ್ ಪ್ರವೇಶಿಸಲು ಭಾರತ ತಂಡಕ್ಕೆ ಈ ಪಂದ್ಯದಲ್ಲಿ ಗೆಲುವು ಅನಿವಾರ್ಯವಾಗಿತ್ತು. ತಲಾ ಆರು ಪಾಯಿಂಟ್ಸ್ ಗಳಿಸಿದ ಇಂಗ್ಲೆಂಡ್ ಮತ್ತು ಭಾರತ ತಂಡಗಳು 'ಗುಂಪು 2' ರಿಂದ ನಾಲ್ಕರಘಟ್ಟ ಪ್ರವೇಶಿಸಿದವು.


ಸ್ಮೃತಿ ಮಂದಾನ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಉತ್ತಮ ಆರಂಭ: ಟಾಸ್ ಗೆದ್ದ ಹರ್ಮನ್ ಅವರು ಮೊದಲು ಬ್ಯಾಟ್ ಮಾಡಲು ನಿರ್ಧರಿಸಿದರು. ಸ್ಮೃತಿ ಹಾಗೂ ಶಫಾಲಿ ವರ್ಮಾ (24 ರನ್, 29 ಎ.) ಮೊದಲ ವಿಕೆಟ್‌ಗೆ 9.3 ಓವರ್‌ಗಳಲ್ಲಿ 62 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಶಫಾಲಿ ವಿಕೆಟ್ ಪಡೆದ ಲಾರಾ ಡೆಲಾನಿ ಈ ಜತೆಯಾಟ ಮುರಿದರು.

ಬಳಿಕ ಬಂದ ಹರ್ಮನ್‌ಪ್ರೀತ್ ಕೌರ್ ಅವರು ಸ್ಮೃತಿಗೆ ತಕ್ಕ ಸಾಥ್ ನೀಡಿದರು. ಎರಡನೇ ವಿಕೆಟ್‌ಗೆ 52 ರನ್‌ಗಳು ಬಂದವು. ಆದರೆ ಇದರಲ್ಲಿ ಹರ್ಮನ್ ಕೊಡುಗೆ 13 ರನ್‌ಗಳು (20 ಎ.) ಮಾತ್ರ.

ಹರ್ಮನ್ ಮತ್ತು ರಿಚಾ ಘೋಷ್ (0) ಅವರನ್ನು ಬೆನ್ನುಬೆನ್ನಿಗೆ ಔಟ್ ಮಾಡಿದ ಐರ್ಲೆಂಡ್ ಬೌಲರ್‌ಗಳು ಪಂದ್ಯದ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರೂ, ಸ್ಮೃತಿ ಅದಕ್ಕೆ ಅವಕಾಶ ನೀಡಲಿಲ್ಲ. ಲೆಗ್ ಸ್ಪಿನ್ನರ್ ಕಾರಾ ಮರೆ ಅವರ ಎಸೆತವನ್ನು ಸಿಕ್ಸರ್‌ಗೆ ಅಟ್ಟಿ ಅರ್ಧಶತಕ ಪೂರೈಸಿದರು. ಆ ಬಳಿಕ ಅವರು ಬಿರುಸಿನ ಆಟಕ್ಕಿಳಿದರು. ಜಾರ್ಜಿಯಾ ಡೆಂಪ್ಸೆ ಓವರ್‌ನಲ್ಲಿ ಸತತ ಎರಡು ಬೌಂಡರಿ ಹೊಡೆದರಲ್ಲದೆ, ಡೆಲಾನಿ ಓವರ್‌ನಲ್ಲಿ ಸಿಕ್ಸರ್ ಹೊಡೆದರು.

ಕಳೆದ ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ಅರ್ಧಶತಕ ಗಳಿಸಿದ್ದ ಸ್ಮೃತಿಗೆ ಶತಕ ಗಳಿಸುವ ಅದೃಷ್ಟ ಇರಲಿಲ್ಲ. ಭರ್ಜರಿ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ಅರ್ಧಶತಕ ಪೂರೈಸುವ ಮುನ್ನ ಅವರಿಗೆ ಜೀವದಾನ ಲಭಿಸಿತ್ತು. ಕೊನೆಯಲ್ಲಿ ಜೆಮಿಮಾ ರಾಡ್ರಿಗಸ್ 12 ಎಸೆತಗಳಲ್ಲಿ 19 ರನ್ ಕಲೆಹಾಕಿದರು.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 155 (ಶಫಾಲಿ ವರ್ಮಾ 24, ಸ್ಮೃತಿ ಮಂದಾನ 87, ಹರ್ಮನ್‌ಪ್ರೀತ್ ಕೌರ್ 13, ಜೆಮಿಮಾ ರಾಡ್ರಿಗಸ್ 19, ಲಾರಾ ಡೆಲಾನಿ 33ಕ್ಕೆ 3, ಓರ್ಲಾ ಪ್ರೆಂಡರ್‌ಗಾಸ್ಟ್ 22ಕ್ಕೆ 2, ಅರ್ಲೀನ್ ಕೆಲಿ 28ಕ್ಕೆ 1).

ಐರ್ಲೆಂಡ್ 8.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 54 (ಗಾಬಿ ಲೆವಿಸ್ ಔಟಾಗದೆ 32, ಲಾರಾ ಡೆಲಾನಿ ಔಟಾಗದೆ 17) ಫಲಿತಾಂಶ: ಡಕ್ವರ್ಥ್ ಲೂಯಿಸ್ ನಿಯಮದಂತೆ ಭಾರತಕ್ಕೆ 5 ರನ್ ಗೆಲುವು. ಸೆಮಿಫೈನಲ್‌ಗೆ ಪ್ರವೇಶ

ಟೆನಿಸ್: ಪ್ರಧಾನ ಸುತ್ತಿಗೆ ಪ್ರಜ್ಞೇಶ್, ಜೇಸನ್ ಜಂಗ್

ಚುನ್ ಸಿನ್ ಶುಭಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ರಶ್ರೇಯಾಂಕದ ಆಟಗಾರ ಚೀನಾ ತೈಪೆಯ ಚುನ್ ಸಿನ್ ಸೆಂಗ್ ಮತ್ತು ಇಟಲಿಯ ಲುಕಾ ನಾರ್ಡಿ ಅವರು ಇಲ್ಲಿ ನಡೆಯುತ್ತಿರುವ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು.

ಕೆಎಸ್‌ಎಲ್‌ಟಿಎ ಕೋರ್ಟ್‌ನಲ್ಲಿ ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ ಚುನ್ ಅವರು 6–4, 6–4 ರಲ್ಲಿ ಪೋರ್ಚುಗಲ್‌ನ ಫ್ರೆಡೆರಿಕೊ ಫೆರೇರಾ ಸಿಲ್ವಾ ಅವರನ್ನು ಮಣಿಸಿದರು.

ಒಂದು ಗಂಟೆ 42 ನಿಮಿಷ ನಡೆದ ಹಣಾಹಣಿಯಲ್ಲಿ ಚುನ್ ಶಿಸ್ತಿನ ಆಟವಾಡಿದರು. ವೇಗದ ಸರ್ವ್ ಮತ್ತು ಚಾಣಾಕ್ಷ ರಿಟರ್ನ್‌ಗಳ ಮೂಲಕ ಎದುರಾಳಿಯನ್ನು ಒತ್ತಡಕ್ಕೆ ಸಿಲುಕಿಸಿದರು. ಅವರು ಆರು ಏಸ್‌ಗಳನ್ನು ಸಿಡಿಸಿದರು.

ನಾರ್ಡಿ ಅವರು 6–4, 6–4 ರಲ್ಲಿ ಸರ್ಬಿಯದ ಮಿಜಾನ್ ಜೆಕಿಚ್ ವಿರುದ್ಧ ಗೆದ್ದರು. ಪ್ರಧಾನ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಆಸ್ಟ್ರೇಲಿಯಾದ ಮಾರ್ಕ್ ಪೊಲ್ಮನ್ಸ್ 6–1, 6–2 ರಲ್ಲಿ ಇಟಲಿಯ ಫ್ರಾನ್ಸೆಸ್ಕೊ ಮಾಸ್ಟ್ರೆಲಿ ಅವರನ್ನು ಸೋಲಿಸಿದರು. ಇಲ್ಲಿ ಆರನೇ ಶ್ರೇಯಾಂಕ ಹೊಂದಿದ್ದ ಮಾಸ್ಟ್ರೆಲಿ ಸ್ವಯಂಕೃತ ತಪ್ಪುಗಳನ್ನೆಸಗಿ ಸೋಲಿನ ಹಾದಿ ಹಿಡಿದರು.


ಚೀನಾ ತೈಪೆಯ ಜೇಸನ್ ಜಂಗ್ ಅವರು ಚೆಂಡನ್ನು ರಿಟರ್ನ್ ಮಾಡಿದ ರೀತಿ –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌ಜಿ

ಪ್ರಧಾನ ಸುತ್ತಿಗೆ ಪ್ರಜ್ಞೇಶ್: ಭಾರತದ ಪ್ರಜ್ಞೇಶ್ ಗುಣೇಶ್ವರನ್ ಪ್ರಧಾನ ಹಂತ ಪ್ರವೇಶಿಸುವಲ್ಲಿ ಯಶಸ್ವಿಯಾದರು. ಅವರು ಅರ್ಹತಾ ಹಂತದ ಎರಡನೇ ಸುತ್ತಿನಲ್ಲಿ 6–4, 6–3 ರಲ್ಲಿ ಸ್ಪೇನ್‌ನ ಕಾರ್ಲೊಸ್ ಸ್ಯಾಂಚೆಜ್ ಜೊವೆರ್ ವಿರುದ್ಧ ಗೆದ್ದರು.

ಆದರೆ ಭಾರತದ ಇನ್ನೊಬ್ಬ ಆಟಗಾರ ಮುಕುಂದ್ ಶಶಿಕುಮಾರ್ ನಿರಾಸೆ ಅನುಭವಿಸಿದರು. ಅವರು 5–7, 4–6 ರಲ್ಲಿ ಚೀನಾ ತೈಪೆಯ ಜೇಸನ್ ಜಂಗ್ ಎದುರು ಪರಾಭವಗೊಂಡರು.

ಅರ್ಹತಾ ಹಂತದ ಇತರ ಪಂದ್ಯಗಳಲ್ಲಿ ಆಸ್ಟ್ರೇಲಿಯಾದ ಜೇಮ್ಸ್ ಮೆಕೇಬ್ 6–1, 6–3 ರಲ್ಲಿ ಜಪಾನ್‌ನ ಹಿರೊಕಿ ಮೊರಿಯಾ ವಿರುದ್ಧ; ಫ್ರಾನ್ಸ್‌ನ ಗಿಯೊವಾನಿ ಪೆರಿಕಾರ್ಡ್ 7–5, 6–1 ರಲ್ಲಿ ಜಪಾನ್‌ನ ಯಸುತಕ ಉಚಿಯಾಮ ವಿರುದ್ಧ ಜಯಿಸಿದರು.

ಬ್ಯೋನ್ ಬೋರ್ಗ್‌ಗೆ ಇಂದು ಸನ್ಮಾನ: ಸ್ವೀಡನ್‌ನ ದಿಗ್ಗಜ ಆಟಗಾರ ಬ್ಯೋನ್ ಬೋರ್ಗ್ ಮತ್ತು ಭಾರತದ ವಿಜಯ್ ಅಮೃತ್‌ರಾಜ್ ಅವರನ್ನು ಮಂಗಳವಾರ ಬೆಳಿಗ್ಗೆ ಕೆಎಸ್‌ಎಲ್‌ಟಿಎನಲ್ಲಿ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸನ್ಮಾನಿಸುವರು.

ಬ್ಯೋನ್ ಬೋರ್ಗ್ ಅವರ ಪುತ್ರ ಲಿಯೊ ಬೋರ್ಗ್ ಅವರು ಈ ಟೂರ್ನಿಯಲ್ಲಿ ಆಡುತ್ತಿದ್ದಾರೆ.

ಮಡಗಾಂವ್‌ನಲ್ಲಿ ಐಎಸ್‌ಎಲ್ ಫೈನಲ್

ನವದೆಹಲಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯ ಫೈನಲ್ ಪಂದ್ಯ ಮಾರ್ಚ್ 18 ರಂದು ಮಡಗಾಂವ್‌ನ ಜವಾಹರಲಾಲ್ ನೆಹರು ಕ್ರೀಡಾಂಗಣದಲ್ಲಿ ನಡೆಯಲಿದೆ.

ತಂಡಗಳ ಅಭ್ಯಾಸಕ್ಕೆ ಮೈದಾನಗಳು ಲಭ್ಯವಿರುವುದು ಮತ್ತು ಮೂಲಸೌಕರ್ಯವನ್ನು ನೋಡಿಕೊಂಡು ಫೈನಲ್ ಪಂದ್ಯದ ಆತಿಥ್ಯಕ್ಕೆ ಸಂಘಟಕರು ಗೋವಾವನ್ನು ಆಯ್ಕೆ ಮಾಡಿದ್ದಾರೆ.

ಟೂರ್ನಿಯ ಪ್ಲೇ ಆಫ್ ಪಂದ್ಯಗಳು ಮಾರ್ಚ್ 3 ರಿಂದ ನಡೆಯಲಿವೆ. ಮುಂಬೈ ಸಿಟಿ ಎಫ್‌ಸಿ, ಹೈದರಾಬಾದ್ ಎಫ್‌ಸಿ, ಎಟಿಕೆ ಮೋಹನ್ ಬಾಗನ್, ಬೆಂಗಳೂರು ಎಫ್‌ಸಿ ಮತ್ತು ಕೇರಳ ಬ್ಲಾಸ್ಟರ್ಸ್ ತಂಡಗಳು ಪ್ಲೇ ಆಫ್‌ಗೆ ಅರ್ಹತೆ ಪಡೆದುಕೊಂಡಿವೆ. ಇನ್ನೊಂದು ಸ್ಥಾನಕ್ಕಾಗಿ ಒಡಿಶಾ ಎಫ್‌ಸಿ ಮತ್ತು ಎಫ್‌ಸಿ ಗೋವಾ ನಡುವೆ ಪೈಪೋಟಿ ಇದೆ. ಪಾಯಿಂಟ್ಸ್ ಪಟ್ಟಿಯಲ್ಲಿ ಮೊದಲ ಎರಡು ಸ್ಥಾನಗಳನ್ನು ಪಡೆದಿರುವ ಮುಂಬೈ ಮತ್ತು ಹೈದರಾಬಾದ್ ತಂಡಗಳು ಸೆಮಿಗೆ ನೇರ ಅರ್ಹತೆ ಗಳಿಸಿವೆ. ಇನ್ನೆರಡು ಸ್ಥಾನಗಳನ್ನು ನಿರ್ಣಯಿಸಲು ಪ್ಲೇ ಆಫ್ ಪಂದ್ಯಗಳು ನಡೆಯಲಿವೆ.

ಶೂಟಿಂಗ್: ಭಾರತ ತಂಡಗಳಿಗೆ ಚಿನ್ನ

ಕೈರೊ, ಈಜಿಪ್ಟ್ (ಪಿಟಿಐ): ಭಾರತದ ಶೂಟರ್‌ಗಳು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯ ಮಿಶ್ರ ತಂಡ ವಿಭಾಗಗಳಲ್ಲಿ ಪಾರಮ್ಯ ಮೆರೆದರು. ಏರ್‌ಪಿಸ್ತೂಲ್ ಮತ್ತು ರೈಫಲ್ ಸ್ಪರ್ಧೆಗಳಲ್ಲಿ ಸೋಮವಾರ ಚಿನ್ನದ ಪದಕಗಳಿಗೆ ಕೊರಳೊಡ್ಡಿದರು.

ಭಾರತದ ಆರ್. ನರ್ಮದಾ ಹಾಗೂ ಹಾಲಿ ವಿಶ್ವ ಚಾಂಪಿಯನ್ ರುದ್ರಾಕ್ಷ್ ಬಾಳಾಸಾಹೇಬ್ ಪಾಟೀಲ ಜೊತೆಗೂಡಿ 10 ಮೀಟರ್ಸ್ ಏರ್ ರೈಫಲ್ ಸ್ಪರ್ಧೆಯ ಫೈನಲ್‌ನಲ್ಲಿ 16–6ರಿಂದ ಹಂಗರಿಯ ಈಸ್ಟರ್ ಡೆನೆಸ್ ಮತ್ತು ಈಸ್ತವಾನ್ ಪೆನಿ ಅವರನ್ನು ಪರಾಭವಗೊಳಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟರು.


ಚಿನ್ನ ಗೆದ್ದ ಆರ್. ನರ್ಮದಾ ಮತ್ತು ರುದ್ರಾಕ್ಷ್ ಬಾಳಾಸಾಹೇಬ್ ಪಾಟೀಲ– ಸಾಯ್ ಮೀಡಿಯಾ ಟ್ವಿಟರ್ ಚಿತ್ರ

ಜರ್ಮನಿಯ ಲಿಸಾ ಮುಲ್ಲರ್ ಮತ್ತು ಮ್ಯಾಕ್ಸಿಮಿಲಾನ್ ಡಲ್ಲಿಂಜರ್ ಮೂರನೇ ಸ್ಥಾನ ಗಳಿಸಿದರು.

10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಭಾರತದ ಇನ್ನೊಂದು ಜೋಡಿ ತಿಲೋತ್ತಮಾ ಸೇನ್–ಹೃದಯ್ ಹಜಾರಿಕಾ ಏಳನೇ ಸ್ಥಾನ ಗಳಿಸಿತು.

10 ಮೀ. ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯ ಫೈನಲ್‌ನಲ್ಲಿ ಭಾರತದ ವರುಣ್ ತೋಮರ್– ರಿಥಮ್ ಸಂಗ್ವಾನ್ 16–10ರಿಂದ ಸರ್ಬಿಯಾದ ಜೊರಾನಾ ಅರುನೊವಿಚ್– ಡಾಮಿರ್ ಮಿಕೆಚ್ ಅವರನ್ನು ಸೋಲಿಸಿ ಚಿನ್ನ ಜಯಿಸಿದರು. ಜರ್ಮನಿಯ ಸ್ಯಾಂಡ್ರಾ ರಿಟ್ಜ್– ರಾಬಿನ್ ವಾಲ್ಟರ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಈ ವಿಭಾಗದ ಸ್ಪರ್ಧೆಯಲ್ಲಿದ್ದ ಭಾರತದ ದಿವ್ಯಾ ಟಿ.ಎಸ್.– ಸರಬ್ಜೋತ್ ಸಿಂಗ್ ಐದನೇ ಸ್ಥಾನ ಗಳಿಸಿದರು.

ರ‍್ಯಾಂಕಿಂಗ್: ಸ್ಟೆಫಿ ದಾಖಲೆ ಸರಿಗಟ್ಟಿದ ಜೊಕೊವಿಚ್

ಪ್ಯಾರಿಸ್ (ಎಎಫ್‌ಪಿ): ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಎಟಿಪಿ ಟೆನಿಸ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯುವ ಮೂಲಕ ಮಾಜಿ ಆಟಗಾರ್ತಿ ಸ್ಟೆಫಿ ಗ್ರಾಫ್ ಅವರ ದಾಖಲೆಯನ್ನು ಸರಿಗಟ್ಟಿದ್ದಾರೆ.

ಸೋಮವಾರ ಬಿಡುಗಡೆಯಾದ ರ‍್ಯಾಂಕಿಂಗ್‌ನಲ್ಲಿ ಜೊಕೊವಿಚ್ ಅಗ್ರಸ್ಥಾನ ಉಳಿಸಿಕೊಂಡಿದ್ದಾರೆ. ಈ ಮೂಲಕ ದಾಖಲೆಯ 377 ವಾರಗಳ ಕಾಲ ಅಗ್ರಸ್ಥಾನದಲ್ಲಿದ್ದ ಸಾಧನೆ ಮಾಡಿದರು.

ಜರ್ಮನಿಯ ಸ್ಟೆಫಿ ಗ್ರಾಫ್ ಅವರು ಡಬ್ಲ್ಯುಟಿಎ ರ‍್ಯಾಂಕಿಂಗ್‌ನಲ್ಲಿ 377 ವಾರ ಅಗ್ರಸ್ಥಾನಲ್ಲಿದ್ದರು. ಇನ್ನೊಂದು ವಾರ ಕಳೆದರೆ ಸ್ಟೆಫಿ ಅವರ ದಾಖಲೆಯನ್ನು ಜೊಕೊವಿಚ್ ಮುರಿಯಲಿದ್ದಾರೆ.

ನೂತನ ರ‍್ಯಾಂಕಿಂಗ್ ಪಟ್ಟಿಯಲ್ಲಿ ಸ್ಪೇನ್‌ನ ಕಾರ್ಲೊಸ್ ಅಲ್ಕರಾಜ್ ಎರಡನೇ ಸ್ಥಾನದಲ್ಲಿದ್ದರೆ, ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ ಮೂರನೇ ಸ್ಥಾನದಲ್ಲಿದ್ದಾರೆ. ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರು ಮತ್ತೆ ಅಗ್ರ 10 ರಲ್ಲಿ ಕಾಣಿಸಿಕೊಂಡಿದ್ದು, ಎಂಟನೇ ಸ್ಥಾನದಲ್ಲಿದ್ದಾರೆ.


ನೊವಾಕ್ ಜೊಕೊವಿಚ್

ಈಜಿಪ್ಟ್ ಟೂರ್ನಿ: ಹಿಂದೆ ಸರಿದ ಪ್ರಮುಖ ಕುಸ್ತಿಪಟುಗಳು

ನವದೆಹಲಿ (ಪಿಟಿಐ): ಭಾರತದ ಪ್ರಮುಖ ಕುಸ್ತಿಪಟುಗಳು ಮಹತ್ವದ ಟೂರ್ನಿಗಳಿಂದ ಹಿಂದೆ ಸರಿಯುವುದನ್ನು ಮುಂದುವರಿಸಿದ್ದಾರೆ. ವಿನೇಶಾ ಪೋಗಟ್ ಹಾಗೂ ಬಜರಂಗ್ ಪೂನಿಯಾ ಸೇರಿದಂತೆ ಪ್ರಮುಖರು ಈಜಿಪ್ಟ್‌ನ ಅಲೆಕ್ಸಾಂಡ್ರಿಯಾದಲ್ಲಿ ಇದೇ 23ರಿಂದ ನಡೆಯಲಿರುವ ಇಬ್ರಾಹಿಂ ಮುಸ್ತಫಾ ರ‍್ಯಾಂಕಿಂಗ್ ಸಿರೀಸ್ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿಲ್ಲ.

ವಿನೇಶಾ, ಬಜರಂಗ್, ರವಿ ದಹಿಯಾ, ದೀಪಕ್ ಪೂನಿಯಾ, ಅನ್ಶು ಮಲಿಕ್, ಸಂಗೀತಾ ಪೋಗಟ್ ಈ ತಿಂಗಳಲ್ಲಿ 2ನೇ ಬಾರಿ ಪ್ರಮುಖ ಟೂರ್ನಿಯಿಂದ ಹಿಂದೆ ಸರಿದಿದ್ದಾರೆ. ಈ ಹಿಂದೆ ತಾವು ಸಂಪೂರ್ಣ ಸಿದ್ಧರಾಗಿಲ್ಲವೆಂದು ಜಾಗ್ರೆಬ್ ಓಪನ್‌ನಲ್ಲಿ ಕಣಕ್ಕಿಳಿದಿರಲಿಲ್ಲ.

ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ವ್ಯವಹಾರವನ್ನು ನೋಡಿಕೊಳ್ಳುತ್ತಿರುವ ಬಾಕ್ಸರ್ ಮೇರಿ ಕೋಮ್ ನೇತೃತ್ವದ ಮೇಲುಸ್ತುವಾರಿ ಸಮಿತಿಯು ಈಜಿಪ್ಟ್ ಟೂರ್ನಿಗೆ 27 ಕುಸ್ತಿಪಟುಗಳ ತಂಡವನ್ನು ಪ್ರಕಟಿಸಿದೆ.


ಬಜರಂಗ್ ಪೂನಿಯಾ– ಪಿಟಿಐ ಚಿತ್ರ

ಏಷ್ಯನ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗೆ ರ‍್ಯಾಂಕಿಂಗ್ ಪಾಯಿಂಟ್ಸ್ ಗಳಿಸಲು ಈಜಿಪ್ಟ್ ಟೂರ್ನಿ ನಿರ್ಣಾಯಕವಾಗಿದೆ.

ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್‌ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪ ಮಾಡಿದ್ದ ಪ್ರಮುಖ ಕುಸ್ತಿಪಟುಗಳು ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದ್ದರು. ಫೆಡರೇಷನ್‌ಅನ್ನು ವಿಸರ್ಜಿಸುವವರೆಗೆ ಮತ್ತು ಅಧ್ಯಕ್ಷರನ್ನು ವಜಾಗೊಳಿಸುವವರೆಗೆ ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಭಾಗವಹಿಸುವುದಿಲ್ಲ ಎಂದಿದ್ದರು.

ನಾನು ರೆಬೆಲ್ ಅಲ್ಲ: ಸಾನಿಯಾ

ದುಬೈ (ಪಿಟಿಐ): 'ಕೆಲವು ಜನರು ತನ್ನನ್ನು ರೆಬೆಲ್ ಎಂದರು; ಇನ್ನು ಕೆಲವರು ಹೊಸ ಹಾದಿ ಹುಟ್ಟುಹಾಕಿದ ಆಟಗಾರ್ತಿ ಎಂದರು; ಆದರೆ ನಾನು ಇದಾವುದೂ ಅಲ್ಲ. ನನ್ನದೇ ರೀತಿಯಲ್ಲಿ ಜೀವನ ಸಾಗಿಸಿದವಳು' ಎಂದು ಟೆನಿಸ್ ಆಟಗಾರ್ತಿ ಸಾನಿಯಾ ಮಿರ್ಜಾ ಹೇಳಿದ್ದಾರೆ.

ಭಾರತದ ಯಶಸ್ವಿ ಟೆನಿಸ್ ಆಟಗಾರ್ತಿ ಸಾನಿಯಾ ಅವರೊಂದಿಗೆ ಸುದ್ದಿಸಂಸ್ಥೆ ನಡೆಸಿದ ಸಂದರ್ಶನದಲ್ಲಿ ಈ ಮಾತುಗಳನ್ನಾಡಿದ್ದಾರೆ.

'ನಾನು ನಿಯಮಗಳನ್ನು ಉಲ್ಲಂಘಿಸಿದೆ ಎಂದು ಅನಿಸಿಲ್ಲ. ನಿಯಮಗಳನ್ನು ರೂಪಿಸುವ ಈ ಜನರು ಯಾರು? ಇದೇ ಸಂಪ್ರದಾಯ, ರೂಡಿ ಎಂದು ಹೇಳುವ ಇವರಾರು? ಇದು ಪೂರ್ವಾಗ್ರಹ' ಎಂದು ಸಾನಿಯಾ ಹೇಳಿದ್ದಾರೆ.


ಸಾನಿಯಾ ಮಿರ್ಜಾ– ಎಎಫ್‌ಪಿ ಚಿತ್ರ

'ನಾವೆಲ್ಲರೂ ಬೇರೆಬೇರೆ ಅಭಿಪ್ರಾಯಗಳನ್ನು ಹೊಂದಿದ್ದೇವೆ. ನಾವೆಲ್ಲರೂ ವಿಭಿನ್ನರು ಎಂದು ಒಮ್ಮೆ ಒಪ್ಪಿಕೊಂಡರೆ ಆ ವ್ಯತ್ಯಾಸಗಳೊಂದಿಗೆ ನಾವು ಬದುಕಬಹುದು. ಅದು ನಿಯಮಗಳನ್ನು ಮುರಿದಂತಾಗುವುದಿಲ್ಲ' ಎಂದಿದ್ದಾರೆ.

'ಮಹಿಳಾ ಕ್ರೀಡಾಪಟುಗಳನ್ನು ಬೆಂಬಲಿಸದೇ ಇರುವುದು ಕೇವಲ ಮುಸ್ಲಿಂ ಸಮುದಾಯಕ್ಕೆ ಸೀಮಿತವಾಗಿಲ್ಲ. ಎಲ್ಲ ಸಮುದಾಯದ ಯುವ ಮಹಿಳಾ ಅಥ್ಲೀಟ್‌ಗಳು ಈ ತಾರತಮ್ಯ ಎದುರಿಸುತ್ತಿದ್ದಾರೆ' ಎಂದು ಸಾನಿಯಾ ಹೇಳಿದ್ದಾರೆ.

ಡಬಲ್ಸ್ ವಿಭಾಗದಲ್ಲಿ ಆರು ಗ್ರ್ಯಾನ್ ಸ್ಲಾಮ್ ಟೂರ್ನಿಗಳ ಪ್ರಶಸ್ತಿ ಜಯಿಸಿರುವ ಸಾನಿಯಾ, ಭಾನುವಾರದಿಂದ ಆರಂಭವಾಗಿರುವ ದುಬೈ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಆಡಲಿದ್ದಾರೆ. ಇದು ಅವರ ವೃತ್ತಿಜೀವನದ ಕೊನೆಯ ಟೂರ್ನಿಯಾಗಿದೆ.

ಆರ್ಚರಿ ವಿಶ್ವಕಪ್: ದೀಪಿಕಾಗಿಲ್ಲ ಸ್ಥಾನ

ಸೋನಿಪತ್ (ಪಿಟಿಐ): ಪ್ರಮುಖ ಆರ್ಚರಿ ಪಟು ದೀಪಿಕಾ ಕುಮಾರಿ ಅವರು ಈ ವರ್ಷಾಂತ್ಯದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್, ವಿಶ್ವಕಪ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಿಗೆ ಭಾರತ ತಂಡದಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದಾರೆ.

ಮಾತೃತ್ವ ವಿರಾಮ ತೆಗೆದುಕೊಂಡಿದ್ದ ದೀಪಿಕಾ ಅವರು ತಂಡಕ್ಕೆ ಮರಳುವ ವಿಶ್ವಾಸದಲ್ಲಿದ್ದರು. ಆದರೆ ಇಲ್ಲಿ ಸೋಮವಾರ ಕೊನೆಗೊಂಡ ಮಹಿಳಾ ರಿಕರ್ವ್ ವಿಭಾಗದ ಅಂತಿಮ ಹಂತದ ಆಯ್ಕೆ ಟ್ರಯಲ್ಸ್‌ನಲ್ಲಿ ಅಗ್ರ 8ರೊಳಗಿನ ಸ್ಥಾನ ಪಡೆಯಲು ಅವರಿಗೆ ಸಾಧ್ಯವಾಗಲಿಲ್ಲ. ಕೋಮಲಿಕಾ ಬಾರಿ ಕೂಡ ಸ್ಥಾನ ಪಡೆಯಲು ವಿಫಲರಾದರು. ಭಜನ್ ಕೌರ್, ಅದಿತಿ ಜೈಸ್ವಾಲ್, ಅಂಕಿತಾ ಭಕತ್ ಮತ್ತು ಸಿಮ್ರನ್‌ಜೀತ್ ಕೌರ್ ಅವರು ಮೂರೂ ಪ್ರಮುಖ ಟೂರ್ನಿಗಳಿಗೆ ಸ್ಥಾನ ಗಿಟ್ಟಿಸಿದ್ದಾರೆ. ದೀಪಿಕಾ ಅವರ ಪತಿ ಅತನು ದಾಸ್ ಸ್ಥಾನ ಪಡೆದರು.

ಅಥ್ಲೆಟಿಕ್ಸ್: ದರ್ಶನ್, ಪ್ರಣತಿ ಮಿಂಚು

ಪ್ರಜಾವಾಣಿ ವಾರ್ತೆ

ಮೈಸೂರು: ತುಮಕೂರಿನ ಎಚ್.ಎ. ದರ್ಶನ್ ಮತ್ತು ಬೆಂಗಳೂರಿನ ಪ್ರಣತಿ ಅವರು ಇಲ್ಲಿ ನಡೆಯುತ್ತಿರುವ ಶಾಲಾ ಮಕ್ಕಳ ರಾಜ್ಯಮಟ್ಟದ ಅಥ್ಲೆಟಿಕ್ಸ್‌ನ 1,500 ಮೀ. ಓಟದಲ್ಲಿ ಚಿನ್ನ ಗೆದ್ದರು.

ಇಲ್ಲಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯೋಜಿಸಿರುವ ಪ್ರಾಥಮಿಕ ಹಾಗೂ ಪ್ರೌಢಶಾಲಾ ಮಕ್ಕಳ ಕ್ರೀಡಾಕೂಟದ 17 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ತುಮಕೂರಿನ ಸಿದ್ಧಗಂಗಾ ಪ್ರೌಢಶಾಲೆಯ ದರ್ಶನ್ 4 ನಿ. 21.4 ಸೆಕೆಂಡುಗಳಲ್ಲಿ ಗುರಿಮುಟ್ಟಿದರು. ಬಾಗಲಕೋಟೆಯ ಪ್ರಶಾಂತ್ ಎರಡನೇ ಹಾಗೂ ಕೊಡಗಿನ ಕ್ರೀಡಾ ಶಾಲೆಯ ಬಿ.ವಿ.ದೀಕ್ಷಿತ್ 3ನೇ ಸ್ಥಾನ ಪಡೆದರು.

17 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಬೆಂಗಳೂರು ಉತ್ತರದ ವಿದ್ಯಾನಗರದ ಸರ್ಕಾರಿ ಕ್ರೀಡಾ ಶಾಲೆಯ ಪ್ರಣತಿ, 4 ನಿ. 58.4 ಸೆ.ಗಳಲ್ಲಿ ಗುರಿಮುಟ್ಟಿ ಚಿನ್ನ ಗೆದ್ದರು. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ಕಡಬ ಸರ್ಕಾರಿ ಪ್ರೌಢಶಾಲೆಯ ಚರಿಷ್ಮಾ ಬೆಳ್ಳಿ ಹಾಗೂ ಹಾಸನದ ಚನ್ನರಾಯಪಟ್ಟಣ ಮೊರಾರ್ಜಿ ಶಾಲೆಯ ಟಿ.ವೈ. ಗಾನವಿ ಕಂಚಿನ ಪದಕ ಗೆದ್ದರು. ಡಿಸ್ಕಸ್ ಥ್ರೊನಲ್ಲಿ ಬೆಂಗಳೂರು ಉತ್ತರದ ದೀಪಾ ಪೂಜಾರಿ (28.3 ಮೀ.) ಚಿನ್ನ ಮತ್ತು ಟ್ರಿಪಲ್ ಜಂಪ್‌ನಲ್ಲಿ ಮಾನ್ಯಶ್ರೀ 2ನೇ ಸ್ಥಾನ ಪಡೆದರು.


ಎಚ್.ಎ. ದರ್ಶನ್


ಪ್ರಣತಿ

ತವರಿಗೆ ಮರಳಿದ ಪ್ಯಾಟ್ ಕಮಿನ್ಸ್

ನವದೆಹಲಿ (ಪಿಟಿಐ): ಕುಟುಂಬದ ಸದಸ್ಯರೊಬ್ಬರು ಅನಾರೋಗ್ಯಕ್ಕೆ ತುತ್ತಾಗಿರುವ ಕಾರಣ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಅವರು ತವರಿಗೆ ಮರಳಿದ್ದಾರೆ.

'ಕಮಿನ್ಸ್ ವೈಯಕ್ತಿಕ ಕಾರಣಗಳಿಂದಾಗಿ ತವರಿಗೆ ವಾಪಸಾಗಿದ್ದಾರೆ. ಕುಟುಂಬದ ಸದಸ್ಯರೊಬ್ಬರು ಗಂಭೀರ ಅನಾರೋಗ್ಯಕ್ಕೆ ಒಳಗಾಗಿದ್ದಾರೆ' ಎಂದು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಪ್ರಕಟಣೆ ತಿಳಿಸಿದೆ.

ಮಾರ್ಚ್ 1ರಂದು ಇಂದೋರ್‌ನಲ್ಲಿ ಆರಂಭವಾಗಲಿರುವ ಮೂರನೇ ಟೆಸ್ಟ್ ವೇಳೆಗೆ ಅವರು ತಂಡವನ್ನು ಸೇರಿಕೊಳ್ಳಲಿದ್ದಾರೆ ಎಂದು ಹೇಳಿದೆ.

ಹ್ಯಾಜಲ್‌ವುಡ್ ಅಲಭ್ಯ: ವೇಗದ ಬೌಲರ್ ಜೋಶ್ ಹ್ಯಾಜಲ್‌ವುಡ್ ಅವರು ಗಾಯದಿಂದ ಚೇತರಿಸಿಕೊಳ್ಳದ ಕಾರಣ ಸರಣಿಯ ಇನ್ನುಳಿದ ಪಂದ್ಯಗಳಿಗೂ ಅಲಭ್ಯರಾಗಿದ್ದಾರೆ ಎಂದು ಸಿಎ ಹೇಳಿದೆ.

ಸಂಕ್ಷಿಪ್ತ ಸುದ್ದಿ

400 ಮೀ. ಓಟ: ಬೊಲ್ ವಿಶ್ವದಾಖಲೆ

ಅಪೆಲ್‌ಡೂರ್ನ್, ನೆದರ್ಲೆಂಡ್ಸ್ (ರಾಯಿಟರ್ಸ್): ನೆದರ್ಲೆಂಡ್ಸ್‌ನ ಫೆಮ್ಕೆ ಬೊಲ್ ಅವರು ಒಳಾಂಗಣ ಅಥ್ಲೆಟಿಕ್ಸ್‌ನ 400 ಮೀಟರ್ಸ್ ಓಟದಲ್ಲಿ ವಿಶ್ವದಾಖಲೆ ಬರೆದಿದ್ದಾರೆ.



ಇಲ್ಲಿ ನಡೆದ ಡಚ್ ಒಳಾಂಗಣ ಚಾಂಪಿಯನ್‌ಷಿಪ್‌ನಲ್ಲಿ ಭಾನುವಾರ, ಮಹಿಳಾ ಅಥ್ಲೀಟ್ ಫೆಮ್ಕೆ 49.26 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಆ ಮೂಲಕ 1982ರ ಮಾರ್ಚ್ 7ರಂದು ಜೆಕ್ ಗಣರಾಜ್ಯದ ಜರ್ಮಿಲಾ ಕ್ರಾತೊಚಿಲೊವಾ ನಿರ್ಮಿಸಿದ್ದ ದಾಖಲೆ (49.59 ಸೆ.) ಮೀರಿದರು.

ಟೇಬಲ್ ಟೆನಿಸ್: ತನಿಷ್ಕಾಗೆ ಚಿನ್ನ

ಬೆಂಗಳೂರು: ಕರ್ನಾಟಕದ ತನಿಷ್ಕಾ ಕಪಿಲ್ ಕಾಲಭೈರವ್ ಅವರು ಕೇರಳದ ಆಲಪ್ಪುಳದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸಬ್‌ಜೂನಿಯರ್, ಕೆಡೆಟ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.



11 ವರ್ಷದೊಳಗಿನವರ ವಿಭಾಗದಲ್ಲಿ ಸ್ಪರ್ಧಿಸಿದ್ದ ತನಿಷ್ಕಾ ಫೈನಲ್ ಪಂದ್ಯದಲ್ಲಿ 11-4, 11-9, 6-11, 11-1ರಿಂದ ಪಶ್ಚಿಮ ಬಂಗಾಳದ ಸಾತುರ್ಯ ಬ್ಯಾನರ್ಜಿ ಅವರನ್ನು ಸೋಲಿಸಿದರು.